ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವಾಟ್ಸ್‌ಆ್ಯಪ್‌ನ ಹೊಸ ನೀತಿಗೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಹೀಗಾಗಿ ನೀತಿಯಲ್ಲಿ ಕೆಲ ಬದಲಾವಣೆ ಮಾಡಿ, ಜನರನ್ನು ಒಲಿಸಿಕೊಳ್ಳುವ ಕಸರತ್ತು ನಡೆಸುತ್ತಿದೆ



ಅನುಭವ ಮಂಟಪ
ಬೆಕ್ಕುಗಳಿಗೆ ಕಾಣುತ್ತಿರುವ ಬೆಣ್ಣೆ ಕಾಣದಿರುವ ದೊಣ್ಣೆ

ನಾಳೆಯಿಂದ ವಿಧಾನಮಂಡಲ ಅಧಿವೇಶನ 5

ಶಾಲೆಗಾಗಿ ನಿತ್ಯ 7 ಕಿ.ಮೀ 'ಪಾದಯಾತ್ರೆ' 4

ಸೆನ್ಸೆಕ್ಸ್	ನಿಫ್ಟಿ	₹/$
50,296 ▲	14,919 ▲	73.37 ▲

ಕೆಲಸದ ಆಮಿಷವೊಡ್ಡಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡ ಆರೋಪ

ರಮೇಶ್ ಜಾರಕಿಹೊಳಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಯುವತಿಯೊಬ್ಬಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡು ವಂಚಿಸಿದ ಆರೋಪದ ಮೇಲೆ ಜಲ ಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ವಿರುದ್ಧ ನಗರದ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಮಂಗಳವಾರ ದೂರು ಸಲ್ಲಿಕೆಯಾಗಿದೆ.

ಸಂತ್ರಸ್ತ ಯುವತಿಯ ಪರವಾಗಿ ದೂರು ಸಲ್ಲಿಸಿರುವ ನಾಗರಿಕ ಹಕ್ಕು ಹೋರಾಟ ಸಮಿತಿ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ, ಸಚಿವರು ಯುವತಿಯ ಜತೆ ಏಕಾಂತದಲ್ಲಿ ಇರುವ ವಿಡಿಯೊ ತುಣುಕುಗಳು, ಇಬ್ಬರ ನಡುವೆ ನಡೆದಿರುವ ದೂರವಾಣಿ ಸಂಭಾಷಣೆಯ ಆಡಿಯೊ ತುಣುಕುಗಳ ಸಿ.ಡಿಗಳನ್ನು ಸಲ್ಲಿಸಿದ್ದಾರೆ.

ದೂರು ದಾಖಲಾಗುತ್ತಿದ್ದಂತೆ ಸಚಿವರದ್ದು ಎನ್ನಲಾದ ವಿಡಿಯೊ, ಆಡಿಯೊ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಮೈಸೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ರಮೇಶ್ ಜಾರಕಿಹೊಳಿ, ಆರೋಪ ಹೊರಬೀಳುತ್ತಿದ್ದಂತೆ ಅಜ್ಞಾತವಾಗಿದ್ದರು. ರಾತ್ರಿ ಬೆಂಗಳೂರಿಗೆ ಮರಳಿದ್ದಾರೆ.

'ಉತ್ತರ ಕರ್ನಾಟಕ ಮೂಲದ ಬಡ ಕುಟುಂಬದ ಯುವತಿಯೊಬ್ಬರು ಕಿರುಚಿತ್ರವೊಂದರ ನಿರ್ಮಾಣಕ್ಕೆ ನೆರವು ಕೋರಿ ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಭೇಟಿಮಾಡಿದ್ದರು. ನಿನಗೆ ಕೆಪಿಟಿಸಿಎಲ್‌ನಲ್ಲಿ ಉದ್ಯೋಗ ಕೊಡಿಸುತ್ತೇನೆ ಎಂದು ಭರವಸೆ ನೀಡಿದ್ದರು. ಬಳಿಕ ಕಾಮತೃಷೆಗಾಗಿ ಬಳಸಿಕೊಂಡಿದ್ದು, ವಂಚಿಸಿದ್ದಾರೆ' ಎಂದು ದಿನೇಶ್ ಕಲ್ಲಹಳ್ಳಿ ದೂರಿನಲ್ಲಿ ಆರೋಪಿಸಿದ್ದಾರೆ.

'ಸಚಿವರ ಜತೆಗಿರುವುದನ್ನು ಸಂತ್ರಸ್ತ ಯುವತಿ ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದರು. ಈ ವಿಷಯ ತಿಳಿಯುತ್ತಿದ್ದಂತೆ ರಮೇಶ್ ಜಾರಕಿಹೊಳಿ ಅವರು ಯುವತಿಯ ಕುಟುಂಬಕ್ಕೆ ಜೀವ ಬೆದರಿಕೆ ಒಡ್ಡಿದ್ದರು. ಬಳಿಕ ನನ್ನನ್ನು ಸಂಪರ್ಕಿಸಿದ ಯುವತಿಯ ಕುಟುಂಬದವರು, ವಿಡಿಯೊ ಮತ್ತು ಆಡಿಯೊ ಸಿ.ಡಿಗಳನ್ನು ನೀಡಿದ್ದರು. ಅವುಗಳ ಸತ್ಯಾಸತ್ಯತೆ ಪರಿಶೀಲಿಸಿ, ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಸಂತ್ರಸ್ತ ಯುವತಿ ರಕ್ಷಣೆಗೆ ಮುಂದಾಗಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

2ನೇ ಪುಟ ನೋಡಿ

'ರಾಜೀನಾಮೆ ಕೊಡುವುದಿಲ್ಲ'



'ನಾನು ಯಾವುದೇ ತಪ್ಪು ಮಾಡಿಲ್ಲ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ಸಮಗ್ರ ತನಿಖೆ ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಆಗ್ರಹಿಸುತ್ತೇನೆ' ಎಂದು ಸಚಿವ ರಮೇಶ್ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ. ರಾತ್ರಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 'ಬುಧವಾರವೇ ದೆಹಲಿಗೆ ಹೋಗುತ್ತೇನೆ. ವಿಡಿಯೊದಲ್ಲಿರುವುದು ನಾನಲ್ಲ. ವಿಡಿಯೊವನ್ನು ಎಡಿಟ್ ಮಾಡಿ ನನ್ನ ಮುಖವನ್ನು ಸೇರಿಸಿದ್ದಾರೆ. ಎಲ್ಲವನ್ನೂ ವರಿಷ್ಠರಿಗೆ ಮನವರಿಕೆ ಮಾಡುವೆ' ಎಂದರು.

ಸಿದ್ದರಾಮಯ್ಯ ನಿವಾಸದಲ್ಲೂ ಸಭೆ

ರಮೇಶ ಜಾರಕಿಹೊಳಿ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಿವಾಸದಲ್ಲೂ ಮಂಗಳವಾರ ರಾತ್ರಿ ತುರ್ತು ಸಭೆ ನಡೆಸಿ, ಚರ್ಚಿಸಲಾಗಿದೆ. ಸಿದ್ದರಾಮಯ್ಯ ನಿವಾಸಕ್ಕೆ ದೌಡಾಯಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜಾರಕಿಹೊಳಿ ಪ್ರಕರಣದ ಕುರಿತು ಚರ್ಚಿಸಿದರು. ಶಾಸಕ ಜಮೀರ್ ಅಹಮ್ಮದ್ ಖಾನ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹಮ್ಮದ್ ಕೂಡ ಇದ್ದರು.

ಹೈಕಮಾಂಡ್ ತಲುಪಿದ ಆರೋಪ

ಸಚಿವ ರಮೇಶ ಜಾರಕಿಹೊಳಿ ವಿರುದ್ಧದ ಆರೋಪ ಬಿಜೆಪಿ ವರಿಷ್ಠರನ್ನೂ ತಲುಪಿದೆ. ಯಡಿಯೂರಪ್ಪ ಅವರ ಸಂಪುಟದ ಸದಸ್ಯರೊಬ್ಬರು ಜಲ ಸಂಪನ್ಮೂಲ ಸಚಿವರಿಗೆ ಸಂಬಂಧಿಸಿದ ವಿಡಿಯೊ, ಆಡಿಯೊ ಸಿ.ಡಿಗಳನ್ನು ವರಿಷ್ಠರಿಗೆ ತಲುಪಿಸಿದ್ದಾರೆ ಎಂಬ ಸುದ್ದಿ ಪಕ್ಷದ ವಲಯದಲ್ಲಿ ದಟ್ಟವಾಗಿದೆ.

ಪ್ರಕರಣದ ಕುರಿತು ಹುಬ್ಬಳ್ಳಿಯಲ್ಲಿ ಮಂಗಳವಾರ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ರಮೇಶ್ ಜಾರಕಿಹೊಳಿ ವಿರುದ್ಧ ಆರೋಪ ಕೇಳಿಬಂದಿರುವುದು ವರಿಷ್ಠರ ಗಮನಕ್ಕೂ ಬಂದಿದೆ. ಈ ಕುರಿತು ಪರಿಶೀಲನೆ ನಡೆಸಿ, ಸೂಕ್ತ ತೀರ್ಮಾನಕ್ಕೆ ಬರುತ್ತಾರೆ' ಎಂದರು.

ಸಚಿವರೊಂದಿಗೆ ಸಿಎಂ ಸಭೆ

ರಮೇಶ ಜಾರಕಿಹೊಳಿ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಕೇಳಿಬರುತ್ತಿದ್ದಂತೆಯೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಗೃಹ ಸಚಿವ ಬಸವರಾಜ ಬೊಮ್ಮಾಯಿ ಸೇರಿದಂತೆ ಕೆಲವು ಪ್ರಮುಖ ಸಚಿವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಚರ್ಚಿಸಿದರು. ಬುಧವಾರ ಸಚಿವ ಸಂಪುಟ ಸಭೆ ನಿಗದಿಯಾಗಿದ್ದು,ಈ ವಿಷಯ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ.

ರಾಜ್ಯದಿಂದ ಎಂಎಸ್‌ಪಿ ಅಭಿಯಾನ

ನವದೆಹಲಿ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗಾಗಿ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಕರ್ನಾಟಕದಲ್ಲಿ ಶುಕ್ರವಾರ ಚಾಲನೆ ನೀಡಲಾಗುವುದು ಎಂದು ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಹೇಳಿದ್ದಾರೆ. 3

ಮನೆಯಲ್ಲೇ ಲಸಿಕೆ ಪಡೆದ ಸಚಿವ!

ಹಾವೇರಿ: ಕೃಷಿ ಸಚಿವ ಬಿ.ಸಿ. ಪಾಟೀಲ ಅವರು ಹಿರೇಕೆರೂರಿನ ತಮ್ಮ ಮನೆಯಲ್ಲೇ ಸರ್ಕಾರಿ ವೈದ್ಯರಿಂದ ಕೋವಿಡ್ ಲಸಿಕೆ ಪಡೆದರು. ಸಚಿವರು ಮನೆಗೇ ವೈದ್ಯಕೀಯ ಸಿಬ್ಬಂದಿ ಕರೆಸಿಕೊಂಡು, ಲಸಿಕೆ ಹಾಕಿಸಿಕೊಂಡಿರುವುದು ಮಾರ್ಗಸೂಚಿಯ ಉಲ್ಲಂಘನೆ ಎಂಬ ಆರೋಪ ಕೇಳಿಬರುತ್ತಿದೆ. 3B

ಕಾಂಗ್ರೆಸ್‌ನಲ್ಲಿ ಮತ್ತೆ ಒಡಕು ದನಿ

ನವದೆಹಲಿ/ಕೋಲ್ಕತ್ತ (ಪಿಟಿಐ/ರಾಯಿಟರ್ಸ್): ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ್ದ ಕಾಂಗ್ರೆಸ್‌ನ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಪಕ್ಷವು ತಿರುಗೇಟು ನೀಡಿದೆ. ಮೋದಿಯನ್ನು ಹೊಗಳುತ್ತಾ ಸಮಯ ವ್ಯರ್ಥಮಾಡುವುದನ್ನು ನಿಲ್ಲಿಸಿ ಎಂದು ಪಕ್ಷವು ಹೇಳಿದೆ. 11

ಎಂಜಿನಿಯರಿಂಗ್ ಸಂಶೋಧನೆ, ಅಭಿವೃದ್ಧಿ ನೀತಿ ಬಿಡುಗಡೆ • ದೇಶದಲ್ಲೇ ಮೊದಲ ಪ್ರಯೋಗ

5 ವರ್ಷದಲ್ಲಿ 50 ಸಾವಿರ ಉದ್ಯೋಗ ಸೃಷ್ಟಿ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸುವ, ಮುಂದಿನ ಐದು ವರ್ಷಗಳಲ್ಲಿ 50 ಸಾವಿರ ಉದ್ಯೋಗ ಸೃಷ್ಟಿಸುವ ಗುರಿಯೊಂದಿಗೆ ರಾಜ್ಯ ಸರ್ಕಾರವು ಮಂಗಳವಾರ 'ಕರ್ನಾಟಕ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ–2021' ಬಿಡುಗಡೆ ಮಾಡಿದೆ.

ಈ ನೀತಿಯನ್ನು ರೂಪಿಸಿ ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ಕಂಪನಿಗಳಿಗೆ ವಿವಿಧ ವಿನಾಯಿತಿಗಳು ಹಾಗೂ ಅನುದಾನ ಒದಗಿಸಲು ರಾಜ್ಯ ಸರ್ಕಾರ ಆರಂಭಿಕವಾಗಿ ₹1,000 ಕೋಟಿ ಮೀಸಲಿಟ್ಟಿದೆ.

'ದೇಶದಲ್ಲಿ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ವಲಯವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದು 2018 ರಿಂದ ವಾರ್ಷಿಕವಾಗಿ ಸರಾಸರಿ ಶೇ 12.8 ಬೆಳವಣಿಗೆ ಸಾಧಿಸುತ್ತಿದೆ. ಇದೇ ವೇಳೆ ಈ ವಲಯದ ಮೇಲಿನ ಜಾಗತಿಕ ವೆಚ್ಚವು 2025ರ ಹೊತ್ತಿಗೆ ₹146 ಲಕ್ಷ ಕೋಟಿ (2 ಟ್ರಿಲಿಯನ್ ಡಾಲರ್) ಆಗುವ ಅಂದಾಜಿದ್ದು, ಇದಕ್ಕನುಗುಣವಾಗಿ ರಾಜ್ಯವನ್ನು ಸಜ್ಜುಗೊಳಿಸುವ ಉದ್ದೇಶವನ್ನು ಈ ನೀತಿಯು ಹೊಂದಿದೆ' ಎಂದು ವಿಜ್ಞಾನ, ತಂತ್ರಜ್ಞಾನ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ನೀತಿ ಬಿಡುಗಡೆಗೊಳಿಸಿ ತಿಳಿಸಿದರು.

5ನೇ ಪುಟ ನೋಡಿ

ಇಂಟರ್ನ್‌ಶಿಪ್ ಅವಧಿ ಹೆಚ್ಚಳ

'ಎಂಜಿನಿಯರಿಂಗ್ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಅವಧಿಯನ್ನು ಈಗಿನ 9 ತಿಂಗಳಿನಿಂದ ಒಂದು ವರ್ಷಕ್ಕೆ ಹೆಚ್ಚಿಸಲಾಗಿದೆ. ಅದನ್ನು ಕೈಗಾರಿಕೆಗಳಲ್ಲಿಯೇ ಮುಗಿಸಬೇಕೆಂಬ ಯೋಜನೆ ರೂಪಿಸಲಾಗಿದೆ. ಇದು ಕಡ್ಡಾಯವೂ ಹೌದು. ಇದಕ್ಕೆ ಉದ್ಯಮಿಗಳು ಸಹಕರಿಸಬೇಕು' ಎಂದು ಅಶ್ವತ್ಥನಾರಾಯಣ ಹೇಳಿದರು.

'ಕೈಗಾರಿಕೆ ಹಾಗೂ ಪ್ರಗತಿಗೆ ಪೂರಕವಾಗಿ ಕೈಗಾರಿಕಾ ತರಬೇತಿ ಶಿಕ್ಷಣಕ್ಕೆ ಸರ್ಕಾರ ಆದ್ಯತೆ ನೀಡುತ್ತಿದೆ. ಕೈಗಾರಿಕೆಗಳಿಗೆ ಕೌಶಲಯುಕ್ತ ಮಾನವ ಸಂಪನ್ಮೂಲವನ್ನು ಸ್ಥಳೀಯವಾಗಿಯೇ ಒದಗಿಸುವ ಗುರಿ ಹೊಂದಿದೆ. ಪೂರಕವಾಗಿ ರಾಜ್ಯದಲ್ಲಿನ 150 ಐಟಿಐ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ₹5,000 ಕೋಟಿ ವೆಚ್ಚ ಮಾಡಲಾಗುತ್ತಿದೆ' ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ
ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ–7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ರಾಜಕೀಯ ರಸಪ್ರಸಂಗ
ಯಡಿಯೂರಪ್ಪ; ದೂರ್ವಾಸ ಕೋಪ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಶಿಕ್ಷಣ ನೀತಿಯಲ್ಲಿ ಮೂಲ ವಿಜ್ಞಾನಕ್ಕೆ ಒತ್ತು' 4

ಚಿನಕುರಳಿ

ಪ್ರಕಾಶ್ ಶೆಟ್ಟಿ



6ರವರೆಗೆ ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಹೈದರಾಬಾದ್‌ನ ಎಂ.ಈಶ್ವರಯ್ಯ ಆರ್ಟ್ ಗ್ಯಾಲರಿಯು ಮಾ.6ರವರೆಗೆ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಅಖಿಲ ಭಾರತ ಕಲಾ ಪ್ರದರ್ಶನ ಏರ್ಪಡಿಸಿದೆ.

'ಈಕಲಾಪ್ರದರ್ಶನದಲ್ಲಿ ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಪಶ್ಚಿಮ ಬಂಗಾಳ, ಒಡಿಶಾ, ದೆಹಲಿಯ ಸುಮಾರು 42 ಕಲಾವಿದರು ರಚಿಸಿರುವ ಸುಮಾರು 112 ವರ್ಣಚಿತ್ರಗಳನ್ನು ಪ್ರದರ್ಶಿಸಲಾಗಿದೆ' ಎಂದು ಈಶ್ವರಯ್ಯ ಆರ್ಟ್ ಗ್ಯಾಲರಿಯ ನಿರ್ದೇಶಕ ಎಂ. ಸಂಜಯ್ ಕುಮಾರ್ ತಿಳಿಸಿದರು.

'ಸಮಕಾಲೀನ ಕಲಾವಿದರಾದ ಕರ್ನಾಟಕದ ಮಹೇಶಬಾಬು ಅಬ್ಬಾಜಿ ಬೆಲ್ಲಿ, ಹಿರಿಯ ಕಲಾವಿದ ಸುಬಾಶ್ ಬಾಬು ರಾವೂರಿ, ಅಮಿಲಾ ರೆಡ್ಡಿ, ಅನ್ನಪೂರ್ಣ,ರಾಮು ಮಾರೆಡು, ಸತ್ಯ ಗನ್ನೋಜು, ಬಾಲಭಕ್ತ ರಾಜ್ ಅವರ ಕಲಾ ಕೃತಿಗಳನ್ನೂ ಪ್ರದರ್ಶನಕ್ಕೆ ಇಡಲಾಗಿದೆ' ಎಂದರು.

ಕಮಿಷನರ್ ಕಚೇರಿಯಿಂದ ಕಬ್ಬನ್ ಪಾರ್ಕ್ ಠಾಣೆಗೆ ದೂರುದಾರ • ಸಿ.ಡಿ. ದೃಶ್ಯಗಳ ಸಹಿತ ದೂರು

ಸಂತ್ರಸ್ತೆ ಹೇಳಿಕೆ ನಂತರವೇ ಎಫ್‌ಐಆರ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ರಮೇಶ ಜಾರಕಿಹೊಳಿ ಮೇಲೆ ಕೇಳಿಬಂದಿರುವ ಲೈಂಗಿಕ ದೌರ್ಜನ್ಯ ಆರೋಪದ ಬಗ್ಗೆ ಸಂತ್ರಸ್ತೆ ಹೇಳಿಕೆ ಪಡೆದ ಬಳಿಕವೇ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಳ್ಳುವ ಸಾಧ್ಯತೆ ಇದೆ.

'ಪ್ರಕರಣದಲ್ಲಿ ಮೂರನೇ ವ್ಯಕ್ತಿ ದಿನೇಶ್ ಕಲ್ಲಹಳ್ಳಿ ದೂರು ನೀಡಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯ ಹೇಳಿಕೆಯೇ ಮತ್ತಷ್ಟು ಪಡೆದುಕೊಳ್ಳಬೇಕಿದೆ. ಹೀಗಾಗಿ, ಹೇಳಿಕೆ ಪಡೆಯಲು ಪ್ರಯತ್ನಿಸುತ್ತಿದ್ದೇವೆ. ಹೇಳಿಕೆ ದಾಖಲಾದ ನಂತರವೇ ಮುಂದಿನ ಕಾನೂನು ಕ್ರಮ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಉತ್ತರ ಕರ್ನಾಟಕದ ಯುವತಿ, ಬೆಂಗಳೂರಿನಲ್ಲಿ ವಾಸವಿದ್ದರು. ಸಿ.ಡಿ. ಬಗ್ಗೆ ದೂರು ಸ್ವೀಕರಿಸಿರುವ ಪೊಲೀಸರು, ಇದೀಗ ಯುವತಿ ಹಾಗೂ ಆಕೆಯ ಕುಟುಂಬದವರಿಗಾಗಿ ಹುಡುಕಾಟ ಆರಂಭಿಸಿದ್ದಾರೆ'.

'ಸಂತ್ರಸ್ತೆ ಪರವಾಗಿ ದೂರು ನೀಡಿರುವ ದಿನೇಶ್, 'ಸಚಿವ ರಮೇಶ ಜಾರಕಿಹೊಳಿ ಆರೋಪಿ' ಎಂದು ಹೇಳಿದ್ದಾರೆ. ಆದರೆ, ಪ್ರಕರಣದ ಸಂತ್ರಸ್ತೆ ಈ ಬಗ್ಗೆ ಸ್ಪಷ್ಟನೆ ನೀಡಬೇಕು. ಹೀಗಾಗಿ ಅವರ ಹಾಗೂ ಅವರ ಕುಟುಂಬದವರ ಹೇಳಿಕೆ ಪಡೆಯಬೇಕು. ಹೇಳಿಕೆ ಪಡೆದ ನಂತರವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಪ್ರಕರಣದ ಮಾಹಿತಿ ಕಲೆ ಹಾಕಲೆಂದು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, ಈಗಾಗಲೇ ವಿಶೇಷ ತಂಡವೊಂದನ್ನು ರಚಿಸಿದ್ದಾರೆ.

'ಸಂತ್ರಸ್ತೆ ಸಂಬಂಧಿ ನೀಡಿದ ಮಾಹಿತಿ ಆಧರಿಸಿ ದೂರು'

'ಪ್ರಭಾವಿ ಸಚಿವರಿಂದ ಯುವತಿಗೆ ಆದ ಅನ್ಯಾಯದ ಬಗ್ಗೆ ಕುಟುಂಬದ ಸದಸ್ಯರೊಬ್ಬರು ಮಾಹಿತಿ ನೀಡಿದ್ದರು. ಅದರನ್ವಯ ವಕೀಲರ ಸಲಹೆ ಪಡೆದು ಠಾಣೆಗೆ ದೂರು ನೀಡಿದ್ದೇನೆ' ಎಂದು ನಾಗರಿಕ ಹಕ್ಕು ಹೋರಾಟ ಸಮಿತಿಯ ಅಧ್ಯಕ್ಷ ದಿನೇಶ್ ಕಲ್ಲಹಳ್ಳಿ ತಿಳಿಸಿದರು.

ಕಬ್ಬನ್ ಪಾರ್ಕ್ ಠಾಣೆಗೆ ಮಂಗಳವಾರ ರಾತ್ರಿ ದೂರು ನೀಡಿ ಹೊರಬಂದ ದಿನೇಶ್, 'ನೊಂದ ಯುವತಿಗೆ ನ್ಯಾಯ ಕೊಡಿಸಲು ಹೋರಾಟ ಆರಂಭಿಸಿದ್ದೇನೆ. ಪೊಲೀಸರು ಹಾಗೂ ನ್ಯಾಯಾಂಗದ ಮೇಲೆ ವಿಶ್ವಾಸವಿದೆ' ಎಂದರು.

'ಯುವತಿ ಹಾಗೂ ಆಕೆಯ ಕುಟುಂಬದವರಿಗೆ ಸಚಿವರಿಂದ ಬೆದರಿಕೆ ಇದೆ. ಸಂತ್ರಸ್ತೆ ಹಾಗೂ ಕುಟುಂಬದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಬಹಿರಂಗವಾಗಿ ಹೇಳಲು ಆಗದು' ಎಂದೂ ಹೇಳಿದರು.

'ದೂರು ನೀಡುವ ವೇಳೆ ಪೊಲೀಸರು ಹಲವು ಮಾಹಿತಿ ಕೇಳಿದ್ದಾರೆ. ತನಿಖೆಗೆ ಅಗತ್ಯವಾದ ಎಲ್ಲ ಮಾಹಿತಿ ನೀಡಿದ್ದೇನೆ. ಮುಂದೆಯೂ ನೀಡುತ್ತೇನೆ' ಎಂದರು.

ಸೋಮವಾರ ಸಿ.ಡಿ ಸಿಕ್ಕಿತ್ತು: 'ಸಚಿವರು ಯುವತಿ ಜೊತೆಗಿದ್ದ ಹಾಗೂ ಸಂಭಾಷಣೆ ನಡೆಸಿದ್ದ ದೃಶ್ಯಗಳ ಸಿ.ಡಿ, ಸೋಮವಾರ ಬೆಳಿಗ್ಗೆ ಸಿಕ್ಕಿತ್ತು. ವಕೀಲರಿಂದ ಕಾನೂನು ಸಲಹೆ ಪಡೆದು, ಎಲ್ಲ ಮಾಹಿತಿ ಕಲೆ ಹಾಕಿ ದೂರು ನೀಡಿದ್ದೇನೆ' ಎಂದೂ ದಿನೇಶ್ ಹೇಳಿದರು.

ಕಮಿಷನರ್ ಕಚೇರಿಗೆ ಹೋಗಿದ್ದರು: 'ಪ್ರಭಾವಿ ಸಚಿವರಾಗಿದ್ದರಿಂದ ಸಿ.ಡಿ ಬಗ್ಗೆ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡುತ್ತೇನೆ' ಎಂದು ಮಂಗಳವಾರ ಮಧ್ಯಾಹ್ನವೇ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದ ದಿನೇಶ್, 'ಇನ್‌ಫೆಂಟ್ರಿ ರಸ್ತೆಯಲ್ಲಿರುವ ಕಮಿಷನರ್ ಕಚೇರಿಗೆ ಸಂಜೆ ಬಂದಿದ್ದರು.

ದೂರನ್ನು ಪರಿಶೀಲಿಸಿದ ಕಮಿಷನರ್, ಕಬ್ಬನ್ ಪಾರ್ಕ್ ಠಾಣೆಗೆ ಹೋಗುವಂತೆ ತಿಳಿಸಿದ್ದರು. ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ ನಂತರ ಬಿಗಿ ಭದ್ರತೆಯಲ್ಲಿ ದಿನೇಶ್ ಸ್ಥಳದಿಂದ ತೆರಳಿದರು.

ಸುದ್ದಿ 2 ನಿಮಿಷ

ಪರಿಷತ್ ಸದಸ್ಯರಿಂದ 496 ಪ್ರಶ್ನೆ– ಬಸವರಾಜ ಹೊರಟ್ಟಿ

ಬೆಂಗಳೂರು: 'ಇದೇ 4ರಿಂದ 31ರವರೆಗೆ ನಡೆಯಲಿರುವ ವಿಧಾನ ಪರಿಷತ್ ಅಧಿವೇಶನದಲ್ಲಿ ಮಂಡಿಸಲು ಒಟ್ಟು 496 ಪ್ರಶ್ನೆಗಳು ಬಂದಿವೆ. 45 ಚುಕ್ಕೆ ಗುರುತಿನ ಪ್ರಶ್ನೆಗಳು, 265 ಚುಕ್ಕೆರಹಿತ ಪ್ರಶ್ನೆಗಳು ಹಾಗೂ ನಿಯಮ 72ರಡಿ 5 ಸೂಚನೆಗಳು ಸ್ವೀಕೃತಗೊಂಡಿವೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ಅನ್ವಯ ಅಧಿವೇಶನ ಅವಧಿಯಲ್ಲಿ ಸೂಚನಾ ಪತ್ರಗಳನ್ನು ಹಾಗೂ ಸದಸ್ಯರ ಪ್ರಶ್ನೆಗಳನ್ನು ಪರಿಗಣಿಸಲಾಗುವುದು. ದಿನವೊಂದಕ್ಕೆ ಗರಿಷ್ಠ ಐದು ಪ್ರಶ್ನೆಗಳನ್ನು ನೀಡಲು ಸದಸ್ಯರಿಗೆ ಅವಕಾಶವಿದೆ' ಎಂದರು.

'ಚುಕ್ಕೆ ಗುರುತಿನ ಪ್ರಶ್ನೆಯನ್ನು ಮಂಡಿಸಿದ ಸದಸ್ಯರು ಗೈರು ಹಾಜರಾಗುವ ಸಂದರ್ಭದಲ್ಲಿ ಅವರ ಹೆಸರಿನಲ್ಲಿರುವ ಪ್ರಶ್ನೆಯನ್ನು ಬೇರೊಬ್ಬ ಸದಸ್ಯರು ಕೇಳಲು ಪತ್ರ ಮೂಲಕ ಸೂಕ್ತ ಕಾರಣ ನೀಡಿ ಕಡ್ಡಾಯವಾಗಿ ಅನುಮತಿ ಪಡೆಯಬೇಕು' ಎಂದು ಸೂಚಿಸಿದರು.

ಮೈದಾನದಲ್ಲಿ ಸೈಕಲ್ ನಿಲುಗಡೆ: ಸ್ಥಳೀಯರ ಆಕ್ರೋಶ



ಬೆಂಗಳೂರು: ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ 'ಯೂಲು' ಕಂಪನಿಯ ಸೈಕಲ್‌ಗಳನ್ನು ನಿಲುಗಡೆ ಮಾಡಿರುವುದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಇತ್ತೀಚೆಗೆ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ನಗರಕ್ಕೆ ಭೇಟಿ ನೀಡಿದ್ದರು. ಈ ವೇಳೆ ಸಂಸದ ತೇಜಸ್ವಿ ಸೂರ್ಯ ನೇತೃತ್ವದಲ್ಲಿ 'ಫಿಟ್ ಇಂಡಿಯಾ' ಅಂಗವಾಗಿ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿತ್ತು. ಜಾಥಾ ಮುಗಿದ ಬಳಿಕ ಸೈಕಲ್‌ಗಳನ್ನು ಮೈದಾನದಲ್ಲೇ ಬಿಟ್ಟು ಹೋಗಲಾಗಿದೆ. ಇದರಿಂದ ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್ ಹಾಗೂ ಕ್ರಿಕೆಟ್ ಅಭ್ಯಾಸ ಮಾಡುವ ಕ್ರೀಡಾಪಟುಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಬೆಳಿಗ್ಗೆ ಮತ್ತು ಸಂಜೆ ವಾಯು ವಿಹಾರಕ್ಕೆ ಬರುವ ಹಿರಿಯ ನಾಗರಿಕರಿಗೂ ಇದರಿಂದ ಕಿರಿಕಿರಿಯಾಗುತ್ತಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಅಧಿಕಾರಿಗಳು ಈ ಬಗ್ಗೆ ಗಮನ ಹರಿಸುತ್ತಿಲ್ಲ. ಕಂಪನಿಯವರೂ ಸೈಕಲ್‌ಗಳನ್ನು ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿಲ್ಲ' ಎಂದರು.

'ಸೈಬರ್ ದಾಳಿ ಕಾರಣವಲ್ಲ'

ನವದೆಹಲಿ: ಮುಂಬೈನಲ್ಲಿ ವಿದ್ಯುತ್ ಗ್ರಿಡ್ ವೈಫಲ್ಯಕ್ಕೆ ಸೈಬರ್ ದಾಳಿ ಕಾರಣ ಎಂಬ ವರದಿಗಳನ್ನು ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಅಲ್ಲಗಳೆದಿದ್ದಾರೆ. ಗ್ರಿಡ್ ವೈಫಲ್ಯ ಮತ್ತು ಸೈಬರ್ ದಾಳಿಗೆ ನಂಟು ಕಲ್ಪಿಸುವ ಯಾವುದೇ ಪುರಾವೆ ಇಲ್ಲ ಎಂದಿದ್ದಾರೆ.

ಕಳೆದ ಅ. 2ರ ವಿದ್ಯುತ್ ಗ್ರಿಡ್ ವೈಫಲ್ಯದ ಬಗ್ಗೆ ಎರಡು ತಂಡಗಳು ತನಿಖೆ ನಡೆಸಿವೆ. ಈ ವೈಫಲ್ಯಕ್ಕೆ ಮಾನವ ಲೋಪ ಕಾರಣವೇ ಹೊರತು ಸೈಬರ್ ದಾಳಿ ಅಲ್ಲ ಎಂದು ಈ ಎರಡೂ ತಂಡಗಳು ವರದಿ ನೀಡಿವೆ ಎಂದು ಸಚಿವರು ಮಾಹಿತಿ ಕೊಟ್ಟಿದ್ದಾರೆ.

ಗ್ರಿಡ್‌ನ ಕಂಪ್ಯೂಟರ್ ವ್ಯವಸ್ಥೆಯನ್ನು ಹ್ಯಾಕ್ ಮಾಡಲು ಹ್ಯಾಕರ್‌ಗಳು ಯತ್ನಿಸಿದ್ದಾರೆ ಎಂಬುದನ್ನು ಸಿಂಗ್ ಒಪ್ಪಿಕೊಂಡಿದ್ದಾರೆ. ಉತ್ತರ ಮತ್ತು ದಕ್ಷಿಣದ ಪ್ರಾದೇಶಿಕ ಲೋಡ್ ಹಂಚಿಕೆ ಕೇಂದ್ರಗಳ ಕಂಪ್ಯೂಟರ್ ಜಾಲದ ಮೇಲೆ ಸೈಬರ್ ದಾಳಿ ನಡೆದಿದೆ. ಆದರೆ, ಈ ದಾಳಿಯು ಕಾರ್ಯನಿರ್ವಹಣಾ ವ್ಯವಸ್ಥೆಯನ್ನು ತಲುಪಲು ಸಾಧ್ಯವಾಗಿಲ್ಲ ಎಂದು ಅವರು ತಿಳಿಸಿದ್ದಾರೆ.

ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ದೂರು

ಒಂದನೇ ಪುಟದಿಂದ

ದಿನೇಶ್ ಕಲ್ಲಹಳ್ಳಿ ಅವರು ವಿಡಿಯೊ, ಆಡಿಯೊ ತುಣುಕುಗಳು ಮತ್ತು ದೂರಿನ ಪ್ರತಿಯೊಂದಿಗೆ ಮಂಗಳವಾರ ಸಂಜೆ ನಗರ ಪೊಲೀಸ್ ಕಮಿಷನರ್ ಕಚೇರಿಗೆ ಹೋಗಿದ್ದರು. ಕಮಿಷನರ್ ಕಮಲ್ ಪಂತ್ ಅವರಿಗೆ ನೇರವಾಗಿ ದೂರು ಸಲ್ಲಿಸಲು ಯತ್ನಿಸಿದರು. ಆದರೆ, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕಮಿಷನರ್ ಸೂಚಿಸಿದರು. ಬಳಿಕ ಅಲ್ಲಿಗೆ ಬಂದ ದಿನೇಶ್, ಸಚಿವರ ವಿರುದ್ಧ ದೂರು ನೀಡಿದರು.

ದಿನೇಶ್ ಅವರಿಂದ ದೂರು ಸ್ವೀಕರಿಸಿದ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ದಿನೇಶ್ ಅವರ ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡರು. ಸಚಿವರು ಮತ್ತು ಯುವತಿಗೆ ಸಂಬಂಧಿಸಿದ ವಿಡಿಯೊ, ಆಡಿಯೊ ಸಿ.ಡಿಗಳು ಹೇಗೆ ಲಭ್ಯವಾದವು? ಯಾರು ತಲುಪಿಸಿದರು? ಸಂತ್ರಸ್ತರ ಬದಲು ದೂರು ನೀಡಲು ಬಂದಿದ್ದೇಕೆ? ಎಂಬ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಂಡಿದ್ದಾರೆ.

ಸಚಿವರ ವಜಾಕ್ಕೆ ಕಾಂಗ್ರೆಸ್ ಆಗ್ರಹ

'ಕೆಲಸದ ಆಮಿಷವೊಡ್ಡಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡಿರುವ ರಮೇಶ ಜಾರಕಿಹೊಳಿ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಸಂಜೆ ಪ್ರತಿಭಟನೆ ನಡೆಸಿದರು.

ಆನಂದರಾವ್ ವೃತ್ತದಲ್ಲಿರುವ ಕಾಂಗ್ರೆಸ್ ಕಚೇರಿ ಎದುರು ಸೇರಿದ್ದ ಕಾರ್ಯಕರ್ತರು, ರಮೇಶ ಜಾರಕಿಹೊಳಿ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು. 'ಅಮಾಯಕ ಹೆಣ್ಣು ಮಕ್ಕಳ ಜೀವನ ಹಾಳು ಮಾಡುತ್ತಿರುವ ಇಂಥವರೇ ಬಿಜೆಪಿ ಪಕ್ಷದಲ್ಲಿ ಹೆಚ್ಚಿದ್ದಾರೆ. ಈ ಬಗ್ಗೆ ನಾಯಕರು ಕೂಡಲೇ ಮಾತನಾಡಬೇಕು. ಜಾರಕಿಹೊಳಿ ಅವರನ್ನು ವಜಾ ಮಾಡದಿದ್ದರೆ, ಮುಖ್ಯಮಂತ್ರಿ ಕಚೇರಿ ಎದುರು ಧರಣಿ ಆರಂಭಿಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

'ಸಂತ್ರಸ್ತೆ ಹೇಳಿಕೆ ನಂತರ ಕ್ರಮ: ಈ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, 'ದಿನೇಶ್ ಎಂಬುವವರು ಠಾಣೆಗೆ ಬಂದು ಒಂದು ದೂರು ನೀಡಿದ್ದಾರೆ. ತನಿಖೆ ಆರಂಭಿಸಲಾಗಿದ್ದು, ಸಂತ್ರಸ್ತೆ ಮತ್ತು ಅವರ ಕುಟುಂಬವನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದರು.

'ಸಚಿವರು ಬೆದರಿಕೆ ಒಡ್ಡಿದ್ದಾರೆ ಎಂದು ಸಂತ್ರಸ್ತೆ ಹಾಗೂ ಅವರ ಕುಟುಂಬದವರು ತಮಗೆ ತಿಳಿಸಿದ್ದಾರೆ ಎಂದು ದೂರುದಾರರು ತಿಳಿಸಿದ್ದಾರೆ. ಸಂತ್ರಸ್ತೆ ಮತ್ತು ಅವರ ಕುಟುಂಬದವರಿಂದ ಹೆಚ್ಚಿನ ವಿವರ ಪಡೆಯಬೇಕಿದೆ. ನಾವೇ ಅವರನ್ನು ಸಂಪರ್ಕಿಸಿ, ಮಾಹಿತಿ ಪಡೆದು ಕ್ರಮ ಜರುಗಿಸುತ್ತೇವೆ' ಎಂದು ತಿಳಿಸಿದರು.

ಹಾಲಪ್ಪ, ಮೇಟಿ ಪ್ರಕರಣಗಳ ನೆನಪು

2010ರಲ್ಲಿ ಯಡಿಯೂರಪ್ಪ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಾಗಿದ್ದ ಹರತಾಳು ಹಾಲಪ್ಪ ವಿರುದ್ಧ ಮಹಿಳೆಯೊಬ್ಬರನ್ನು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಆರೋಪ ಕೇಳಿಬಂದಿತ್ತು. ತಕ್ಷಣವೇ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ, ಈ ಪ್ರಕರಣದಲ್ಲಿ ನ್ಯಾಯಾಲಯವು ಅವರನ್ನು ಆರೋಪದಿಂದ ಮುಕ್ತಗೊಳಿಸಿದೆ.

2016 ರಲ್ಲಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಅಬಕಾರಿ ಸಚಿವರಾಗಿದ್ದ ಎಚ್.ವೈ. ಮೇಟಿ ಅವರ ವಿರುದ್ಧವೂ ಇಂತಹದ್ದೇ ಆರೋಪ ಕೇಳಿಬಂದಿತ್ತು. ಆಗಲೂ, ಅವರಿಂದ ರಾಜೀನಾಮೆ ಪಡೆಯಲಾಗಿತ್ತು.

'ಊರ ಮಗ'ನಿಗೆ ವಿದಾಯ

ಶ್ರೀರಂಗಪಟ್ಟಣ: ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ಮೃತಪಟ್ಟ ಪೌರಕಾರ್ಮಿಕ ರಂಗಯ್ಯ (72) ಅವರಿಗೆ, ಊರವರು ಸಕಲ ಮರ್ಯಾದೆಯೊಂದಿಗೆ ಅಂತಿಮ ವಿದಾಯ ಹೇಳಿದರು.

ಹಲವು ವರ್ಷಗಳಿಂದ ಯಾವುದೇ ಪಗಾರ ಸಿಗದಿದ್ದರೂ ಬೀದಿ ಗುಡಿಸುವ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದರು.

'ಬೇಂದ್ರೆ ಕಾವ್ಯಗಳು ಕನ್ನಡದ ಶಕ್ತಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಭಾಷೆಯೊಂದಿಗೆ ಆಳವಾದ ಸಂಬಂಧ ಹೊಂದಿದ್ದ ದ.ರಾ.ಬೇಂದ್ರೆ ಅವರ ಕಾವ್ಯಗಳು ಕನ್ನಡದ ಶಕ್ತಿಯಾಗಿವೆ' ಎಂದು ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು ತಿಳಿಸಿದರು.

ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಮತ್ತು ಬೇಂದ್ರೆ ಅವರ 125ನೇ ಜನ್ಮದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಸಾರ್ವಜನಿಕ ಬದುಕಿನಲ್ಲಿ ಸಾಹಿತ್ಯ ಚಟುವಟಿಕೆಗಳನ್ನು ಕೈಗೊಂಡು ಕಾವ್ಯ ಸಂಸ್ಕೃತಿ ನಿರ್ಮಿಸುವ ಕೆಲಸ ಮಾಡಿದ್ದರು' ಎಂದರು.

ಲೇಖಕ ವೆಂಕಟೇಶ್ ಆರ್. ಚೌಥಾಯಿ ವಿದ್ಯಾರ್ಥಿಗಳಿಗೆ ಕನ್ನಡ ರತ್ನಕೋಶ ಮತ್ತು ಮಕರಂದ ಮಕ್ಕಳ ಸಣ್ಣ ಕಥೆಗಳ ಪುಸ್ತಕಗಳನ್ನು ವಿತರಿಸಿ, 'ಬೇಂದ್ರೆ ಅವರ ಸಾಹಿತ್ಯ, ಸಾಂಸ್ಕೃತಿಕ ಅಗತ್ಯವನ್ನು ಪೂರೈಸಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ನಿರ್ದಿಷ್ಟ ಆಕಾರ ಕೊಟ್ಟಿದೆ' ಎಂದರು.



ಲೇಖಖ ವೆಂಕಟೇಶ್ ಆರ್.ಚೌಥಾಯಿ ಮಕ್ಕಳ ಸಣ್ಣ ಕಥೆಗಳ ಪುಸ್ತಕಗಳನ್ನು ವಿತರಿಸಿದರು. ಬಿಎಸ್‌ಎನ್‌ಎಲ್ ಕಾರ್ಮಿಕ ಮುಖಂಡ ಬಾಲಾಜಿ, ಪ್ರಾಂಶುಪಾಲ ಬಾಲಕೃಷ್ಣಯ್ಯ, ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪುಷ್ಪ ಇದ್ದಾರೆ.

ಪ್ರಾಂಶುಪಾಲ ಬಾಲಕೃಷ್ಣಯ್ಯ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಪುಷ್ಪ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ಲಕ್ಷ್ಮೀನಾರಾಯಣ ಶ್ರೇಷ್ಠಿ, ಬಿಎಸ್‌ಎನ್‌ಎಲ್ ಕಾರ್ಮಿಕ ಮುಖಂಡ ಬಾಲಾಜಿ, ಸಾಂಸ್ಕೃತಿಕ ರಂಗದ ಅಶ್ವತ್ಥನಾರಾಯಣ್, ಯುವ ಮುಖಂಡ ವಿಜಯಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ದಿವ್ಯಶ್ರೀ, ಉಪನ್ಯಾಸಕಿ ಶ್ವೇತಾ ಇದ್ದರು.

'ಸಂಸದ್ ಟಿವಿ'ಯ ಸಿಇಒ ಆಗಿ ರವಿ ಕಪೂರ್ ನೇಮಕ

ನವದೆಹಲಿ(ಪಿಟಿಐ): ಲೋಕಸಭಾ ಟಿವಿ ಮತ್ತು ರಾಜ್ಯಸಭಾ ಟಿವಿಯನ್ನು ವಿಲೀನಗೊಳಿಸಿ, 'ಸಂಸದ್ ಟಿವಿ' ಎಂಬ ಹೆಸರಿನಡಿ ಚಾನೆಲ್ ತೆರೆಯಲು ಸಂಸತ್ತಿನ ಉಭಯ ಸದನಗಳ ಅಧ್ಯಕ್ಷರು ಒಪ್ಪಿಗೆ ನೀಡಿದ್ದಾರೆ. ಈ ಸಂಸದ್ ಟಿವಿಯ ಸಿಇಒ ಆಗಿ ನಿವೃತ್ತ ಐಎಎಸ್ ಅಧಿಕಾರಿ ರವಿ ಕಪೂರ್ ಅವರನ್ನು ಒಂದು ವರ್ಷದ ಅವಧಿಗೆ ನೇಮಕ ಮಾಡಲಾಗಿದೆ.

'ಮಾರ್ಚ್ 1ರಿಂದ ವರ್ಷದ ತನಕ ರವಿ ಕಪೂರ್ ಅವರನ್ನು ಸಂಸದ್ ಟಿವಿಯ ಸಿಇಒ ಆಗಿ ನೇಮಕ ಮಾಡಲಾಗಿದೆ' ಎಂದು ಲೋಕಸಭಾ ಸಚಿವಾಲಯ ಪ್ರಕಟಣೆ ತಿಳಿಸಿದೆ.

'ಎರಡೂ ಚಾನೆಲ್‌ಗಳನ್ನು ವಿಲೀನ ಮಾಡಿದ್ದರೂ, ಅದು ಎರಡು ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಲಿದೆ. ಒಂದು ವಿಭಾಗವು ಲೋಕಸಭಾ ಅಧಿವೇಶನಗಳನ್ನು, ಇನ್ನೊಂದು ರಾಜ್ಯಸಭೆಯ ಅಧಿವೇಶನಗಳನ್ನು ನೇರ ಪ್ರಸಾರ ಮಾಡಲಿದೆ.

ಶಾಲೆ ದತ್ತು: ಸಂಸದರಿಗೂ ಮನವಿ

ರಾಮನಗರ: ಶಾಸಕರಂತೆ ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರೂ ಸರ್ಕಾರಿ ಶಾಲೆಗಳನ್ನು ದತ್ತು ಪಡೆಯುವಂತೆ ಪತ್ರದ ಮೂಲಕ ಮನವಿ ಮಾಡಲಾಗುವುದು ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.

'ಪ್ರತಿ ಶಾಸಕರು ತಮ್ಮ ಕ್ಷೇತ್ರದ ಶಾಲೆಗಳನ್ನು ದತ್ತು ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದೆ. ಅದರಂತೆ ಸರ್ಕಾರ ಕಳೆದ ಬಜೆಟ್‌ನಲ್ಲಿ ಸರ್ಕಾರ ಘೋಷಣೆ ಮಾಡಿದ್ದು, ಎಲ್ಲ 224 ಮಂದಿ ಶಾಸಕರೂ ಈ ಕರೆಗೆ ಸ್ಪಂದಿಸಿದ್ದರು. ರಾಜ್ಯದಲ್ಲಿರುವ ವಿವಿಧ 35 ವಿಶ್ವವಿದ್ಯಾಲಯಗಳು ಸಹ ಶಾಲೆಗಳನ್ನು ದತ್ತು ತೆಗೆದುಕೊಂಡಿವೆ.

ಇದರ ಮುಂದುವರಿದ ಭಾಗವಾಗಿ ಪರಿಷತ್ ಸದಸ್ಯರು ತಲಾ ಮೂರು ಶಾಲೆ, ಸಂಸದರು ತಲಾ 5 ಶಾಲೆಗಳನ್ನು ದತ್ತು ಪಡೆಯುವಂತೆ ಕೋರಿ ಸರ್ಕಾರದ ಮೂಲಕವೇ ಪತ್ರ ಬರೆಯಲಾಗುವುದು ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ಹೋಮ ಹವನದಲ್ಲಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಭಾಗವಹಿಸಿದರು

ನಿರ್ವಿಘ್ನ ಬಜೆಟ್ ಮಂಡನೆ: ಸಿ.ಎಂ ಪ್ರಾರ್ಥನೆ

ಬೆಂಗಳೂರು: ಉತ್ತರಹಳ್ಳಿ ಪೂರ್ಣ ಪ್ರಜ್ಞಾ ಲೇಔಟ್‌ನಲ್ಲಿರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ಮಂಗಳವಾರ ನಡೆದ ಹೋಮ ಹವನದಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಈ ಬಾರಿಯ ಬಜೆಟ್ ಮಂಡನೆ ನಿರ್ವಿಘ್ನವಾಗಲಿ' ಎಂದು ಪ್ರಾರ್ಥಿಸಿದರು.

ಮಠಕ್ಕೆ ಬಂದ ಮುಖ್ಯಮಂತ್ರಿ ಅವರನ್ನು ಮಂಗಳ ವಾದ್ಯಗಳೊಂದಿಗೆ ಆರತಿ ಬೆಳಗಿ ಸ್ವಾಗತಿಸಲಾಯಿತು. ಬಳಿಕ ಮಠದ ವತಿಯಿಂದ ನಡೆದ ನರಸಿಂಹ ಮಂತ್ರ ಹೋಮ ಮತ್ತು ದುರ್ಗಾ ಮಂತ್ರ ಹೋಮದ ಪೂರ್ಣಾಹುತಿಯಲ್ಲಿ ಅವರು ಭಾಗವಹಿಸಿದರು. ಅರಿಷ್ಟ ನಿವಾರಕ ಮತ್ತು ಜಯ ಪ್ರಾಪ್ತಿಗಾಗಿ ಈ ಎರಡು ಹೋಮಗಳನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯಡಿಯೂರಪ್ಪ, 'ರಾಯರ ಸ್ಮರಣೆ ಮಾಡದೆ ಒಂದು ದಿನವೂ ನಾನು ಕಳೆದಿಲ್ಲ. ಅವರ ಆಶೀರ್ವಾದದಿಂದ ನಾನು ಈ ಸ್ಥಾನದಲ್ಲಿದ್ದೇನೆ. ರಾಜ್ಯ ಎಲ್ಲ ವರ್ಗದವರಿಗೂ ಅನುಕೂಲವಾಗುವಂತೆ ಮಾರ್ಚ್ 8ರಂದು ಬಜೆಟ್ ಮಂಡಿಸುತ್ತೇನೆ' ಎಂದರು.

ಕಂದಾಯ ಸಚಿವ ಆರ್. ಅಶೋಕ, ಶಾಸಕರಾದ ರಾಜು ಗೌಡ ಮತ್ತು ಎಂ. ಕೃಷ್ಣಪ್ಪ ಇದ್ದರು.



ಕೋವಿನ್ ವ್ಯಾಕ್ಸಿನೇಷನ್ ಅಭಿಯಾನ

ಜಯಮಹಲ್ ರಸ್ತೆ, ಬಳ್ಳಾರಿ ರಸ್ತೆ ವಿಸ್ತರಣೆ: ಅರಮನೆ ಮೈದಾನದ ಜಾಗ ಸ್ವಾಧೀನ

ಟಿಡಿಆರ್ ನಿರ್ಧಾರದಿಂದ ಹಿಂದೆ ಸರಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯಮಹಲ್ ರಸ್ತೆ ಹಾಗೂ ಬಳ್ಳಾರಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅರಮನೆ ಮೈದಾನದ ಜಾಗವನ್ನು ಟಿಡಿಆರ್ ನೀಡುವುದರ ಮೂಲಕ ಸ್ವಾಧೀನ ಪಡಿಸಿಕೊಳ್ಳುವ ನಿರ್ಧಾರದಿಂದ ಹಿಂದೆ ಸರಿಯಲು ಸರ್ಕಾರ ಮುಂದಾಗಿದೆ. ಅರಮನೆ ಮೈದಾನದ ಮಾಲೀಕತ್ವಕ್ಕೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಭೂಸ್ವಾಧೀನ ಕುರಿತು ಮಧ್ಯಂತರ ಅರ್ಜಿ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಸರ್ಕಾರ ಸೂಚಿಸಿದೆ.

ಜಯಮಹಲ್ ರಸ್ತೆಯನ್ನು ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ರೈಲು ನಿಲ್ದಾಣದವರೆಗೆ ಹಾಗೂ ಬಳ್ಳಾರಿ ರಸ್ತೆಯನ್ನು ಬಿಡಿಎ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ವಿಸ್ತರಿಸಲು ಬಿಬಿಎಂಪಿ 2009ರಲ್ಲೇ ಯೋಜನೆ ರೂಪಿಸಿತ್ತು. ಈ ಕಾಮಗಾರಿಗಳಿಗೆ ಅರಮನೆ ಮೈದಾನದ ಆಸ್ತಿಯಲ್ಲಿ 15 ಎಕರೆ 39 ಗುಂಟೆ ಜಾಗದ ಅವಶ್ಯಕತೆ ಇರುತ್ತದೆ.

ಈ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳುವ ಜಾಗಕ್ಕೆ ಬದಲಿಯಾಗಿ ಟಿಡಿಆರ್ ನೀಡುವ ಪ್ರಸ್ತಾವವನ್ನು ಬಿಬಿಎಂಪಿಯ ಹಿಂದಿನ ಆಯುಕ್ತರೊಬ್ಬರು ಅರಮನೆಯ ಮಾಲೀಕತ್ವದ ಕುರಿತ ಹೈಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಮೈಸೂರು ರಾಜವಂಶಸ್ಥರ ಮುಂದಿಟ್ಟಿದ್ದರು. ಎರಡೂ ಕಡೆಯವರು ಒಪ್ಪಿದ್ದರಿಂದ ರಸ್ತೆ ವಿಸ್ತರಣೆಗೆ ಬೇಕಾದ ಜಾಗವನ್ನು ಟಿಡಿಆರ್ ನೀಡಿ ಸ್ವಾಧೀನಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿತ್ತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಟಿಡಿಆರ್ ನೀಡಿ ರಸ್ತೆ ವಿಸ್ತರಣೆ ಕಾಮಗಾರಿಗೆ ಅಗತ್ಯವಿರುವ ಜಾಗ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸಚಿವ ಸಂಪುಟವು 2019ರ ಜು11ರಂದು ಹಸಿರುನಿಶಾನೆ ತೋರಿತ್ತು.

ಟಿಡಿಆರ್ ನೀಡಿ ಜಾಗ ಸ್ವಾಧೀನಪಡಿಸಿಕೊಳ್ಳುವುದು ಸರ್ಕಾರದ ಹಿತಾಸಕ್ತಿಯಿಂದ ಒಳ್ಳೆಯದಲ್ಲ. ಇದು ಅನೇಕ ತಾಂತ್ರಿಕ ಸಮಸ್ಯೆಗಳನ್ನು ತಂದೊಡ್ಡಲಿದೆ ಎಂದು ಬಿಬಿಎಂಪಿಯ ಈಗಿನ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ 2021ರ ಫೆ. 15ರಂದು ವಿವರವಾದ ಪತ್ರ ಬರೆದಿದ್ದರು. ಫೆ. 18ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಆಯುಕ್ತರ ಪತ್ರದಲ್ಲಿ ಉಲ್ಲೇಖಿಸಿರುವ ಅಂಶಗಳನ್ನು ಚರ್ಚಿಸಲಾಗಿತ್ತು. ಟಿಡಿಆರ್ ನೀಡಿ ಭೂ ಸ್ವಾಧೀನಪಡಿಸಿಕೊಳ್ಳುವ ಹಿಂದಿನ ನಿರ್ಣಯ ಕೈಬಿಟ್ಟು, ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ಮಧ್ಯಂತರ ಅರ್ಜಿ ಸಲ್ಲಿಸುವುದಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು.

ಬಿಬಿಎಂಪಿ ಸುದ್ದಿ

ಟಿಡಿಆರ್ ನೀಡಲು ತಾಂತ್ರಿಕ ಅಡಚಣೆಗಳೇನು?

- ಈ ಹಿಂದೆ ಸಲ್ಲಿಸಿದ್ದ ಮಧ್ಯಂತರ ಅರ್ಜಿಗಳನ್ನು ಇತ್ಯರ್ಥಪಡಿಸುವಾಗ ಸುಪ್ರೀಂ ಕೋರ್ಟ್ ಈ ಪರಿಸರದ ಯಾವುದೇ ಮರಗಳನ್ನು ಕಡಿಯಬಾರದು ಮತ್ತು ಇಲ್ಲಿನ ಪರಿಸರಕ್ಕೆ ಧಕ್ಕೆ ಉಂಟು ಮಾಡಬಾರದು ಎಂದು ಷರತ್ತು ಹಾಕಿದೆ. ಆದರೆ, ಜಯಮಹಲ್ ರಸ್ತೆ ವಿಸ್ತರಣೆಗೆ 192 ಮರಗಳನ್ನು ಸ್ಥಳಾಂತರಿಸಿ, 122 ಮರಗಳನ್ನು ಕಡಿಯಬೇಕಾಗುತ್ತದೆ. ಬಳ್ಳಾರಿ ರಸ್ತೆ ವಿಸ್ತರಣೆಗೆ 73 ಮರಗಳನ್ನು ಸ್ಥಳಾಂತರಿಸಿ, 126 ಮರಗಳನ್ನು ಕಡಿಯಬೇಕಾಗುತ್ತದೆ. ಈ ವಿಚಾರವನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತಾರದೆ ಮುಂದುವರಿಯಲು ಸಾಧ್ಯವಿಲ್ಲ.
- 1996ರ ಅರಮನೆ ಸ್ವಾಧೀನ ಮತ್ತು ಹಸ್ತಾಂತರ ಕಾಯ್ದೆಯನ್ನು ಹೈಕೋರ್ಟ್ ಎತ್ತಿಹಿಡಿದ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಸದ್ಯಕ್ಕೆ ಇಲ್ಲಿನ 472.16 ಎಕರೆಯು ಸರ್ಕಾರದ ಸ್ವಾಧೀನದಲ್ಲಿದೆ ಎಂದೇ ಅರ್ಥ. ಈ ಕಾಯ್ದೆಯಡಿ ಈ ಜಾಗಕ್ಕೆ ₹ 11 ಕೋಟಿ ಪರಿಹಾರ ನಿಗದಿಪಡಿಸಲಾಗಿದೆ. ಹಾಗಾಗಿ ಭೂಮಿ ಬಳಸಿಕೊಳ್ಳಲು ರಾಜವಂಶಸ್ಥರಿಗೆ ಏನೇ ಪರಿಹಾರ ನೀಡುವುದಿದ್ದರೂ ಈ ಪರಿಹಾರದ ಚೌಕಟ್ಟಿನಲ್ಲೇ ಇರಬೇಕಾಗುತ್ತದೆ.
- ಈ ಹಿಂದೆ ವಸಂತನಗರದಲ್ಲಿ ರಸ್ತೆ ವಿಸ್ತರಣೆಗೆ ಹಾಗೂ ಮೇಖ್ರಿ ವೃತ್ತದ ಬಳಿ ಕೆಳಸೇತುವೆ ನಿರ್ಮಾಣಕ್ಕೆ ಅರಮನೆ ಮೈದಾನದ ಜಾಗ ಬಳಕೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿತ್ತು. ಆಗಲೂ ಈ ಜಾಗಕ್ಕೆ ಪರಿಹಾರದ ನೀಡಿದರೂ ಅದು ಅಂತಿಮವಾಗಿ ಒಟ್ಟು 471.16 ಎಕರೆ ಜಾಗಕ್ಕೆ ನೀಡುವ ₹ 11 ಕೋಟಿ ಪರಿಹಾರದಲ್ಲಿ ಅಡಕವಾಗುತ್ತದೆ ಎಂದೇ ನಿರ್ಣಯಿಸಲಾಗಿತ್ತು. ಹಾಗಾಗಿ ಭೂಸ್ವಾಧೀನ ಕಾಯ್ದೆ ಪ್ರಕಾರವೇ ಪರಿಹಾರ ನೀಡಬೇಕಾಗುತ್ತದೆ.
- ನಗದು ರೂಪದ ಬದಲು ಟಿಡಿಆರ್ ರೂಪದಲ್ಲಿ ಪರಿಹಾರ ನೀಡಿದರೆ ಸರ್ಕಾರ ಚದರ ಮೀಟರ್ ಭೂಮಿಗೆ ನಿವೇಶನ ಮೌಲ್ಯದ 0.4 ಪಟ್ಟು ಸಗಟು ಮೌಲ್ಯ ನೀಡಬೇಕಾಗುತ್ತದೆ. ಇಲ್ಲಿನ ಜಾಗಕ್ಕೆ ಪ್ರತಿ ಚದರ ಮೀಟರ್‌ಗೆ ₹ 2.70 ಲಕ್ಷ ಸಗಟು ಮೌಲ್ಯವಿದೆ. ಅದರ ಪ್ರಕಾರ ಲೆಕ್ಕಹಾಕಿದಾಗ ಚದರ ಮೀಟರ್ ಭೂಮಿಗೆ ₹ 1.08 ಲಕ್ಷ ನೀಡಬೇಕಾಗುತ್ತದೆ. ಅಂದರೆ, ಒಟ್ಟು 15 ಎಕರೆ 39 ಗುಂಟೆ ಜಾಗಕ್ಕೆ ನೀಡುವ ಟಿಡಿಆರ್ ಮೌಲ್ಯ ₹ 1,396 ಕೋಟಿ ಆಗಲಿದೆ.
- 1996ರ ಅರಮನೆ ಸ್ವಾಧೀನ ಕಾಯ್ದೆ ಪ್ರಕಾರ (472 ಎಕರೆ ಜಾಗಕ್ಕೆ ₹ 11 ಕೋಟಿ) 15 ಎಕರೆ 19 ಗುಂಟೆ ಜಾಗಕ್ಕೆ ₹ 37.28 ಲಕ್ಷ ಪರಿಹಾರವನ್ನು ಮಾತ್ರ ನೀಡಬೇಕಾಗುತ್ತದೆ.
- ರಾಜ ವಂಶಸ್ಥರು ಬಿಲ್ಡರ್‌ಗಳಿಗೆ ಟಿಡಿಆರ್ ಮಾರಾಟ ಮಾಡಬಹುದು. ಅವುಗಳನ್ನು ಬಿಲ್ಡರ್‌ಗಳು ತಕ್ಷಣದಿಂದಲೇ ಬಳಸಿಕೊಳ್ಳಬಹುದು. ಅರಮನೆಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ರಾಜ್ಯ ಸರ್ಕಾರದ ಪರವಾಗಿ ಬಂದರೆ, ಆಗ ಟಿಡಿಆರ್‌ಗಳನ್ನು ಮರಳಿ ಪಡೆಯುವುದಕ್ಕೆ ಸಾಧ್ಯವಿಲ್ಲ.
- ಇಷ್ಟೊಂದು ಪ್ರಮಾಣದ ಟಿಡಿಆರ್ ನಗರದಲ್ಲಿ ಭಾರಿ ಪ್ರಮಾಣದಲ್ಲಿ ಕಾಂಕ್ರೀಟ್ ಕಟ್ಟಡಗಳು ತಲೆಎತ್ತಲು ಕಾರಣವಾಗುತ್ತದೆ.

ಅರಮನೆ ಮೈದಾನ– ಏನಿದು ವ್ಯಾಜ್ಯ?

ರಾಜ್ಯ ಸರ್ಕಾರವು 1996ರಲ್ಲಿ ಬೆಂಗಳೂರು ಅರಮನೆ (ಸ್ವಾಧೀನ ಮತ್ತು ಹಸ್ತಾಂತರ) ಕಾಯ್ದೆ ಅಂಗೀಕರಿಸಿತು. ಇದಕ್ಕೆ 1996ರ ನ.15ರಂದು ರಾಷ್ಟ್ರಪತಿಯವರು ಅಂಕಿತವನ್ನೂ ಹಾಕಿದ್ದಾರೆ. ಅರಮನೆಯನ್ನು ಸ್ಮಾರಕವಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಜಾರಿಗೆ ತಂದ ಈ ಕಾಯ್ದೆ ಪ್ರಕಾರ, ಈ ಅರಮನೆ ಹಾಗೂ ಅದಕ್ಕೆ ಸಂಬಂಧಿಸಿದ ಜಾಗ ರಾಜ್ಯ ಸರ್ಕಾರದ ಸ್ವತ್ತು. ಅರಮನೆ ಸುತ್ತಮುತ್ತಲಿನ ಜಾಗದಲ್ಲಿ ಬೊಟಾನಿಕಲ್ ಮ್ಯೂಸಿಯಂ, ತೋಟಗಾರಿಕಾ ಉದ್ಯಾನ ಹಾಗೂ ವೃಕ್ಷೋದ್ಯಾನ ಅಭಿವೃದ್ಧಿಪಡಿಸಲು ಸರ್ಕಾರ ಬಯಸಿತ್ತು. ಅರಮನೆಗೆ ಸಂಬಂಧಿಸಿದ 472.16 ಎಕರೆಗೆ ಸರ್ಕಾರ ₹ 11 ಕೋಟಿ ಪರಿಹಾರ ನಿಗದಿಪಡಿಸಿತ್ತು.

ಈ ಕಾಯ್ದೆಯನ್ನು ಮೈಸೂರು ರಾಜವಂಶಸ್ಥ ದಿವಂಗತ ಶ್ರೀಕಂಠದತ್ತ ಒಡೆಯರ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ರಾಜ್ಯ ಸರ್ಕಾರ ರೂಪಿಸಿದ್ದ ಕಾಯ್ದೆಯನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಈ ಆದೇಶದ ವಿರುದ್ಧ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಇನ್ನೂ ಇತ್ಯರ್ಥವಾಗಿಲ್ಲ.

ಡ್ರಗ್ಸ್ ಜಾಲ; ನಟಿಯರು ಸೇರಿ 25 ಮಂದಿ ವಿರುದ್ಧ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಜಾಲ ಪ್ರಕರಣ ಸಂಬಂಧ ನಟಿಯರಾದ ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ ಸೇರಿದಂತೆ 25 ಮಂದಿ ವಿರುದ್ಧ ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದ್ದಾರೆ.

ಪಾರ್ಟಿಗಳನ್ನು ಆಯೋಜಿಸಿ ಡ್ರಗ್ಸ್ ಮಾರಾಟ ಹಾಗೂ ಸೇವನೆ ಮಾಡುತ್ತಿದ್ದ ಪ್ರಕರಣವನ್ನು ಭೇದಿಸಿದ್ದ ಸಿಸಿಬಿ ಪೊಲೀಸರು, ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಕೆಲವರು ಈಗಾಗಲೇ ಜಾಮೀನು ಮೇಲೆ ಹೊರಗೆ ಬಂದಿದ್ದಾರೆ.

ಇದೀಗ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಪೊಲೀಸರು, 2,900 ಪುಟಗಳ ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಿ ನ್ಯಾಯಾಲಯಕ್ಕೆ ನೀಡಿದ್ದಾರೆ.

'ಪ್ರಕರಣದಲ್ಲಿ ಮೂವರು ತಲೆಮರೆಸಿಕೊಂಡಿದ್ದಾರೆ. ರಾಗಿಣಿ ದ್ವಿವೇದಿ, ಸಂಜನಾ ಗಲ್ರಾನಿ, ವಿರೇನ್ ಖನ್ನಾ ಸೇರಿದಂತೆ 25 ಆರೋಪಿಗಳನ್ನು ಬಂಧಿಸಲಾಗಿದ್ದು, ಅವರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. 180 ಸಾಕ್ಷಿಗಳ ಹೇಳಿಕೆ ಉಲ್ಲೇಖಿಸಲಾಗಿದೆ' ಎಂದೂ ಸಿಸಿಬಿ ಮೂಲಗಳು ಹೇಳಿವೆ.

ಎಟಿಎಂ ಸರ್ವರ್ ನಿಷ್ಕ್ರಿಯಗೊಳಿಸಿ ಹಣ ಡ್ರಾ; ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ


ದೀಪಕ್

ಬೆಂಗಳೂರು: ಎಟಿಎಂ ಯಂತ್ರದ ಸರ್ವರ್ ನಿಷ್ಕ್ರಿಯಗೊಳಿಸಿ ಅಕ್ರಮವಾಗಿ ಹಣ ಡ್ರಾ ಮಾಡಿಕೊಳ್ಳುತ್ತಿದ್ದ ಆರೋಪದಡಿ ದೀಪಕ್ (20) ಎಂಬಾತನನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಪ್ರದೇಶದ ದೀಪಕ್, ಕೃತ್ಯ ಎಸಗಲೆಂದೇ ನಗರಕ್ಕೆ ಬಂದಿದ್ದ. ಆತನಿಂದ 48 ಎಟಿಎಂ ಕಾರ್ಡ್‌ಗಳು ಹಾಗೂ ₹52 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಮಿಷನ್ ನೀಡುವುದಾಗಿ ಹೇಳಿ ತಮ್ಮೂರಿನ ಜನರಿಂದ ಕಾರ್ಡ್‌ಗಳನ್ನು ತೆಗೆದುಕೊಂಡು ಬಂದಿದ್ದ ಆರೋಪಿ, ಅವುಗಳನ್ನೇ ಬಳಸಿಕೊಂಡು ಕೃತ್ಯ ಎಸಗುತ್ತಿದ್ದ.'

'ಎಟಿಎಂ ಘಟಕಕ್ಕೆ ಹೋಗುತ್ತಿದ್ದ ಆರೋಪಿ, ಕಾರ್ಡ್ ಹಾಕಿ ಹಣ ಡ್ರಾ ಮಾಡಿಕೊಳ್ಳಲು ಮುಂದಾಗುತ್ತಿದ್ದ. ಯಂತ್ರದಿಂದ ಹಣ ಬರುವಾಗಲೇ ಯಂತ್ರದೊಳಗೆ ಕೈ ಬೆರಳಿಟ್ಟು ಸರ್ವರ್ ನಿಷ್ಕ್ರಿಯಗೊಳಿಸುತ್ತಿದ್ದ. ನಂತರ, ಹಣವನ್ನೂ ತೆಗೆದುಕೊಳ್ಳುತ್ತಿದ್ದ. ಆದರೆ, ಹಣ ಡ್ರಾ ಆದ ಬಗ್ಗೆ ಬ್ಯಾಂಕ್‌ಗೆ ಮಾಹಿತಿ ಹೋಗುತ್ತಿರಲಿಲ್ಲ' ಎಂದೂ ಹೇಳಿದರು.

'ಬ್ಯಾಂಕ್ ಸಹಾಯವಾಣಿಗೆ ಕರೆ ಮಾಡುತ್ತಿದ್ದ ಆರೋಪಿ, ತನ್ನ ಹಣ ಬಂದಿಲ್ಲವೆಂದು ದೂರು ನೀಡುತ್ತಿದ್ದ. ನಿಜವೆಂದು ನಂಬಿ ಬ್ಯಾಂಕ್‌ನವರು ಹಣ ವಾಪಸು ಖಾತೆಗೆ ಜಮೆ ಮಾಡುತ್ತಿದ್ದರು' ಎಂದೂ ತಿಳಿಸಿದರು.

'ಎಟಿಎಂ ತಾಂತ್ರಿಕ ನಿರ್ವಹಣೆ ಕೆಲಸ ಮಾಡುತ್ತಿದ್ದ ಉಮಾ ಮಹೇಶ್, ಆರೋಪಿ ಕೃತ್ಯ ಪತ್ತೆ ಹಚ್ಚಿ ದೂರು ನೀಡಿದ್ದರು' ಎಂದೂ ಹೇಳಿದರು.


ಕರ್ನಾಟಕ ಪತ್ರಕರ್ತರ ಸಹಕಾರ ಸಂಘದಿಂದ ಸಹಕಾರ ಶಿಕ್ಷಣ ನಿಧಿಗೆ ₹79 ಸಾವಿರ ದೇಣಿಗೆ ನೀಡಲಾಯಿತು. ಇದರ ಚೆಕ್ ಅನ್ನು ಸಂಘದ ಅಧ್ಯಕ್ಷ ಎಂ.ಎಸ್. ರಾಜೇಂದ್ರಕುಮಾರ್ ಅವರು ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಹಸ್ತಾಂತರಿಸಿದರು. ಪತ್ರಕರ್ತರ ಸಹಕಾರ ಸಂಘದ ಕಾರ್ಯದರ್ಶಿ ಎ.ಎಸ್. ನಾಗರಾಜಸ್ವಾಮಿ ಮತ್ತು ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್.ಅರುಣ್ ಕುಮಾರ್ ಇದ್ದಾರೆ —ಪ್ರಜಾವಾಣಿ ಚಿತ್ರ

'4 ಕಂದಾಯ ವಿಭಾಗಗಳಲ್ಲಿ ಆರ್ಥಿಕ ಸ್ಪಂದನ'

ಬೆಂಗಳೂರು: 'ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಆರ್ಥಿಕ ಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಸುಮಾರು ₹39 ಸಾವಿರ ಕೋಟಿ ಮೊತ್ತವನ್ನು ಸರ್ಕಾರಿ ಇಲಾಖೆ ಮೂಲಕ ಒದಗಿಸಲಾಗಿದೆ. ಸಹಕಾರಿ ರಂಗದ ಹಲವು ವಲಯಗಳು ಇದರ ಪ್ರಯೋಜನ ಪಡೆಯಬೇಕು' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಂಗಳವಾರ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ಪತ್ರಕರ್ತರ ಸಹಕಾರ ಸಂಘ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟವು ಜಂಟಿಯಾಗಿ ಬೆಂಗಳೂರು ವಿಭಾಗ ಮಟ್ಟದಲ್ಲಿ ಸಮೂಹ ಮಾಧ್ಯಮಗಳ ಪ್ರತಿನಿಧಿಗಳಿಗೆ ಆಯೋಜಿಸಿದ್ದ 'ಸಹಕಾರ ಜಾಗೃತಿ, ಚಿಂತನ-ಮಂಥನ' ಕುರಿತ ರಾಜ್ಯಮಟ್ಟದ ವಿಶೇಷ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

ದೇವೇಂದ್ರಪ್ಪ ವಿರುದ್ಧ ಮತ್ತೊಂದು ಪ್ರಕರಣ

ಬೆಂಗಳೂರು: ಲಂಚ ಪ್ರಕರಣದಲ್ಲಿ ಬಂಧಿತರಾಗಿರುವ ಬಿಬಿಎಂಪಿಯ ಬೊಮ್ಮನಹಳ್ಳಿ ವಲಯದ ನಗರ ಯೋಜನಾ ವಿಭಾಗದ ಹಿಂದಿನ ಸಹಾಯಕ ನಿರ್ದೇಶಕ ಎಸ್.ಎನ್. ದೇವೇಂದ್ರಪ್ಪ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಪ್ರತ್ಯೇಕ ಪ್ರಕರಣ ದಾಖಲಿಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಮಂಗಳವಾರ ಎರಡು ಸ್ಥಳಗಳಲ್ಲಿ ಶೋಧ ನಡೆಸಿದೆ.

ನಗರದ ಅಮೃತನಗರ ಸಿ ಸೆಕ್ಟರ್‌ನಲ್ಲಿರುವ ದೇವೇಂದ್ರಪ್ಪ ಅವರ ಮನೆ ಹಾಗೂ ಹಲಸೂರಿನ ಗುಪ್ತ ಬಡಾವಣೆಯಲ್ಲಿರುವ ಅವರ ಆಪ್ತ ಶ್ರೀನಿವಾಸಮೂರ್ತಿ ಅವರ ಮನೆಗಳ ಮೇಲೆ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು, ಶೋಧ ನಡೆಸಿದ್ದಾರೆ. ಶೋಧದ ವೇಳೆ ನಿವೇಶನ, ಬ್ಯಾಂಕ್ ಲಾಕರ್‌ಗಳಲ್ಲಿದ್ದ ₹ 25 ಲಕ್ಷ ನಗದು, ಬ್ಯಾಂಕ್ ಖಾತೆಗಳಲ್ಲಿದ್ದ ₹ 45 ಲಕ್ಷ ಠೇವಣಿ, ₹ 10 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ಪತ್ತೆ ಮಾಡಲಾಗಿದೆ ಎಂದು ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿ ಕುಲದೀಪ್ ಕುಮಾರ್ ಆರ್.ಜೈನ್‌ಹೇಳಿದ್ದಾರೆ.

ತೆಲುಗು ಯುವಕನಿಂದ ಕನ್ನಡ ಪದಬಂಧ ಆ್ಯಪ್

ಬೆಂಗಳೂರು: ಆಂಧ್ರಪ್ರದೇಶದ ಯುವಕ ಎನ್.ಗೌತಮ್ ಚಂದ್ರ ಅವರು 'ಕನ್ನಡ ಪದಬಂಧ ಆ್ಯಪ್' ಅಭಿವೃದ್ಧಿಪಡಿಸಿದ್ದಾರೆ. ವಿಶ್ವದ ವಿವಿಧ ಭಾಗಗಳಲ್ಲಿರುವ ಕನ್ನಡಿಗರಿಗೆ ಕುಳಿತಲ್ಲೇ ಪದಬಂಧಗಳು ದೊರೆಯುವಂತೆ ಮಾಡಿದ್ದಾರೆ.


ಎನ್.ಗೌತಮ್

ಗೌತಮ್ ಚಂದ್ರ ಅವರು ದಕ್ಷಿಣ ಕೊರಿಯಾದಲ್ಲಿ ನೆಲೆಸಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ತಾವು ಅಭಿವೃದ್ಧಿಪಡಿಸಿರುವ 'ಇಂಡಿಕ್ ಕ್ರಾಸ್‌ವರ್ಡ್ಸ್' ಮೂಲಕ ಅವರು ಕನ್ನಡ ಪದಬಂಧ ಸೇವೆ ಒದಗಿಸುತ್ತಿದ್ದಾರೆ.

ಅ.ನಾ.ಪ್ರಹ್ಲಾದರಾವ್ ಅವರು ಗೌತಮ್‌ಗೆ ಪ್ರತಿದಿನ ಪದಬಂಧ ರಚಿಸಿಕೊಡುತ್ತಿದ್ದಾರೆ. ಗೌತಮ್ ಅವರು ತಮ್ಮ ಆ್ಯಪ್ ಮೂಲಕ ಕನ್ನಡದ ಜೊತೆಗೆ ತೆಲುಗು ಹಾಗೂ ತಮಿಳು ಪದಬಂಧಗಳನ್ನೂ ಒದಗಿಸುತ್ತಿದ್ದಾರೆ. ಆಸಕ್ತರು https://indic-crosswords.ndklabs.com/ ಗೆ ಭೇಟಿ ನೀಡಬಹುದು. ವಾಟ್ಸ್‌ಆ್ಯಪ್ ಸಂಪರ್ಕಕ್ಕೆ +82 10-94850039

ವೀರಶೈವ ಮಹಾಸಭಾ: ಯುವ ಘಟಕದ ಅಧ್ಯಕ್ಷ ಮನೋಹರ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಯುವ ಘಟಕದ ಅಧ್ಯಕ್ಷರಾಗಿ ಜಿ.ಮನೋಹರ ಅಬ್ಬಿಗೆರೆ ಪುನರಾಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರು: ಪ್ರಕಾಶ ಎಸ್.ಅಂಗಡಿ (ಯಾದಗಿರಿ), ಚನ್ನಬಸವರಾಜ ಉಮೇಶ ಬೋಳಮಲ (ಬೆಳಗಾವಿ), ಮಲ್ಲಿಕಾರ್ಜುನ ಸ್ವಾಮಿ (ರಾಯಚೂರು), ಜಿ.ಸಿ.ಗೋವರ್ಧನ (ಅರಸೀಕೆರೆ), ಶಿವಪ್ರಕಾಶ್ ಗುರುನಾಥ ಹೀರಾ (ಆಳಂದ), ಬಿ.ಎಸ್.ಯಶಸ್ (ಬೆಂಗಳೂರು). ಪ್ರಧಾನ ಕಾರ್ಯದರ್ಶಿ: ಅಮರೇಶ ಎನ್.ಪಾಟೀಲ (ಕಲಬುರ್ಗಿ), ಕಾರ್ಯದರ್ಶಿಗಳು: ಶಿವಶಂಕರ ಆರಾಧ್ಯ (ಗೌರಿಬಿದನೂರು), ತ್ರಿಶೂಲ್ ಮುಗುಲುವಳ್ಳಿ ರವಿಶಂಕರ್ (ಚಿಕ್ಕಮಗಳೂರು), ವಿ.ಮಮತ (ಚಿತ್ರದುರ್ಗ), ನಾಗಶೆಟ್ಟಿ ಶಿವಶೆಟ್ಟಿ (ಬೀದರ್), ಎನ್.ಎಂ.ಅಕ್ಷತ್ (ಬಳ್ಳಾರಿ), ಶಂಭುಲಿಂಗ ನಿಜಗುಣಪ್ಪ ಚಕ್ಕಡಿ (ಹಾವೇರಿ), ಪ್ರಶಾಂತ್ ಬಸವರಾಜು (ಬೆಂಗಳೂರು). ಕೋಶಾಧ್ಯಕ್ಷರು: ಆನಂದ ಎಸ್.ಪಾಟೀಲ್ (ಕಲಬುರ್ಗಿ). ಸದಸ್ಯರು: ಮಹೇಶ ಬಸವಪುರ, ದೀಪಾ (ಬೆಂಗಳೂರು),ಲತಾ (ದೊಡ್ಡಬಳ್ಳಾಪುರ)

'ಸಮರ್ಪಕವಾಗಿ ಬಳಕೆಯಾಗದ ಮುಸ್ಲಿಂ ಮೀಸಲಾತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಂ ಸಮುದಾಯಕ್ಕೆ ಹಿಂದುಳಿದ ವರ್ಗದಡಿ ನೀಡಿರುವ ಶೇ 4ರಷ್ಟು ಮೀಸಲಾತಿಯೂ ಸಮರ್ಪಕವಾಗಿ ಬಳಕೆಯಾಗಿಲ್ಲ. ಸಮುದಾಯದಲ್ಲಿರುವ ಅತ್ಯಂತ ಹಿಂದುಳಿದ ವೃತ್ತಿ ಸಮುದಾಯಗಳ ಕುರಿತು ಕುಲಶಾಸ್ತ್ರೀಯ ಅಧ್ಯಯನ ತುರ್ತಾಗಿ ನಡೆಯಬೇಕಿದೆ' ಎಂದು ರಾಜ್ಯ ಹಿಂದುಳಿದ ಆಯೋಗಗಳ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕಾನಾಥ್ ತಿಳಿಸಿದರು.

ಕರ್ನಾಟಕ ಮುಸ್ಲಿಂ ಜಮಾತ್‌ನ ಬೆಂಗಳೂರು ನಗರ ಜಿಲ್ಲಾ ಸಮಿತಿಯು 'ಮುಸ್ಲಿಂ ಮೀಸಲಾತಿಯ ಪ್ರಾಯೋಗಿಕತೆ' ಕುರಿತು ಮಂಗಳವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಮೀಸಲಾತಿ ಎನ್ನುವುದು ಬಡತನ ನಿವಾರಣಾ ಕಾರ್ಯಕ್ರಮವಲ್ಲ. ಅದನ್ನು ಮನಬಂದಂತೆ ಕೊಡಲು ಸಾಧ್ಯವಿಲ್ಲ. ಸಾಮಾಜಿಕವಾಗಿ ಹಿಂದುಳಿದವರಿಗೆ ನೀಡಬೇಕಾಗಿರುವುದು ಸಮಾನ ಪ್ರಾತಿನಿಧ್ಯವೇ ಹೊರತು ಮೀಸಲಾತಿಯಲ್ಲ. ಅಂಬೇಡ್ಕರ್ ಹೇಳಿದ್ದೂ ಇದನ್ನೇ. ಯಾವ ಕ್ಷೇತ್ರದಲ್ಲಿ ಯಾರಿಗೆ ಸೂಕ್ತ ಪ್ರಾತಿನಿಧ್ಯ ಇಲ್ಲವೋ ಅದನ್ನು ಒದಗಿಸುವುದು ಮೀಸಲಾತಿಯ ನೈಜ ಉದ್ದೇಶ' ಎಂದರು.

'ಟಿಪ್ಪು ಕಾಲದಲ್ಲೇ ಮೀಸಲಾತಿ ಮೊದಲಿಗೆ ತತ್ವದ ರೂಪದಲ್ಲಿ ರಾಜ್ಯದಲ್ಲಿ ಜಾರಿಗೆ ಬಂತು. ಅದನ್ನು ಪ್ರಾತಿನಿಧ್ಯ ಎನ್ನಲಾಯಿತು. ಮೈಸೂರು ಒಡೆಯರ್ ಕಾಲದಲ್ಲಿ ಶಾಸನಬದ್ಧವಾಗಿ ಮೀಸಲಾತಿ ರೂಪದಲ್ಲಿ ತಾಳಿತು. ಆಗ ಎಲ್ಲ ಹುದ್ದೆಗಳಲ್ಲಿ ಬ್ರಾಹ್ಮಣರೇ ತುಂಬಿದ್ದರು. ಬಳಿಕ ಇತರ ಜಾತಿಗಳಿಗೂ ಶೇ 50ರಷ್ಟು ಮೀಸಲಾತಿ ಜಾರಿ ಮಾಡಲಾಯಿತು' ಎಂದು ವಿವರಿಸಿದರು.

ಹಿರಿಯ ಪತ್ರಕರ್ತ ಬಿ.ಎಂ. ಹನೀಫ್,'ಮುಸ್ಲಿಂ ಸಮುದಾಯದಲ್ಲಿ ಮೀಸಲಾತಿ ಕುರಿತು ಜಾಗೃತಿ ಮೂಡಿಸುವ ಅನಿವಾರ್ಯತೆ ಇದೆ. ಸಮುದಾಯದ ರಾಜಕೀಯ ನಾಯಕರು ಈ ಕೆಲಸದಲ್ಲಿ ವಿಫಲರಾಗಿದ್ದಾರೆ. ಈಗಾಗಲೇ ವಿವಿಧ ಆಯೋಗದ ವರದಿಗಳಲ್ಲಿ ಮುಸ್ಲಿಂ ಸಮುದಾಯದಲ್ಲಿರುವ ಅತ್ಯಂತ ಹಿಂದುಳಿದ ಸುಮಾರು 25ಕ್ಕೂ ಹೆಚ್ಚು ವೃತ್ತಿಗುಂಪುಗಳನ್ನು ಗುರುತಿಸಲಾಗಿದೆ. ಇವರಿಗಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿ, ₹2 ಸಾವಿರ ಕೋಟಿ ಅನುದಾನ ಮೀಸಲಿಡಬೇಕು' ಎಂದು ಆಗ್ರಹಿಸಿದರು.

ರಾಜ್ಯ ಅಲ್ಪಸಂಖ್ಯಾತರ ಆಯೋಗವು ವಿಶ್ವವಿದ್ಯಾಲಯವೊಂದರ ನೆರವಿನೊಂದಿಗೆ ಮುಸ್ಲಿಮರ ಕುಲಮೂಲ ಸಮೀಕ್ಷೆ ನಡೆಸಬೇಕು. ರಾಜ್ಯದಲ್ಲಿ ಅಲ್ಪಸಂಖ್ಯಾತ ಆಯೋಗದ ಬದಲಿಗೆ ನ್ಯಾ.ರಾಜಿಂದರ್ ಸಾಚಾರ್ ವರದಿ ಸೂಚಿಸಿದಂತೆ ರಾಜ್ಯ ಸಮಾನ ಅವಕಾಶ ಆಯೋಗ ಸ್ಥಾಪಿಸಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.



ವಿಚಾರ ಸಂಕಿರಣದಲ್ಲಿ (ಎಡದಿಂದ) ಬಿ.ಎಂ.ಹನೀಫ್, ಸಿ.ಎಸ್.ದ್ವಾರಕನಾಥ್, ಕರ್ನಾಟಕ ಮುಸ್ಲಿಂ ಜಮಾತ್ ಅಧ್ಯಕ್ಷ ಮುಫ್ತಿ ಅನ್ವರ್ ಅಲಿ ಮತ್ತು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸದಸ್ಯ ಮೌಲಾನ ಎನ್.ಕೆ.ಎಂ.ಶಾಫಿ ಸಾದಿ ಭಾಗವಹಿಸಿದ್ದರು


1971ರ ಇಂಡೋ ಪಾಕ್ ಯುದ್ಧದ ಸೇನಾನಿಗಳಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 'ವಿಜಯ ದೀಪ' ಪಡೆದರು. ಕಂದಾಯ ಸಚಿವ ಆರ್. ಅಶೋಕ, ಮುಖ್ಯ ಕಾರ್ಯದರ್ಶಿ ರವಿಕುಮಾರ್, ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಇದ್ದರು

'ಸ್ವರ್ಣ ವಿಜಯ ದಿವಸ್' ಸಂಭ್ರಮ ಸೇನಾನಿಗಳಿಗೆ ಸಿ.ಎಂ ಸನ್ಮಾನ

ಬೆಂಗಳೂರು: 1971ರ ಇಂಡೋ ಪಾಕ್ ಯುದ್ಧದ 50 ವರ್ಷದ ಸ್ಮರಣೆಯ ಅಂಗವಾಗಿ ವಿಧಾನಸೌಧದ ಮೆಟ್ಟಿಲುಗಳ ಮುಂಭಾಗದಲ್ಲಿ ಮಂಗಳವಾರ ನಡೆದ 'ಸ್ವರ್ಣ ವಿಜಯ ವರ್ಷ' ಕಾರ್ಯಕ್ರಮದಲ್ಲಿ, ಅಂದು ಯುದ್ಧದಲ್ಲಿ ಹೋರಾಡಿ ಪ್ರಶಸ್ತಿ ಪುರಸ್ಕೃತರಾಗಿದ್ದ ಸೇನಾನಿಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಯಡಿಯೂರಪ್ಪ, 'ದೇಶದ ಮಣ್ಣಿನ ವೀರ ಸೇನಾನಿಗಳಿಗೆ ಗೌರವ ಅರ್ಪಿಸುವ ಸುಸಂದರ್ಭವಿದು' ಎಂದರು.

'ಯುದ್ಧದಲ್ಲಿ ಭಾರತ ಜಯಿಸಿ 50 ವರ್ಷ ತುಂಬಿದೆ. ಆ ಸ್ಮರಣೆಯ ಆಚರಣೆಗೆ ಪ್ರಧಾನಿ ಕಳೆದ ಡಿ. 16ರಂದು ಚಾಲನೆ ನೀಡಿದ್ದಾರೆ. ಈ ವಿಜಯ ದೀಪವು ರಾಜ್ಯದಲ್ಲಿ ಮಾರ್ಚ್ 5ರವರೆಗೆ ಇರಲಿದೆ. ದೇಶದಲ್ಲಿ ವರ್ಷವಿಡೀ ಸ್ವರ್ಣ ವಿಜಯ ವರ್ಷಾಚರಣೆ ನಡೆಯಲಿದೆ' ಎಂದರು.

ಯುದ್ಧದಲ್ಲಿ ಹುತಾತ್ಮರಾದ ಲೆಫ್ಟಿನೆಂಟ್ ಕಮಾಂಡರ್ ಜೆಪಿಎ ನರೋನ್ಹಾ ಬದಲಿಗೆ ಮಹಾವೀರ ಚಕ್ರ ಪಡೆದಿದ್ದ ಅವರ ಪತ್ನಿ ತೆರೇಸಾ ನರೋನ್ಹಾ, ನೌಕಾಪಡೆ ಅಡ್ಮಿರಲ್ ಸಂತೋಷ್ ಕುಮಾರ್ ಗುಪ್ತ ಅವರು ಮಹಾವೀರ ಚಕ್ರ, ಮೇಜರ್ ಜನರಲ್ ಕುಪ್ಪಂದ ಪೊನ್ನಪ್ಪ ನಂಜಪ್ಪ ಅವರು ವೀರಚಕ್ರ, ಬ್ರಿಗೇಡ್ ಪಿ.ವಿ. ಸಹದೇವನ್ ಅವರು ವೀರಚಕ್ರ, ಅಡ್ಮಿರಲ್ ರಿಷಿರಾಜ್ ಸೂದ್ ಅವರು ವೀರಚಕ್ರ, ಲೆಫ್ಟಿನೆಂಟ್ ಕೇಶವ್ ಸಿಂಗ್ ಪನ್ವರ್ ಅವರು ವೀರಚಕ್ರ ವಿಮಾನ ಲೆಫ್ಟಿನೆಂಟ್ ಅಸ್ಪಾರಿ ರಘುನಾಥನ್ ಅವರು ವೀರಚಕ್ರ ಪ್ರಶಸ್ತಿಯಿಂದ ಪುರಸ್ಕೃತರಾಗಿದ್ದು, ಅವರನ್ನು ಮುಖ್ಯಮಂತ್ರಿ ಸನ್ಮಾನಿಸಿದರು.

ಬಿಜೆಪಿ ವಿರುದ್ಧ ಚುನಾವಣಾ ಪ್ರಚಾರಕ್ಕೆ ರೈತರು ಸಜ್ಜು

ರಾಜ್ಯದಿಂದ ಎಂಎಸ್‌ಪಿ ಅಭಿಯಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗಾಗಿ ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಕರ್ನಾಟಕದಲ್ಲಿ ಶುಕ್ರವಾರ ಚಾಲನೆ ನೀಡಲಾಗುವುದು ಎಂದು ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಮಂಗಳವಾರ ಹೇಳಿದ್ದಾರೆ.

ವಿಧಾನಸಭೆಗೆ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ರೈತರು ಬಿಜೆಪಿಯ ವಿರುದ್ಧ ಪ್ರಚಾರ ನಡೆಸಲಿದ್ದಾರೆ. ಇದೇ 12ರಂದು ಕೋಲ್ಕತ್ತದಲ್ಲಿ ನಡೆಯಲಿರುವ ರೈತರ ರ‍್ಯಾಲಿ ಮೂಲಕ ಈ ಪ್ರಚಾರ ಆರಂಭವಾಗಲಿದೆ ಎಂದು ರೈತ ನಾಯಕ ಬಲಬೀರ್ ಸಿಂಗ್ ರಾಜೇವಾಲ್ ತಿಳಿಸಿದ್ದಾರೆ.

ಎಂಎಸ್‌ಪಿ ಅಭಿಯಾನವು ಕರ್ನಾಟಕದ ಬಳಿಕ ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ನಡೆಯಲಿದೆ. ಕ್ರಮೇಣ ಇದು ಇಡೀ ದೇಶವನ್ನು ಆವರಿಸಲಿದೆ ಎಂದು ತಿಳಿಸಿದ್ದಾರೆ.

ಗಾಜಿಪುರ ಗಡಿ ಮತ್ತೆ ಬಂದ್: ಗಾಜಿಪುರ ಗಡಿಯಲ್ಲಿ ಮಂಗಳವಾರ ಬೆಳಿಗ್ಗೆ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟ ಕೆಲವೇ ಗಂಟೆಗಳಲ್ಲಿ ಪೊಲೀಸರು ಗಡಿಯನ್ನು ಪುನಃ ಮುಚ್ಚಿದರು.

ಗಣರಾಜ್ಯೋತ್ಸವದ ದಿನ ರೈತರ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದರಿಂದ ಈ ಮಾರ್ಗದಲ್ಲಿ ವಾಹನ ಸಂಚಾರವನ್ನು ಬಂದ್ ಮಾಡಲಾಗಿತ್ತು.



ಮಂಗಳವಾರ ಬೆಳಿಗ್ಗೆ ದೆಹಲಿಯ ಗಾಜಿಪುರ ಗಡಿಯ ಒಂದು ಭಾಗದಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿತ್ತು. ಬಳಿಕ ಈ ಗಡಿಯನ್ನು ಮುಚ್ಚಲಾಯಿತು —ಪಿಟಿಐ ಚಿತ್ರ

6ರಂದು ಕರಾಳ ದಿನ

ರೈತರ ಪ್ರತಿಭಟನೆ ಆರಂಭವಾಗಿ ಶನಿವಾರಕ್ಕೆ (ಮಾರ್ಚ್ 6) ನೂರು ದಿನಗಳಾಗಲಿವೆ. ಅಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ಕುಂಡಲಿ–ಮನೇಸರ್–ಪಲ್ವಾಲ್ ಎಕ್ಸ್‌ಪ್ರೆಸ್‌ವೇಯನ್ನು ಬಂದ್ ಮಾಡಲಾಗುವುದು. ಆ ದಿನವನ್ನು ಕರಾಳ ದಿನ ಎಂದು ಆಚರಿಸಲಾಗುವುದು. ದೇಶದಾದ್ಯಂತ ರೈತರು ಕಪ್ಪು ಧ್ವಜ ಹಾರಿಸಲಿದ್ದಾರೆ, ಕಪ್ಪು ಪಟ್ಟಿ ಮತ್ತು ಕಪ್ಪು ಬಟ್ಟೆ ಧರಿಸಲಿದ್ದಾರೆ. ಇದೇ 8ರಂದು ಮಹಿಳಾ ಕೃಷಿ ದಿನ ಆಚರಿಸಲಾಗುವುದು ಎಂದು ರೈತ ಮುಖಂಡರು ತಿಳಿಸಿದ್ದಾರೆ.

₹12 ಕೋಟಿ ವೆಚ್ಚದ ಕಾಮಗಾರಿ ಬಹುತೇಕ ಮುಗಿಯುವ ಹಂತ

ರೈಲ್ವೆ ಕೆಳಸೇತುವೆ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಶ್ರೀರಾಮಪುರ ಬಳಿ ನಿರ್ಮಾಣವಾಗುತ್ತಿರುವ ರೈಲ್ವೆ ಕೆಳಸೇತುವೆ ಕಾಮಗಾರಿಯನ್ನು ಶಾಸಕ ಕೃಷ್ಣಬೈರೇಗೌಡ ರೈಲ್ವೆ ಮತ್ತು ಬಿಬಿಎಂಪಿ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, '3–4 ವರ್ಷಗಳಿಂದ ಈ ಭಾಗದಲ್ಲಿ ಜನಸಂಖ್ಯೆ ಜಾಸ್ತಿಯಾಗಿ ಸಂಚಾರ ದಟ್ಟಣೆ ಹೆಚ್ಚಾಗಿದೆ. ರೈಲ್ವೆಗೇಟ್ ಹಾಕಿದಾಗ ವಾಹನ ಸವಾರರು ತೊಂದರೆ ಅನುಭವಿಸಬೇಕಾಗಿತ್ತು. ಐದು ವರ್ಷಗಳ ಹಿಂದೆಯೇ ಈ ಸಮಸ್ಯೆ ಮನಗಂಡು ಇಲ್ಲಿ ಕೆಳಸೇತುವೆ ನಿರ್ಮಾಣ ಮಾಡಬೇಕೆಂದು ರೈಲ್ವೆಯವರಿಗೆ ಮನವಿ ಮಾಡಲಾಗಿತ್ತು. ರಾಜ್ಯ ಸರ್ಕಾರದಿಂದ ₹9 ಕೋಟಿ ಮತ್ತು ರೈಲ್ವೆ ಇಲಾಖೆಯಿಂದ ₹3 ಕೋಟಿ ಸೇರಿದಂತೆ ಒಟ್ಟು ₹12 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ಕಾಮಗಾರಿಯು ಬಹುತೇಕ ಮುಗಿಯುವ ಹಂತದಲ್ಲಿದೆ' ಎಂದು ತಿಳಿಸಿದರು.

'ಒಂದು ತಿಂಗಳೊಳಗಾಗಿ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರ ಸೇವೆಗೆ ಸಮರ್ಪಣೆ ಮಾಡಬೇಕೆಂಬ ಉದ್ದೇಶವಿದೆ. ಈ ಮಧ್ಯೆ, ವಾಹನಸಂಚಾರಕ್ಕೆ ಸಂಬಂಧಿಸಿದಂತೆ ಕೆಲವು ಸಣ್ಣಪುಟ್ಟ ಗೊಂದಲಗಳನ್ನು ನಿವಾರಿಸಲು ಮತ್ತು ಇತರೆಡೆಗಳಲ್ಲಿ ಮಳೆಬಂದಾಗ ಕೆಳಸೇತುವೆಯಲ್ಲಿ ನೀರುನಿಂತು ವಾಹನಸವಾರರು ತೊಂದರೆ ಅನುಭವಿಸುತ್ತಿದ್ದು, ಇಲ್ಲಿ ಅಂತಹ ಸಮಸ್ಯೆ ಮರುಕಳಿಸದಂತೆ ಸಾಧಕ-ಬಾಧಕಗಳ ಬಗ್ಗೆ ಪರಿಶೀಲಿಸಲು ಸ್ಥಳವೀಕ್ಷಣೆ ಮಾಡಲಾಗಿದೆ' ಎಂದರು.

'ಕೊಡಿಗೇಹಳ್ಳಿಯಲ್ಲಿ ನಿರ್ಮಿಸಿರುವ ರೈಲ್ವೆ ಕೆಳಸೇತುವೆಯು ತೊಂದರೆಗಳಿಂದ ಕೂಡಿದ್ದು, ಕಾಮಗಾರಿ ಕಳಪೆಯಾಗಿದೆ. ಅದಕ್ಕೆ ಹೋಲಿಸಿದರೆ ರೈಲ್ವೆ ಇಲಾಖೆಯವರು ಇಲ್ಲಿ ಗುಣಮಟ್ಟದ ಕಾಮಗಾರಿ ಮಾಡಿದ್ದಾರೆ. ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಲಾಗಿದ್ದು, ಅದನ್ನು ಸರಿಪಡಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ರೈಲ್ವೆ ಕಾಮಗಾರಿ ನಿರ್ಮಾಣ ಘಟಕದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆರ್.ವಳುತಿ, ಬಿಬಿಎಂಪಿ ರಸ್ತೆ, ಮೂಲಸೌಕರ್ಯ ಯಲಹಂಕ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕೆಂಪೇಗೌಡ, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ಎಚ್.ಎ.ಶಿವಕುಮಾರ್, ಪಳನಿ ವೆಂಕಟೇಶ್, ಟಿ.ವೆಂಕಟರಾಮ ರೆಡ್ಡಿ ಇದ್ದರು.


ಶ್ರೀರಾಮಪುರ ರೈಲ್ವೆ ಕೆಳಸೇತುವೆ ಕಾಮಗಾರಿಯನ್ನು ಕೃಷ್ಣಬೈರೇಗೌಡ ಪರಿಶೀಲಿಸಿದರು.

ಸೌದೆಯಿಂದ ಅಡುಗೆ ತಯಾರಿಸಿ ಆಕ್ರೋಶ ಹೊರಹಾಕಿದ ಮಹಿಳಾ ಪ್ರತಿಭಟನಕಾರರು

ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತೈಲ ಮತ್ತು ಗ್ಯಾಸ್ ಬೆಲೆ ನಿರಂತರ ಏರಿಕೆಗೆ ಖಂಡನೆ
- ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ
- ಪ್ರತಿಭಟನೆಗೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕಾರ್ಯಕರ್ತರು

ಬೆಂಗಳೂರು: ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ಸದಸ್ಯರು, ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ವೃತ್ತದ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಗೆ ವಿವಿಧ ಜಿಲ್ಲೆಗಳಿಂದ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರು ತಲೆಯ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತು, ಕೊರಳಿಗೆ ತರಕಾರಿ ಮಾಲೆ ಧರಿಸಿ, ಸೈಕಲ್ ರಿಕ್ಷಾ ತಳ್ಳುವ ಮೂಲಕ ಪ್ರತಿಭಟನೆ ನಡೆಸಿ, ಬೆಲೆ ಏರಿಕೆ ವಿರುದ್ಧ ಆಕ್ರೋಶ ಹೊರಹಾಕಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಆನಂದರಾವ್ ವೃತ್ತದವರೆಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ಮಹಿಳಾ ಪ್ರತಿಭಟನಕಾರರು ಸೌದೆಯಿಂದ ಸ್ಥಳದಲ್ಲೇ ಅಡುಗೆ ತಯಾರಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ,‘ಇದು ಕೇವಲ ಒಂದು ಪಕ್ಷದ ಮಹಿಳೆಯರಿಗೆ ಸೀಮಿತವಾಗಿರುವ ಸಮಸ್ಯೆ ಅಲ್ಲ. ಎಲ್ಲ ಪಕ್ಷದ ಮಹಿಳೆಯರಿಗೂ ಸಿಲಿಂಡರ್ ದರದ ಬಿಸಿ ಮುಟ್ಟಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ತೈಲ ಏರಿದ ಕೂಡಲೇ ಪ್ರತಿಭಟನೆಗೆ ಬೀದಿಗಿಳಿಯುತ್ತಿದ್ದ ಬಿಜೆಪಿಯವರು ಈಗ ಏಕೆ ಸುಮ್ಮನಿದ್ದಾರೆ?’ ಎಂದು ಪ್ರಶ್ನಿಸಿದರು.

‘ತೈಲ ದರ ಹಾಗೂ ಗ್ಯಾಸ್ ಸಿಲಿಂಡರ್ ದರ ಏರಿಕೆಯಿಂದ



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತಲೆಯ ಮೇಲೆ ಅಡುಗೆ ಅನಿಲ ಸಿಲಿಂಡರ್ ಹೊತ್ತು ಪ್ರತಿಭಟನೆ ನಡೆಸಿದರು. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ರಾಮಲಿಂಗಾ ರೆಡ್ಡಿ, ಸಲೀಂ ಅಹಮದ್ ಇದ್ದಾರೆ –ಪ್ರಜಾವಾಣಿ ಚಿತ್ರ

ಜನಕ್ಕೆ ಸಂಕಷ್ಟ ಎದುರಾಗಿದೆ. ಜನರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಈ ಸರ್ಕಾರಕ್ಕೆ ಮಾನ ಮರ್ಯಾದೆ ಇಲ್ಲ’ ಎಂದು ಕಿಡಿಕಾರಿದರು.

ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ‘ಅಡುಗೆ ಅನಿಲ ದರ ಇಳಿಕೆ ಮಾಡಿ ಮಹಿಳೆಯ ಪರ ಇರುವುದಾಗಿ ಪ್ರಧಾನಿ ಮೋದಿ ಅವರು ಚುನಾವಣಾ ಪ್ರಣಾಳಿಕೆಯಲ್ಲಿ ತಿಳಿಸಿದ್ದರು. ಆದರೆ, ತೈಲ ಬೆಲೆ ಏರುತ್ತಲೇ ಇದೆ. ಕೊಟ್ಟ ಮಾತಿನಂತೆ ದರ ಕಡಿಮೆ ಮಾಡುವ ಬದಲು ನಿರಂತರವಾಗಿ ಏರಿಕೆ ಮಾಡುತ್ತಿದ್ದಾರೆ. ಬೆಲೆ ಏರಿಕೆ ವಿರುದ್ಧ ಕೂಗಾಡುತ್ತಿದ್ದ ಬಿಜೆಪಿ ನಾಯಕಿಯರಾದ ಶೋಭಾ ಕರಂದ್ಲಾಜೆ, ಸ್ಮೃತಿ ಇರಾನಿ, ನಿರ್ಮಲಾ ಸೀತಾರಾಮನ್ ಈಗ ಮೌನಕ್ಕೆ ಶರಣಾಗಿದ್ದಾರೆ. ಅವರು ಮನೆಯಲ್ಲಿ ಅಡುಗೆ ಮಾಡುವುದಿಲ್ಲವೇ?’ ಎಂದು ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ,‘ಯುಪಿಎ ಆಡಳಿತದಲ್ಲಿ ಪೆಟ್ರೋಲ್‌ಗೆ ₹3 ಹಾಗೂ ಡೀಸೆಲ್‌ಗೆ ₹2 ತೆರಿಗೆ ಹಾಕಲಾಗಿತ್ತು. ಈಗಿನ ಬಿಜೆಪಿ ಸರ್ಕಾರ ₹32 ತೆರಿಗೆ ಹಾಕುತ್ತಿದೆ. ಬಿಜೆಪಿ ಸರ್ಕಾರದಲ್ಲಿ ಪ್ರಧಾನಿಯಿಂದ ಕಾರ್ಯಕರ್ತರವರೆಗೂ ಎಲ್ಲರಿಗೂ ಸುಳ್ಳು ಹೇಳುವ ತರಬೇತಿ ನೀಡಲಾಗಿದೆ’ ಎಂದು ವ್ಯಂಗ್ಯವಾಡಿದರು.



ವಿಜಯನಗರ ಕ್ಷೇತ್ರದ ಅಭಯ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಉಪಮೇಯರ್ ಎಂ.ಲಕ್ಷ್ಮೀನಾರಾಯಣ್ ಪೌರಕಾರ್ಮಿಕರನ್ನು ಸನ್ಮಾನಿಸಿದರು. ಕಾಂಗ್ರೆಸ್ ಮುಖಂಡರಾದ ಎಲ್‌. ಪವಿತ್ರ ಹಾಗೂ ಇತರರು ಇದ್ದರು.

ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಬೃಹತ್ ರ‍್ಯಾಲಿ

ಬೆಂಗಳೂರು: ‘ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವಧನವನ್ನು ಸೇವಾ ಹಿರಿತನ ಆಧಾರದಲ್ಲಿ ಹೆಚ್ಚಿಸಬೇಕು’ ಎಂದು ಒತ್ತಾಯಿಸಿ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಲಾಯಿತು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ವತಿಯಿಂದ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು. ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಸಾಗಿದ ರ‍್ಯಾಲಿಯಲ್ಲಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು.

‘ಗೌರವ ಧನ ಹೆಚ್ಚಿಸಿ, ವೇತನ ತಾರತಮ್ಯ ಹೋಗಲಾಡಿಸಿ’, ‘ನಮಗೂ ಪಿಂಚಣಿ ನೀಡಿ’, ‘ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಿ’ ಸೇರಿದಂತೆ ಹಲವು ಘೋಷಣಾ ಫಲಕಗಳನ್ನು ಪ್ರತಿಭಟನಕಾರರು ಪ್ರದರ್ಶಿಸಿದರು.

ಉದ್ಯಾನದಲ್ಲಿ ಬಹಿರಂಗ ಸಭೆ ನಡೆಸಿದ ಪ್ರತಿಭಟನಕಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಅಂಗನವಾಡಿಗಳ ಬಗ್ಗೆ ಸರ್ಕಾರದ ನಿರ್ಲಕ್ಷ್ಯವನ್ನು ತೀವ್ರವಾಗಿ ಖಂಡಿಸಿದರು.

ಸೇವೆಗಿಲ್ಲ ಕಿಮ್ಮತ್ತು: ‘ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ₹ 10,000 ಹಾಗೂ ಸಹಾಯಕಿಯರಿಗೆ ₹5,250 ಗೌರವ ಧನ ನೀಡಲಾಗುತ್ತಿದೆ. ಹೊಸದಾಗಿ ಸೇವೆಗೆ ಸೇರಿದವರಿಗೆ ಹಾಗೂ ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೂ ಒಂದೇ ವೇತನವಿದೆ. ಸೇವೆಗೆ ಕಿಮ್ಮತ್ತು ಇಲ್ಲವೇ?’ ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

‘ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಪಿಂಚಣಿ, ಇಎಸ್‌ಐ ಹಾಗೂ ಭವಿಷ್ಯ ನಿಧಿ ಸೌಲಭ್ಯಗಳನ್ನು ಒದಗಿಸಬೇಕು. ಲಾಕ್‌ಡೌನ್‌ನಿಂದಾಗಿ ಹಲವರು ಸಂಕಷ್ಟಕ್ಕೆ ಸಿಲುಕಿದ್ದು, ಪರಿಹಾರ ಧನವನ್ನು ನೀಡಬೇಕು’ ಎಂದೂ ಅವರು ಒತ್ತಾಯಿಸಿದರು.

ಮೈಸೂರು, ಚಿಕ್ಕಬಳ್ಳಾಪುರ, ಮಂಡ್ಯ, ಕೋಲಾರ, ಬಾಗಲಕೋಟೆ, ಬೀದರ್, ಕೊಪ್ಪಳ, ಬಳ್ಳಾರಿ ಹಾಗೂ ಹಲವು ಜಿಲ್ಲೆಗಳ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಸಚಿವರ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಕಂದಾಯ ಸಚಿವ ಆರ್. ಅಶೋಕ, ಮನವಿ ಪತ್ರ ಸ್ವೀಕರಿಸಿದರು. ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

‘ಬೇಡಿಕೆಗಳ ಈಡೇರಿಕೆ ಬಗ್ಗೆ ಚರ್ಚಿಸಲು ಬುಧವಾರ ಬೆಳಿಗ್ಗೆ 11 ಕ್ಕೆ ವಿಕಾಸಸೌಧದಲ್ಲಿ ಕಾರ್ಯದರ್ಶಿಯವರು ಸಭೆ ಕರೆದಿದ್ದಾರೆ. ಮುಖಂಡರೆಲ್ಲರೂ ಸಭೆಯಲ್ಲಿ ಪಾಲ್ಗೊಂಡು ಬೇಡಿಕೆ ಈಡೇರಿಕೆಗೆ ಆಗ್ರಹಿಸಲಿದ್ದೇವೆ. ಸದ್ಯಕ್ಕೆ ಪ್ರತಿಭಟನೆ ಅಂತ್ಯಗೊಳಿಸಿದ್ದೇವೆ’ ಎಂದು ಸಿಐಟಿಯು ಕಾರ್ಯದರ್ಶಿ ಎನ್. ಶಿವಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

ಬೇಡಿಕೆ ಈಡೇರದಿದ್ದರೆ ಮಾ.16ರಿಂದ ಮುಷ್ಕರ

ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಸಾರಿಗೆ ನೌಕರರ ಬೇಡಿಕೆಗಳನ್ನು ಮಾರ್ಚ್ 15ರೊಳಗೆ ಸರ್ಕಾರ ಈಡೇರಿಸಬೇಕು. ಇಲ್ಲದಿದ್ದರೆ, ಮಾರ್ಚ್ 16ರಿಂದ ರಾಜ್ಯದಾದ್ಯಂತ ಬಸ್ ಬಂದ್ ಮಾಡಿ ಮುಷ್ಕರ ನಡೆಸಲಾಗುವುದು’ ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಎಚ್ಚರಿಸಿದರು.

ಸಾರಿಗೆ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ನೇತೃತ್ವದಲ್ಲಿ ನಗರದ ಮೌರ್ಯ ವೃತ್ತದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು.

‘ಸಾರಿಗೆ ನೌಕರರ ಬೇಡಿಕೆಗೆ ಈಡೇರಿಸಲು ಸರ್ಕಾರಕ್ಕೆ ನೀಡಲಾಗಿದ್ದ ಗಡುವು ಮುಗಿಯುತ್ತಿದ್ದು, ಯಾವುದೇ ಬೇಡಿಕೆಗಳು ಈಡೇರಿಲ್ಲ. ಕೊನೆಯದಾಗಿ ಮಾರ್ಚ್ 15ರವರೆಗೆ ಕಾಯುತ್ತೇವೆ. ಡಿಸೆಂಬರ್‌ನಲ್ಲಿ ಯಾವುದೇ ಸಿದ್ಧತೆ ಇಲ್ಲದೆ ಏಕಾಏಕಿ ಮುಷ್ಕರ ಮಾಡಿದ್ದೆವು. ಆದರೆ, ಈ ಬಾರಿ ಸಂಪೂರ್ಣ ಬಸ್ ಸಂಚಾರ ಬಂದ್ ಮಾಡುವ ಮೂಲಕ ಮುಷ್ಕರ ನಡೆಸಲಾಗುವುದು’ ಎಂದರು.



ಸಾರಿಗೆ ನೌಕರರು ಮೌರ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಕೋಡಿಹಳ್ಳಿ ಚಂದ್ರಶೇಖರ್, ಆರ್.ಚಂದ್ರಶೇಖರ್ ಇದ್ದರು –ಪ್ರಜಾವಾಣಿ ಚಿತ್ರ

‘ಮುಷ್ಕರದ ಪರಿಣಾಮಗಳಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೇ ನೇರಹೊಣೆಯಾಗಲಿದ್ದಾರೆ. ಸಾರಿಗೆ ನೌಕರರ ಕುಟುಂಬಗಳು ಬೀದಿಗಿಳಿದು ಪ್ರತಿಭಟನೆ ಮಾಡಲಿವೆ. ಸರ್ಕಾರಕ್ಕೆ ಈಗಲೂ ಸಮಯ ಇದೆ. ಸಾರಿಗೆ ಸಚಿವ ಲಕ್ಷ್ಮಣ ಸವದಿ ಹಾಗೂ ಮುಖ್ಯಮಂತ್ರಿಗಳು ಈ ಬಗ್ಗೆ ಯೋಚಿಸುವುದು ಒಳ್ಳೆಯದು’ ಎಂದು ಹೇಳಿದರು.

ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಆರ್.ಚಂದ್ರಶೇಖರ್,‘ಆರನೇ ವೇತನ ಆಯೋಗದ ಶಿಫಾರಸುಗಳನ್ನು ಸಾರಿಗೆ ನೌಕರರಿಗೆ ಜಾರಿ ಮಾಡಬೇಕು. ಸರ್ಕಾರಿ ನೌಕರರ ಆರೋಗ್ಯ ಸೇವೆಗಳು ನಮಗೂ ನೀಡಬೇಕು. ಅಂತರ್ ನಿಗಮ ವರ್ಗಾವಣೆ ಪದ್ಧತಿ ತರಬೇಕು. ಮೇಲಧಿಕಾರಿಗಳಿಂದ ಕಿರುಕುಳ ತಡೆಯಬೇಕು. ತರಬೇತಿ ಅವಧಿಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಬೇಕು. ಕೊರೊನಾದಿಂದ ಮೃತಪಟ್ಟ ಸಾರಿಗೆ ನೌಕರರ ಕುಟುಂಬಗಳಿಗೆ ತಲಾ ₹30 ಲಕ್ಷ ಪರಿಹಾರ ನೀಡಬೇಕು’ ಎಂದರು.

‘ನಿಗದಿತ ಗಡುವಿನೊಳಗೆ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಈ ಎಲ್ಲ ಬೇಡಿಕೆಗಳನ್ನು ಬದಿಗಿಟ್ಟು, ಸಾರಿಗೆ ಸಿಬ್ಬಂದಿಯನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಪಟ್ಟು ಹಿಡಿಯುತ್ತೇವೆ’ ಎಂದು ಹೇಳಿದರು.

ಕೋವಿಡ್ ಲಸಿಕೆ: 50 ಲಕ್ಷಕ್ಕೂ ಅಧಿಕ ಜನರಿಂದ ನೋಂದಣಿ

ನವದೆಹಲಿ: ಕೋವಿಡ್–19 ಲಸಿಕೆ ಪಡೆಯಲು ‘ಕೋ-ವಿನ್ 2.0’ ಆನ್‌ಲೈನ್ ವೇದಿಕೆಯಲ್ಲಿ 50 ಲಕ್ಷಕ್ಕೂ ಅಧಿಕ ಜನರು ನೋಂದಾಯಿಸಿಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯದ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

‘48 ಗಂಟೆಗಿಂತ ಕಡಿಮೆ ಅವಧಿಯಲ್ಲಿ ಇಷ್ಟೊಂದು ಜನರು ನೋಂದಣಿ ಮಾಡಿಕೊಳ್ಳುವ ಮೂಲಕ ಲಸಿಕೆ ಪಡೆಯಲು ಇಚ್ಛೆ ವ್ಯಕ್ತಪಡಿಸಿರುವುದು ತಿಳಿಯುತ್ತದೆ. ಇದು ಲಸಿಕೆ ಕುರಿತಾದ ಹಿಂಜರಿಕೆ ಕಡಿಮೆಯಾಗುತ್ತಿರುವುದರ ಸಂಕೇತ’ ಎಂದೂ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

‘ಕೆಲವರು ಎರಡನೇ ಡೋಸ್ ಪಡೆದಿಲ್ಲ. ಅಂಥವರು ಆರು ವಾರಗಳ ಒಳಗಾಗಿ ಎರಡನೇ ಡೋಸ್ ಪಡೆಯಬೇಕು’ ಎಂದು ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಹೇಳಿದರು.

2,616 ಹಿರಿಯ ನಾಗರಿಕರಿಗೆ ಲಸಿಕೆ

ಬೆಂಗಳೂರು: ಹಿರಿಯ ನಾಗರಿಕರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ಎರಡನೇ ದಿನ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. 60 ವರ್ಷ ಮೇಲ್ಪಟ್ಟ 2,616 ಮಂದಿಗೆ ಹಾಗೂ 45 ವರ್ಷ ಮೇಲ್ಪಟ್ಟು ಅನ್ಯ ಕಾಯಿಲೆ ಹೊಂದಿರುವ 278 ಮಂದಿಗೆ ಅಭಿಯಾನದ ಎರಡನೇ ದಿನವಾದ ಮಂಗಳವಾರ ಲಸಿಕೆ ನೀಡಲಾಯಿತು.

10 ಆರೋಗ್ಯ ಕಾರ್ಯಕರ್ತರು ಲಸಿಕೆಯ ಮೊದಲ ಡೋಸ್ ಹಾಗೂ 192 ಆರೋಗ್ಯ ಕಾರ್ಯಕರ್ತರು ಎರಡನೇ ಡೋಸ್ ಪಡೆದರು. ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ 18 ಸಿಬ್ಬಂದಿ ಲಸಿಕೆಯ ಮೊದಲ ಡೋಸ್ ಪಡೆದರು. ಮಂಗಳವಾರ ಒಟ್ಟು 25 ಕೇಂದ್ರಗಳಲ್ಲಿ 4,250 ಮಂದಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಅವರಲ್ಲಿ 3,104 ಮಂದಿ ಲಸಿಕೆ ಪಡೆದರು.

ಲೋಕಾಯುಕ್ತ ನ್ಯಾ.ವಿಶ್ವನಾಥ ಶೆಟ್ಟಿ ಅವರು ರಾಮಯ್ಯ ಸ್ಮಾರಕ ಆಸ್ಪತ್ರೆಯಲ್ಲಿ ಕೋವಿಶೀಲ್ಡ್ ಲಸಿಕೆ ಪಡೆದರು. ಬಳಿಕ ಮಾತನಾಡಿ, ‘ನಾನು ಆರೋಗ್ಯವಾಗಿದ್ದೇನೆ. ಯಾವುದೇ ಆತಂಕ ಪಡದೆ ಹಿರಿಯ ನಾಗರಿಕರು ಲಸಿಕೆ ಪಡೆಯಬಹುದು’ ಎಂದು ಹೇಳಿದರು.

ಮೇಲ್ಮನೆ ಚುನಾವಣೆ: ಬಿಜೆಪಿ ಅಭ್ಯರ್ಥಿ ತುಳಸಿ ಮುನಿರಾಜುಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿನ ಒಂದು ಸ್ಥಾನಕ್ಕೆ ನಡೆಯುವ ಚುನಾವಣೆಗೆ ಬಿಜೆಪಿ ತುಳಸಿ ಮುನಿರಾಜುಗೌಡ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಸಲಿದೆ.

ಇವರ ಹೆಸರನ್ನು ಬಿಜೆಪಿ ವರಿಷ್ಠರು ಅಂತಿಮಗೊಳಿಸಿದ್ದಾರೆ. ರಾಜರಾಜೇಶ್ವರಿ ನಗರದ ಉಪಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಪಕ್ಷಕ್ಕೆ ವಲಸೆ ಬಂದ ಮುನಿರತ್ನ ಅವರಿಗೆ ಟಿಕೆಟ್ ನೀಡಲು ನಿರ್ಧರಿಸಿತ್ತು. ಇದರಿಂದ ಅಸಮಾಧಾನಗೊಂಡಿದ್ದರೂ ಅವರು ಪಕ್ಷದ ತೀರ್ಮಾನಕ್ಕೆ ಬದ್ಧರಾಗುವುದಾಗಿ ಹೇಳಿದ್ದರು.

ಉಪಸಭಾಪತಿಯಾಗಿದ್ದ ಎಸ್.ಎಲ್. ಧರ್ಮೇಗೌಡ ಅವರ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ಇದೇ 15 ರಂದು ಚುನಾವಣೆ ನಡೆಯಲಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	11.51 ಕೋಟಿ ಒಟ್ಟು ಪ್ರಕರಣ	1.113 ಕೋಟಿ ಒಟ್ಟು ಪ್ರಕರಣ	9,52,037 ಒಟ್ಟು ಸೋಂಕಿತರು
ಸಕ್ರಿಯ ಪ್ರಕರಣ	2.17 ಕೋಟಿ	1.66 ಲಕ್ಷ	5,945
ಗುಣಮುಖ	9.08 ಕೋಟಿ	1.08 ಕೋಟಿ	9,33,730
ಸಾವು	25.53 ಲಕ್ಷ	1.57 ಲಕ್ಷ	12,343
ದಿನದ ಏರಿಕೆ: ಹೊಸ ಪ್ರಕರಣ	3.21 ಲಕ್ಷ	12,270	437
ದಿನದ ಏರಿಕೆ: ಗುಣಮುಖ	4.55 ಲಕ್ಷ	12,481	309
ದಿನದ ಏರಿಕೆ: ಸಾವು	6,399	92	07

116 ಐಸಿಯುನಲ್ಲಿ ಇರುವವರು

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಇಟಲಿ
53,147	38,349	13,114

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರಿಟನ್
89.69	34.15	10.99

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	52,238
ತಮಿಳುನಾಡು	12,502
ದೆಹಲಿ	10,911

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	21.69
ಕೇರಳ	10.64
ಆಂಧ್ರಪ್ರದೇಶ	8.90

ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

ಒಟ್ಟು ಸೋಂಕಿತರು	4,06,129
ಗುಣಮುಖರಾದವರು	3,97,430
ಸಕ್ರಿಯ ಪ್ರಕರಣ	4,211
ಸಾವು	4,487

ಮಂಗಳವಾರದ ಏರಿಕೆ

ದೃಢಪಟ್ಟ ಪ್ರಕರಣ	282
ಗುಣಮುಖ	159
ಸಾವು	4

ಕೋವಿಡ್:437 ಹೊಸ ಪ್ರಕರಣ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 437 ಕೋವಿಡ್ ಪ್ರಕರಣಗಳು ಹೊಸದಾಗಿ ಮಂಗಳವಾರ ದೃಢಪಟ್ಟಿದ್ದು, ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.52 ಲಕ್ಷ ದಾಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿಯಲ್ಲಿ ಸಾಗಿದೆ. ಸೋಂಕಿತರ ಪೈಕಿ ಬೆಂಗಳೂರಿನಲ್ಲಿ ನಾಲ್ಕು ಜನ, ಮೈಸೂರಿನಲ್ಲಿ ಇಬ್ಬರು ಹಾಗೂ ತುಮಕೂರು ಒಬ್ಬರು ಸೇರಿ ಒಟ್ಟು ಏಳು ಮಂದಿ ಮಂಗಳವಾರ ಮೃತಪಟ್ಟಿದ್ದಾರೆ.

ಈವರೆಗೆ 12,343 ಮಂದಿ ಸಾವಿಗೀಡಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, ಸದ್ಯ 5,945 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 116 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವ ಕಾರಣ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದೆ.

ಈವರೆಗೆ 1.89 ಲಕ್ಷ ಮಂದಿ ಪರೀಕ್ಷೆಗೆ ಒಳಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬ್ರಿಟನ್‌ನಿಂದ ಮತ್ತೆ 299 ಮಂದಿ ಬಂದಿದ್ದಾರೆ. ಕಳೆದ ನ.25ರ ಬಳಿಕ ಇಲ್ಲಿಗೆ ಬಂದವರ ಸಂಖ್ಯೆ 12,786ಕ್ಕೆ ತಲುಪಿದೆ. ಅವರಲ್ಲಿ ಈವರೆಗೆ 63 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 25 ಮಂದಿಯಲ್ಲಿ ರೂಪಾಂತರ ವೈರಾಣು ಕಾಣಿಸಿಕೊಂಡಿದೆ.

ಬೆಂಗಳೂರಿನಲ್ಲಿ 282 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.06 ಲಕ್ಷ ದಾಟಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 19, ಬೀದರ್ 16, ಮೈಸೂರು ಹಾಗೂ ತುಮಕೂರಿನಲ್ಲಿ ತಲಾ 15 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

ರಾಜ್ಯಪಾಲರಿಗೆ ಲಸಿಕೆ

ರಾಜ್ಯಪಾಲ ವಜುಭಾಯಿ ವಾಲಾ ಅವರು ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಮಂಗಳವಾರ ಕೋವಿಡ್ ಲಸಿಕೆ ಹಾಕಿಸಿಕೊಂಡರು. ಲಸಿಕೆ ಹಾಕಿಸಿಕೊಳ್ಳಲು ರಾಜಭವನ ಕಚೇರಿಯ ಸಿಬ್ಬಂದಿ ಆನ್‌ಲೈನ್ ಮೂಲಕ ಮೊದಲೇ ನೋಂದಣಿ ಮಾಡಿದ್ದರು.

‘ಆಸ್ಪತ್ರೆಗೆ ಮಧ್ಯಾಹ್ನ 2.45ಕ್ಕೆ ಆಗಮಿಸಿ ಅವರು ಲಸಿಕೆ ಹಾಕಿಸಿಕೊಂಡರು. ಅರ್ಧ ಗಂಟೆಯವರೆಗೆ ನಿಗಾ ಕೊಠಡಿಯಲ್ಲಿ ವಿಶ್ರಾಂತಿ ಪಡೆದರು. ಯಾವುದೇ ಅಡ್ಡ-ಪರಿಣಾಮಗಳು ಕಾಣಿಸಿಕೊಳ್ಳದ ಕಾರಣ ಆಸ್ಪತ್ರೆಯಿಂದ ಕ್ಷೇಮವಾಗಿ ತೆರಳಿದರು’ ಎಂದು ಕೆ.ಸಿ.ಜನರಲ್ ಆಸ್ಪತ್ರೆ ಅಧಿಕಾರಿಗಳು ತಿಳಿಸಿದರು.

ರಾಜ್ಯದಲ್ಲಿ ಸೋಮವಾರದಿಂದ ಆರಂಭಗೊಂಡಿರುವ ‘ಕೋವಿಡ್ ಲಸಿಕೆ ಅಭಿಯಾನ 2.0’ರಡಿ ಮಂಗಳವಾರವೂ 5,166 ಹಿರಿಯ ನಾಗರಿಕರು ಹಾಗೂ 1,147 ಮಂದಿ ನಾನಾ ಆರೋಗ್ಯ ಸಮಸ್ಯೆ ಹೊಂದಿರುವವರು ಸೇರಿ ಒಟ್ಟು 6,313 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ.

ತಾಂತ್ರಿಕ ಸಮಸ್ಯೆಯಿಂದ ಅಭಿಯಾನದ ಮೊದಲ ದಿನ ನಿರೀಕ್ಷಿತ ಪ್ರಮಾಣದ ಲಸಿಕೆ ವಿತರಣೆ ಹಿನ್ನಡೆ ಕಂಡಿತು. ಕೆಲವು ಆಸ್ಪತ್ರೆಗಳಲ್ಲಿ ಸರ್ವರ್ ಸಮಸ್ಯೆ ಎದುರಾಗಿ, ಲಸಿಕೆ ನೀಡಲು ಆಗಲಿಲ್ಲ. ಈ ಕಾರಣದಿಂದ ಕೇವಲ 2,884 ಮಂದಿಗೆ ಮಾತ್ರ ಲಸಿಕೆ ಸಾಧ್ಯವಾಯಿತು.

ಮಂಗಳವಾರ ಬೆಳಿಗ್ಗೆ 9 ಗಂಟೆಯಿಂದ ಲಸಿಕೆ ವಿತರಣೆ ಆರಂಭಿಸಿದ್ದರಿಂದ ಬಹಳಷ್ಟು ಆಸ್ಪತ್ರೆಗಳಲ್ಲಿ ನಿಗದಿತ ಗುರಿಯಂತೆ 200 ಮಂದಿಗೆ ಲಸಿಕೆ ಹಾಕಲಾಯಿತು. ತಾಂತ್ರಿಕ ಸಮಸ್ಯೆಗಳನ್ನು ಅಡ್ಡಿಪಡಿಸಿದರೂ ಎರಡನೇ ದಿನ ಲಸಿಕೆ ವಿತರಣೆ ಮುನ್ನಡೆ ಸಾಧಿಸಿದೆ. 45-60 ವರ್ಷ ಹಾಗೂ ಮೇಲ್ಪಟ್ಟವರು ಸೇರಿದಂತೆ ಬೆಂಗಳೂರು ನಗರದಲ್ಲಿ 2,153, ಮೈಸೂರು 1,022, ಬಳ್ಳಾರಿ, 541, ಬೆಳಗಾವಿ 509, ಉಡುಪಿ 401, ಉತ್ತರ ಕನ್ನಡ 373, ಶಿವಮೊಗ್ಗ 365, ಧಾರವಾಡ 311, ಬೆಂಗಳೂರು ಗ್ರಾಮಾಂತರ 298, ಬೀದರ್ 268, ತುಮಕೂರು 266, ಕಲಬುರ್ಗಿ ಜಿಲ್ಲೆಯಲ್ಲಿ 252 ಮಂದಿ ಲಸಿಕೆ ಪಡೆದುಕೊಂಡರು.

‘ಯಾದಗಿರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಲಸಿಕೆ ಹಾಕಲಾಗಿದೆ. ಲಸಿಕೆ ಪಡೆದವರಲ್ಲಿ ಯಾರಿಗೂ ಯಾವುದೇ ರೀತಿಯ ಅಡ್ಡಪರಿಣಾಮಗಳು ವರದಿಯಾಗಿಲ್ಲ’ ಎಂದೂ ಆರೋಗ್ಯ ಇಲಾಖೆ ತಿಳಿಸಿದೆ.



ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರು ಮಂಗಳವಾರ ಕೊರೊನಾ ಲಸಿಕೆ ಹಾಕಿಸಿಕೊಂಡರು.



ಹಿರೇಕೆರೂರಿನ ತಮ್ಮ ಮನೆಯಲ್ಲಿ ಕೋವಿಡ್ ಲಸಿಕೆ ಪಡೆದ ಕೃಷಿ ಸಚಿವ ಬಿ.ಸಿ.ಪಾಟೀಲ

ಮನೆಯಲ್ಲೇ ಲಸಿಕೆ ಪಡೆದ ಸಚಿವ!

ಹಾವೇರಿ: ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಹಿರೇಕೆರೂರಿನ ತಮ್ಮ ಮನೆಯಲ್ಲೇ ಮಂಗಳವಾರ ಸರ್ಕಾರಿ ವೈದ್ಯರಿಂದ ಕೋವಿಡ್ ಲಸಿಕೆ ಪಡೆದರು.

ಕೋವಿಡ್ ಮಾರ್ಗಸೂಚಿ ಪ್ರಕಾರ ಜಿಲ್ಲಾಡಳಿತ ನಿಗದಿಪಡಿಸಿದ ಸರ್ಕಾರಿ ಆಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳಲ್ಲೇ ಕೋವಿಡ್ ಲಸಿಕೆ ಪಡೆಯಬೇಕು. ಆದರೆ, ಸಚಿವರು ಮನೆಗೇ ವೈದ್ಯಕೀಯ ಸಿಬ್ಬಂದಿ ಕರೆಸಿಕೊಂಡು, ತಾವು ಮತ್ತು ಪತ್ನಿ ವನಜಾ ಲಸಿಕೆ ಹಾಕಿಸಿಕೊಂಡಿರುವುದು ಮಾರ್ಗಸೂಚಿಯ ಉಲ್ಲಂಘನೆ ಎಂಬ ಆರೋಪ ಕೇಳಿಬರುತ್ತಿದೆ.

ಮಾರ್ಗಸೂಚಿ ಗೊತ್ತಿರಲಿಲ್ಲ: ‘ಮನೆ ಬಳಿ ಬಹಳಷ್ಟು ಜನರು ಕಾಯುತ್ತಿದ್ದರು. ಹಲವಾರು ಕಾರ್ಯಕ್ರಮಗಳೂ ಇದ್ದವು. ಹೀಗಾಗಿ ಮನೆಗೆ ಕರೆಸಿಕೊಂಡು ಲಸಿಕೆ ಹಾಕಿಸಿಕೊಂಡೆ. ಕೆಮ್ಮು, ಜ್ವರ ಬಂದಾಗ ವೈದ್ಯರನ್ನು ಕರೆಯಿಸುವಂತೆ ಪಡೆದುಕೊಂಡೆ. ಲಸಿಕೆ ಪಡೆದ ನಂತರ 30 ನಿಮಿಷ ವಿಶ್ರಾಂತಿ ಪಡೆಯಬೇಕು ಎಂದು ಎಂಬುದು ಗೊತ್ತಿತ್ತು. ಮಾರ್ಗಸೂಚಿ ಬಗ್ಗೆ ಗೊತ್ತಿರಲಿಲ್ಲ’ ಎಂದು ಸಚಿವರು ಪ್ರತಿಕ್ರಿಯಿಸಿದರು.

ಟಿ.ಎಚ್.ಒ.ಗೆ ನೋಟಿಸ್: ‘ಪ್ರಕರಣಕ್ಕೆ ಸಂಬಂಧಪಟ್ಟಂತೆ, ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿದ ಹಿರೇಕೆರೂರು ತಾಲ್ಲೂಕು ವೈದ್ಯಾಧಿಕಾರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ’ ಎಂದು ಡಿಎಚ್‌ಒ ಡಾ.ರಾಜೇಂದ್ರ ದೊಡ್ಡಮನಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

ಕೊರೊನಾ ಪೀಡಿತರಾಗಿದ್ದ ಸಚಿವ: 2020ರ ಜುಲೈ ತಿಂಗಳಲ್ಲಿ ಬಿ.ಸಿ. ಪಾಟೀಲ, ಅವರ ಪತ್ನಿ, ಅಳಿಯ ಸೇರಿ ಕುಟುಂಬದ ಐವರಿಗೆ ಕೊರೊನಾ ಸೋಂಕು ತಗುಲಿತ್ತು. ಬೆಂಗಳೂರಿನ ನಿವಾಸದಲ್ಲಿ ಕ್ವಾರಂಟೈನ್ ಆಗಿ, ಚಿಕಿತ್ಸೆ ಪಡೆದಿದ್ದರು.

ಟೊಯೊಟಾ ನೌಕರರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ರಾಮನಗರ: ‘ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಇರುವ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ಸ್ ನೌಕರರ ಮುಷ್ಕರವು ಅಂತ್ಯಗೊಂಡಿದ್ದು, ಪೂರ್ಣ ಪ್ರಮಾಣದಲ್ಲಿ ಉತ್ಪಾದನೆ ಆರಂಭವಾಗಲಿದೆ’ ಎಂದು ಟಿಕೆಎಂ ಆಡಳಿತ ಮಂಡಳಿ ತಿಳಿಸಿದೆ. ಆದರೆ ಹೋರಾಟವನ್ನು ಬೇರೆ ರೂಪದಲ್ಲಿ ಮುಂದುವರಿಸುವುದಾಗಿ ಕಾರ್ಮಿಕರ ಯೂನಿಯನ್ ಸ್ಪಷ್ಟಪಡಿಸಿದೆ.

‘3350 ಕಾಯಂ ನೌಕರರ ಪೈಕಿ ಬಹುತೇಕ ಕಾರ್ಮಿಕರು ಈಗಾಗಲೇ ಕೆಲಸಕ್ಕೆ ಹಾಜರಾಗುತ್ತಿದ್ದಾರೆ. ಮಾ. 1ರಂದು ಟಿಕೆಎಂ ಸದಸ್ಯರು ನೀಡಿದ ವರದಿಯನ್ನು ಆಡಳಿತ ಮಂಡಳಿ ಒಪ್ಪಿದೆ. ಇದೇ 5ರ ಒಳಗೆ ಎಲ್ಲ ಕಾರ್ಮಿಕರು ಕೆಲಸಕ್ಕೆ ಹಾಜರಾಗುವಂತೆ ಸೂಚಿಸಿದ್ದೇವೆ. ಪರಸ್ಪರ ನಂಬಿಕೆ ಮತ್ತು ಗೌರವದ ಆಧಾರದ ಮೇಲೆ ಕಾರ್ಯ ನಿರ್ವಹಿಸುವಂತೆ ನೌಕರರಲ್ಲಿ ಮನವಿ ಮಾಡಿದ್ದೇವೆ’ ಎಂದು ಟಿಕೆಎಂ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ಟೊಯೊಟಾ ಕಾರ್ಮಿಕರ ಸಂಘದ ಅಧ್ಯಕ್ಷ ಪ್ರಸನ್ನಕುಮಾರ್ ಚಕ್ಕರೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ ‘ನಿರಂತರ ಹೋರಾಟದ ಕಾರಣ ನಾವೆಲ್ಲ ಜೀವನ ನಿರ್ವಹಣೆ ಮಾಡುವುದು ಕಷ್ಟವಾಗಿದೆ. ಕಾರ್ಮಿಕರು ಹಾಗೂ ಕಂಪನಿ ಹಿತದೃಷ್ಟಿಯಿಂದ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಆದರೆ ಕಾರ್ಮಿಕರು ತಮ್ಮ ಬಿಡುವಿನ ವೇಳೆಯಲ್ಲಿ ಧರಣಿ, ಉಪವಾಸ ಸತ್ಯಾಗ್ರಹ ಮೊದಲಾದ ಮಾರ್ಗಗಳ ಮೂಲಕ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ಹೋರಾಟ ಮುಂದುವರಿಸುತ್ತೇವೆ’ ಎಂದು ತಿಳಿಸಿದ್ದಾರೆ.

‘ಮಾಗಡಿ ಶಾಸಕ ಎ.ಮಂಜುನಾಥ್ ಕಾರ್ಮಿಕರ ಹೋರಾಟವನ್ನು ಮುರಿಯುವ ಷಡ್ಯಂತ್ರ ಮಾಡಿದ್ದಾರೆ, ಕಾರ್ಮಿಕ ವಿರೋಧಿಯಾಗಿ ನಡೆದುಕೊಂಡಿದ್ದಾರೆ’ ಎಂದು ಅವರು ದೂರಿದ್ದಾರೆ.

ನಬಾರ್ಡ್‌ನಿಂದ 644 ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ ₹198.96 ಕೋಟಿ ಸಾಲ

‘ಆತ್ಮನಿರ್ಭರ್’ ರಾಜ್ಯ ನಂಬರ್ 1: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದ ಆತ್ಮ ನಿರ್ಭರ್ ಯೋಜನೆಯಡಿ ನಬಾರ್ಡ್ (ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್) ಈವರೆಗೆ 644 ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಗೆ (ಪ್ಯಾಕ್ಸ್‌ಗಳು) ₹ 198.96 ಕೋಟಿ ಸಾಲ ಮಂಜೂರು ಮಾಡಿದೆ. ಈ ಯೋಜನೆ ಅನುಷ್ಠಾನದಲ್ಲಿ ಇಡೀ ದೇಶದಲ್ಲಿಯೇ ಕರ್ನಾಟಕ ಮೊದಲ ಸ್ಥಾನದಲ್ಲಿದೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ಗಳ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಈವರೆಗೆ 949 ಪ್ಯಾಕ್ಸ್‌ಗಳು ₹355.84 ಕೋಟಿ ಸಾಲಕ್ಕೆ ಅರ್ಜಿ ಸಲ್ಲಿಸಿವೆ. ಮಾರ್ಚ್ ಅಂತ್ಯದೊಳಗೆ 1,000 ಪ್ಯಾಕ್ಸ್‌ಗಳ ಯೋಜನೆಯ ಲಾಭ ಪಡೆಯುವ ಗುರಿ ಹೊಂದಲಾಗಿದೆ’ ಎಂದು ಅವರು ತಿಳಿಸಿದರು.

‘ಯೋಜನೆಯಲ್ಲಿ ರೈತರ ಜಮೀನುಗಳಿಗೆ ಕೊಯ್ಲು ನಂತರ ಮೂಲಸೌಕರ್ಯವನ್ನು ಪ್ಯಾಕ್ಸ್, ರೈತ ಉತ್ಪಾದಕ ಸಂಘಗಳು, ಅಗ್ರಿ ಎಂಟರ್‌ಪ್ರೈಸಸ್‌ಗಳ ಮೂಲಕ ಒದಗಿಸಲು ಉದ್ದೇಶಿಸಲಾಗಿದೆ. ಪ್ರತಿ ಪ್ಯಾಕ್ಸ್‌ಗಳಿಗೆ ತಲಾ ₹ 2 ಕೋಟಿ ಸಾಲ ನೀಡಲಾಗುತ್ತದೆ. ಆ ಮೂಲಕ, ಪ್ಯಾಕ್ಸ್‌ಗಳನ್ನು ಬಹುಪಯೋಗಿ ಸೇವಾ ಕೇಂದ್ರಗಳಾಗಿ ಪರಿವರ್ತಿಸಲು ಬ್ಯಾಂಕುಗಳಿಂದ ಶೇ 4ರ ಬಡ್ಡಿ ದರದಲ್ಲಿ ಕೇಂದ್ರ ಸಾಲ ಮಂಜೂರು ಮಾಡುತ್ತದೆ. ಅದರಲ್ಲಿ ಕೇಂದ್ರದಿಂದ ಶೇ 3 ಬಡ್ಡಿ ದರ ಸಹಾಯಧನ ಸಿಗುತ್ತದೆ. ಪ್ಯಾಕ್ಸ್‌ಗಳಿಗೆ ಕೇವಲ ಶೇ 1 ಬಡ್ಡಿದರದಲ್ಲಿ ಸಾಲ ಸಿಕ್ಕಂತಾಗುತ್ತದೆ’ ಎಂದು ಅವರು ವಿವರಿಸಿದರು.



ಸಹಕಾರಿ ಇಲಾಖೆ ವ್ಯಾಪ್ತಿಗೆ ಒಳಪಡುವ ವಿವಿಧ ಸಂಸ್ಥೆಗಳಿಗೆ 5,000 ಹುದ್ದೆಗಳ ನೇಮಕಾತಿಗೆ ಈಗಾಗಲೇ ಚಾಲನೆ ನೀಡಲಾಗಿದೆ

ಎಸ್.ಟಿ. ಸೋಮಶೇಖರ್
ಸಹಕಾರ ಸಚಿವ

‘ಪ್ರಸಕ್ತ ಸಾಲಿನಲ್ಲಿ ಮಾರ್ಚ್ ಅಂತ್ಯದ ವೇಳೆಗೆ 24.50 ಲಕ್ಷ ರೈತರಿಗೆ ₹ 1,450 ಕೋಟಿ ಅಲ್ಪಾವಧಿ ಬೆಳೆಸಾಲ, 70 ಲಕ್ಷ ರೈತರಿಗೆ ₹1,200 ಕೋಟಿ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಅದರಲ್ಲಿ ಈವರೆಗೆ 21.64 ಲಕ್ಷ ರೈತರಿಗೆ ₹ 14,979.73 ಕೋಟಿ ಅಲ್ಪಾವಧಿ ಸಾಲ ವಿತರಿಸಲಾಗಿದೆ. 36 ಲಕ್ಷ ರೈತರಿಗೆ ₹800.51 ಕೋಟಿ ಮಧ್ಯಮಾವಧಿ, ದೀರ್ಘಾವಧಿ ಸಾಲ ವಿತರಿಸಲಾಗಿದೆ. ತಿಂಗಳ ಅಂತ್ಯದೊಳಗೆ ಗುರಿ ಸಾಧಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದರು.

‘36 ಲಕ್ಷ ಸ್ವಸಹಾಯ ಸಂಘಗಳಿಗೆ ₹ 1,200 ಕೋಟಿ ಸಾಲ ವಿತರಿಸುವ ಗುರಿ ಹೊಂದಲಾಗಿತ್ತು. ಅದರಲ್ಲಿ 21 ಲಕ್ಷ ಗುಂಪುಗಳಿಗೆ ₹ 754.39 ಕೋಟಿ (ಶೇ 62.86) ಗುರಿ ಸಾಧಿಸಲಾಗಿದೆ. ‘ಬಡವರ ಬಂಧು’ ಯೋಜನೆಯಡಿ 8,778 ಬೀದಿ ವ್ಯಾಪಾರಿಗಳಿಗೆ ₹ 7.69 ಕೋಟಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗಿದೆ’ ಎಂದರು.

‘ಕಾಯಕ’ ಯೋಜನೆಯಲ್ಲಿ 2,500 ಸ್ವಸಹಾಯ ಗುಂಪುಗಳ ಪೈಕಿ 245 ಗುಂಪುಗಳಿಗೆ ₹ 10.81 ಕೋಟಿ ಸಾಲ ನೀಡಲಾಗಿದೆ’ ಎಂದೂ ಸಚಿವ ಸೋಮಶೇಖರ್ ವಿವರಿಸಿದರು.

‘ಕೋವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದ ರೈತರಿಗೆ ನೆರವು ನೀಡುವ ಉದ್ದೇಶದಿಂದ ನಾಲ್ಕು ವಿಭಾಗಗಳಲ್ಲಿ ಈಗಾಗಲೇ ‘ಆರ್ಥಿಕ ಸ್ಪಂದನ’ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವಿವಿಧ ಉದ್ದೇಶಗಳಿಗೆ ₹37,366 ಕೋಟಿ ಸಾಲವನ್ನು ವಿತರಿಸಲಾಗಿದೆ’ಎಂದೂ ಅವರು ಹೇಳಿದರು.

ಸಕ್ಕರೆ ಕಾರ್ಖಾನೆಗಳ ಸುಸ್ತಿ ಸಾಲ ₹ 538 ಕೋಟಿ!

‘ಡಿಸಿಸಿ ಬ್ಯಾಂಕುಗಳಿಂದ 133 ಸಕ್ಕರೆ ಕಾರ್ಖಾನೆಗಳಿಂದ ನೀಡಿದ್ದ ಸಾಲದಲ್ಲಿ ₹ 5,502 ಕೋಟಿ ಹೊರಬಾಕಿ ಇದೆ.

2020–21ನೇ ಸಾಲಿನಲ್ಲಿ ₹1,422 ಕೋಟಿ ವಸೂಲಿಗೆ ಬಂದಿದ್ದು, ಅದರಲ್ಲಿ ₹653 ಕೋಟಿ ವಸೂಲಾಗಿದೆ. ₹538 ಕೋಟಿ ಸುಸ್ತಿಯಾಗಿದೆ. ದಾವೆ ದಾಖಲಿಸುವ ಮೂಲಕ ಸುಸ್ತಿ ಸಾಲ ವಸೂಲಿಗೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಸಚಿವರು ವಿವರಿಸಿದರು.

ಸಾರಿಗೆ ಬಸ್ ಸಮಸ್ಯೆ; ವಿದ್ಯಾರ್ಥಿಗಳ ಗೋಳು ಕೇಳೋರಿಲ್ಲ!

ಶಾಲೆಗಾಗಿ ನಿತ್ಯ 7 ಕಿ.ಮೀ ‘ಪಾದಯಾತ್ರೆ’

• ಬಸವರಾಜ ಭೋಗಾವತಿ



ಬೊಮ್ಮನಾಳ ಗ್ರಾಮದಿಂದ ಮಾಚನೂರು ಗ್ರಾಮದ ಶಾಲೆಗೆ ನಡೆದು ಹೋಗುತ್ತಿರುವ ವಿದ್ಯಾರ್ಥಿಗಳು

ಮಾನ್ವಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಕಪಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮನಾಳ ಗ್ರಾಮದ ಮಕ್ಕಳು ಶಾಲೆಗಾಗಿ ನಿತ್ಯ 7 ಕಿ.ಮೀ ನಡೆದೇ ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಬೊಮ್ಮನಾಳ ಗ್ರಾಮದ 30ಕ್ಕೂ ಅಧಿಕ ಮಕ್ಕಳು ಪಕ್ಕದ ಮಾಚನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಮಾಚನೂರು ಗ್ರಾಮದಲ್ಲಿ ಶಾಲೆ ಆರಂಭವಾಗುವ ವೇಳೆ ಮತ್ತು ಶಾಲೆ ಬಿಡುವ ಸಮಯಕ್ಕೆ ಸಾರಿಗೆ ಬಸ್ ವ್ಯವಸ್ಥೆ ಇಲ್ಲ. ಹೀಗಾಗಿ ಬೊಮ್ಮನಾಳ ಗ್ರಾಮದ ಎಲ್ಲಾ ವಿದ್ಯಾರ್ಥಿಗಳು ನಿತ್ಯ ನಡೆದು ಹೋಗಿ ಬರಬೇಕಾಗಿದೆ.

ಬೊಮ್ಮನಾಳ, ಮಾಚನೂರು, ಬೇವಿನೂರು, ತುಪ್ಪದೂರು ಗ್ರಾಮಗಳ ಕಾಲೇಜು ವಿದ್ಯಾರ್ಥಿಗಳು ಮಾಚನೂರು ಗ್ರಾಮದಿಂದ ಮಾನ್ವಿ ಪಟ್ಟಣಕ್ಕೆ ತೆರಳಲು ಬೆಳಿಗ್ಗೆ ಒಂದು ಬಸ್ ಸಂಚರಿಸುತ್ತಿದೆ. ಆದರೆ, ಬೊಮ್ಮನಾಳ ಸೇರಿ ಈ ಭಾಗದ ಇತರ ಗ್ರಾಮಗಳ ಕಾಲೇಜು ವಿದ್ಯಾರ್ಥಿಗಳು ಜಿಲ್ಲಾ ಕೇಂದ್ರಕ್ಕೆ ತೆರಳಲು ನಿಗದಿತ ಸಮಯಕ್ಕೆ ಬಸ್ ಸಂಚಾರ ಇಲ್ಲ.

ಪ್ರಜಾವಾಣಿ ವಿಶೇಷ

ಮಾನ್ವಿ-ರಾಯಚೂರು ಮಾರ್ಗದಲ್ಲಿ ಬರುವ ಬೊಮ್ಮನಾಳ ಕ್ರಾಸ್ ಹತ್ತಿರ ಸಾರಿಗೆ ಬಸ್‌ಗಳನ್ನು ನಿಲ್ಲಿಸುವುದಿಲ್ಲ. ನೇರ ಬಸ್ ಸೌಲಭ್ಯ ಇಲ್ಲದ ಕಾರಣ ಬೊಮ್ಮನಾಳ ಗ್ರಾಮದ ಕಾಲೇಜು ವಿದ್ಯಾರ್ಥಿಗಳಿಗೆ ರಾಯಚೂರಿನಿಂದ ಕುರ್ಡಿ ಕ್ರಾಸ್‌ನವರೆಗೆ ಬಸ್ ಪಾಸ್ ನೀಡಲಾಗಿದೆ. ವಿದ್ಯಾರ್ಥಿಗಳು ಪ್ರತಿ ದಿನ ಬೊಮ್ಮನಾಳ ಕ್ರಾಸ್‌ನಿಂದ ಕುರ್ಡಿ ಕ್ರಾಸ್‌ವರೆಗೆ ನಡೆದು ಹೋಗಬೇಕು ಅಥವಾ ಆಟೊ, ಟಂಟಂ ವಾಹನಗಳಲ್ಲಿ ಹಣ ಕೊಟ್ಟು ಸಂಚರಿಸಬೇಕಾದ ಪರಿಸ್ಥಿತಿ ಇದೆ.

ಪ್ರತಿ ದಿನ ಬೆಳಿಗ್ಗೆ 10ಗಂಟೆಯ ನಂತರ ಮಾನ್ವಿಯಿಂದ ಬೊಮ್ಮನಾಳ ಮಾರ್ಗವಾಗಿ ಒಂದು ಬಸ್ ಸಂಚರಿಸುತ್ತದೆ. ಶಾಲಾ ಸಮಯಕ್ಕೆ ಸರಿಯಾಗಿ ಈ ಬಸ್ ಬಂದರೆ ವಿದ್ಯಾರ್ಥಿಗಳಿಗೆ ಅನುಕೂಲ ಎನ್ನುತ್ತಾರೆ ಗ್ರಾಮಸ್ಥರು.

‘ಸಾರಿಗೆ ಬಸ್ ಕೊರತೆಯಿಂದ ಬೊಮ್ಮನಾಳ-ಮಾಚನೂರು ಭಾಗದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ನಿತ್ಯ ತೊಂದರೆಯಾಗುತ್ತಿದೆ. ಈ ಭಾಗಕ್ಕೆ ಹೆಚ್ಚುವರಿ ಬಸ್‌ಗಳ ಸೌಲಭ್ಯ ಕಲ್ಪಿಸಬೇಕು’ ಎಂದು ಮಾಚನೂರು ಗ್ರಾ.ಪಂ ಸದಸ್ಯ ಅಂಬಣ್ಣ ಕಡದೊಡ್ಡಿ ಒತ್ತಾಯಿಸಿದ್ದಾರೆ.

> ಗ್ರಾಮೀಣ ಭಾಗದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮರ್ಪಕ ಬಸ್ ಸೌಲಭ್ಯ ಒದಗಿಸಲು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.
> **ನಾಗನಗೌಡ ಬೊಮ್ಮನಾಳ**, ಅಧ್ಯಕ್ಷ, ಗ್ರಾಮ ಪಂಚಾಯಿತಿ ಕಪಗಲ್

> ಬೊಮ್ಮನಾಳ-ಮಾಚನೂರು ಭಾಗದಲ್ಲಿ ಹೆಚ್ಚಿನ ಬಸ್‌ಗಳ ಸೌಲಭ್ಯ ಕಲ್ಪಿಸಲು ಸಾರಿಗೆ ಸಂಸ್ಥೆಯ ಮೇಲಧಿಕಾರಿಗಳ ಜತೆ ಚರ್ಚಿಸಲಾಗುವುದು.
> **ಹನುಮಂತರಾಯ**, ಸಾರಿಗೆ ನಿರೀಕ್ಷಕ, ಮಾನ್ವಿ ಘಟಕ

ಪಂಡಿತ್ ಹಾಸಣಗಿಗೆ ರಾಜಗುರು ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಧಾರವಾಡ: ಹಿರಿಯ ಹಿಂದೂಸ್ತಾನಿ ಗಾಯಕ ಪಂಡಿತ್ ಗಣಪತಿ ಭಟ್ ಹಾಸಣಗಿ ಅವರಿಗೆ ಪಂಡಿತ್ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಧಾರವಾಡದ ಸಿತಾರ್ ವಾದಕ ಉಸ್ತಾದ್ ಹಫೀಜ್ ಬಾಲೇಖಾನ್ ಮತ್ತು ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತ ಗಾಯಕಿ ಮೈಸೂರಿನ ವಿದುಷಿ ಲಕ್ಷ್ಮೀ ನಾಗರಾಜ ಅವರಿಗೆ ಯುವ ಪ್ರಶಸ್ತಿ ಲಭಿಸಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಮಾರ್ಚ್ 13ರಂದು ನಗರದ ಸೃಜನಾ ರಂಗಮಂದಿರದಲ್ಲಿ ಜರುಗಲಿದೆ. ಜತೆಗೆ ಪ್ರಶಸ್ತಿ ಪುರಸ್ಕೃತರ ಸಂಗೀತ ಕಛೇರಿ ಜರುಗಲಿದೆ ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಮೀಸಲಾತಿ ಹೋರಾಟ: ಸಂಸದ ಕಿಡಿ

ಮೈಸೂರು: ‘ಮೀಸಲಾತಿ ನೀಡುವ ವಿಷಯ ಕೇಂದ್ರಕ್ಕೆ ಸಂಬಂಧಿಸಿದ್ದು. ಮುಖ್ಯಮಂತ್ರಿ ಹಾಗೂ ಕಾನೂನು ಸಚಿವರು ಒಂದೇ ಹೇಳಿಕೆ ನೀಡುವ ಮೂಲಕ, ಈ ವಿಷಯವನ್ನು ತಮ್ಮ ಮಿತಿಯೊಳಗೆ ಸಮಾಪ್ತಿಗೊಳಿಸಬೇಕು’ ಎಂದು ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಮಂಗಳವಾರ ತಾಕೀತು ಮಾಡಿದರು.

‘ಸಚಿವ ಎಂ.ಟಿ.ಬಿ.ನಾಗರಾಜ್ ₹ 10 ಕೋಟಿ ಕೊಟ್ಟು ಹೆಲಿಕಾಪ್ಟರ್ ಖರೀದಿಸುತ್ತಾರೆ. ಅಂಥವರ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸಬೇಕಾ? ಕೇಳಿದವರನ್ನೆಲ್ಲ 2ಎ ಗೆ ಸೇರ್ಪಡೆ ಮಾಡಿದರೆ, ಈಗಿರೋರ ಕತೆ ಏನು?’ ಎಂದರು.

ಸಿ.ಎನ್‌.ಆರ್‌.ರಾವ್, ಕೆ.ಕಸ್ತೂರಿ ರಂಗನ್ ಸೇರಿ ಐವರಿಗೆ ಜೀವಮಾನ ಸಾಧನೆ ಪ್ರಶಸ್ತಿ

‘ಶಿಕ್ಷಣ ನೀತಿಯಲ್ಲಿ ಮೂಲ ವಿಜ್ಞಾನಕ್ಕೆ ಒತ್ತು’

ಪ್ರಜಾವಾಣಿ ವಾರ್ತೆ



ಪ್ರಶಸ್ತಿ ಪುರಸ್ಕೃತರ ಜತೆಗೆ ಎಸ್‌.ಆರ್‌.ವಿಶ್ವನಾಥ್, ಡಾ.ಸಿ.ಎನ್‌.ಅಶ್ವತ್ಥನಾರಾಯಣ ಇದ್ದಾರೆ

ಬೆಂಗಳೂರು: ‘ಮೂಲ ವಿಜ್ಞಾನ ಬೋಧನೆಯ ಶೈಲಿ ಬದಲಾಗಬೇಕಿದೆ. ಹಾಗೆಯೇ, ಮಕ್ಕಳಿಗೆ ಮೂಲ ವಿಜ್ಞಾನ ಕಲಿಯಲು ಹೆಚ್ಚೆಚ್ಚು ಪ್ರೋತ್ಸಾಹ ನೀಡಬೇಕಿದೆ‘ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಇಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಜ್ಞಾನಿಗಳನ್ನು ಗೌರವಿಸಿ ಮಾತನಾಡಿದರು.

‘ಹತ್ತು ವರ್ಷಗಳಲ್ಲಿ 150 ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಹತ್ತು ವರ್ಷಗಳಲ್ಲಿ ಎಲ್ಲ ಗುಣಮಟ್ಟದ ಕಾಲೇಜುಗಳು ವಿವಿಗಳಾಗಬೇಕು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ಸುಧಾರಣೆಗಳ ಪರ್ವವೇ ಆರಂಭವಾಗಲಿದೆ’ ಎಂದರು.

ಹಿರಿಯ ಬಾಹ್ಯಾಕಾಶ ವಿಜ್ಞಾನಿ ಡಾ.ಕೆ.ಕಸ್ತೂರಿರಂಗನ್ ಅವರು, ‘ಕೇಂದ್ರವು ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಟಿಸುವ ಮುನ್ನವೇ ಕರ್ನಾಟಕವು ಸರ್ವ ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯಪಡೆ ರಚಿಸಿತ್ತು‘ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ತರಬೇತಿ ಸಂಸ್ಥೆಯನ್ನು ಅಶ್ವತ್ಥನಾರಾಯಣ ಉದ್ಘಾಟಿಸಿದರು.

ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳು (ಜೀವಮಾನ ಸಾಧನೆ ಪ್ರಶಸ್ತಿ): ಪ್ರೊ. ಸಿ.ಎನ್.ಆರ್.ರಾವ್, ಡಾ.ಕೆ. ಕಸ್ತೂರಿ ರಂಗನ್, ಡಾ.ರೋಹಿಣಿ ಗೋಡ್‌ಬೋಲೆ, ಡಾ.ಎಂ. ಮಹಾದೇವಪ್ಪ, ಪ್ರೊ.ಸಿ.ಕಾಮೇಶ್ವರ ರಾವ್.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಜೀವಮಾನ ಸಾಧನೆ ಪ್ರಶಸ್ತಿ (ವಿಜ್ಞಾನ- ಕನ್ನಡದಲ್ಲಿ ಬರವಣಿಗೆ): ನಾಗೇಶ್ ಹೆಗಡೆ, ಡಾ.ಸಿ. ಆರ್.ಚಂದ್ರಶೇಖರ್.

ಅಕಾಡೆಮಿ ಗೌರವ ಫೆಲೋಷಿಪ್: ಡಾ.ಕೆ.ವಿ. ಪ್ರಭು, ಡಾ.ಎನ್. ಕೆ.ನಂದಕುಮಾರ್, ಡಾ.ಟಿ. ಶಿವಾನಂದಪ್ಪ, ಡಾ.ರಾಮಕೃಷ್ಣ, ಪ್ರೊ.ಬಿ.ವೆಂಕಟೇಶ್, ಪ್ರೊ.ಎಸ್. ಆರ್.ನಿರಂಜನ, ಪ್ರೊ. ಕೆ.ಎಸ್. ರಂಗಪ್ಪ, ಡಾ.ಎನ್.ಆರ್.ಶೆಟ್ಟಿ, ಪ್ರೊ. ಎನ್.ಎಂ.ಬುಜುರ್ಕೆ, ಡಾ.ಸಿ.ಎನ್. ಮಂಜುನಾಥ್, ಪ್ರೊ.ಎಂ.ಐ.ಸವದತ್ತಿ.

ಪ್ರೊ.ಕೆ.ಸಿದ್ದಪ್ಪ, ಡಾ.ಎಚ್. ಹೊನ್ನೇಗೌಡ, ಪ್ರೊ.ಆರ್.ಎಸ್. ದೇಶಪಾಂಡೆ, ಡಾ.ಮೃತ್ಯುಂಜಯ, ಡಾ.ಸಿ.ಎನ್.ರವಿಶಂಕರ್, ಡಾ.ರಾಘವೇಂದ್ರ ಭಟ್ಟ, ಡಾ.ಗೋವಿಂದ ಆರ್.ಕಡಂಬಿ.

ಕೊರೊನಾ ವಾರಿಯರ್‌ಗಳಿಗೆ 2ನೇ ಲಸಿಕೆಗೆ ಶುಲ್ಕ: ವಿರೋಧ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಕೊರೊನಾ ವಾರಿಯರ್‌ಗಳಿಗೆ ಮೊದಲ ಹಂತದಲ್ಲಿ ಉಚಿತವಾಗಿ ಕೋವಿಡ್ ಲಸಿಕೆಯನ್ನು ಆಯಾ ಆಸ್ಪತ್ರೆಯಲ್ಲಿಯೇ ಕೊಡಲಾಗಿತ್ತು. ಈಗ ಎರಡನೇ ಹಂತದಲ್ಲಿ ಆಯಾ ಆಸ್ಪತ್ರೆಯಲ್ಲೇ ಲಸಿಕೆ ಪಡೆಯಲು ₹ 250 ಶುಲ್ಕ ನಿಗದಿ ಪಡಿಸಲಾಗಿದ್ದು, ಈ ಕ್ರಮಕ್ಕೆ ವಿರೋಧ ವ್ಯಕ್ತವಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲು ಸರ್ಕಾರ ಶುಲ್ಕ ನಿಗದಿ ಮಾಡಿರುವ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿ ಕೆಪಿಸಿಸಿ ವೈದ್ಯರ ಘಟಕವು ಮಂಗಳವಾರ ಕಲಬುರ್ಗಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ.

‘ಕೋವಿಡ್ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯರ ಸೇವೆಯನ್ನು ಜಿಲ್ಲಾಡಳಿತ ಬಳಸಿಕೊಂಡಿದೆ. ಮೊದಲ ಲಸಿಕೆಯನ್ನು ಉಚಿತವಾಗಿ ನೀಡಿ ಈಗ ಎರಡನೇ ಲಸಿಕೆಗೆ ಶುಲ್ಕ ಕೊಡಿ ಎನ್ನುತ್ತಿರುವುದು ಏಕೆ’ ಎಂದು ಕೆಪಿಸಿಸಿ ವೈದ್ಯರ ಘಟಕದ ರಾಜ್ಯ ಉಪಾಧ್ಯಕ್ಷ ಡಾ. ಕಿರಣ ದೇಶಮುಖ ಪ್ರಶ್ನಿಸಿದ್ದಾರೆ.

‘ನಗರದ ಬಸವೇಶ್ವರ ಆಸ್ಪತ್ರೆಯಲ್ಲಿ ವೈದ್ಯರು, ನರ್ಸ್‌ಗಳು, ಡಿ ಗ್ರೂಪ್ ಸಿಬ್ಬಂದಿ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಸೇರಿ 1900 ಜನರಿಗೆ ಲಸಿಕೆ ನೀಡಬೇಕು. ಮೊದಲು ಇಲ್ಲಿಯೇ ಲಸಿಕೆ ನೀಡಿದ್ದರು. ಈಗ ಉಚಿತವಾಗಿ ಬೇಕೆಂದರೆ ಜಿಲ್ಲಾಸ್ಪತ್ರೆಗೆ ಬನ್ನಿ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಇದೇ ಷರತ್ತನ್ನು ಮುಂಚೆ ಏಕೆ ವಿಧಿಸಲಿಲ್ಲ’ ಎಂದು ಅವರು ಪ್ರಶ್ನಿಸಿದ್ದಾರೆ.

ಲಸಿಕೆಗೆ ಶುಲ್ಕ ವಿಧಿಸುತ್ತಿರುವ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಕೆಪಿಸಿಸಿ ವಕ್ತಾರ ಹಾಗೂ ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ, ‘ಪಿ.ಎಂ. ಕೇರ್ಸ್ ನಿಧಿಗೆ ಜನರ ಹಣ ಧಾರೆ ಎರೆದರೂ ಸರ್ಕಾರ ಲಸಿಕೆಯನ್ನು ಉಚಿತವಾಗಿ ನೀಡುತ್ತಿಲ್ಲವೇಕೆ’ ಎಂದು ಪ್ರಶ್ನಿಸಿದ್ದಾರೆ.

ಕಾವೇರಿ ಕಲುಷಿತ: ಪರಿಸರ ಇಲಾಖೆಯಿಂದ ನಗರಸಭೆ, ಪುರಸಭೆಗಳಿಗೆ ನೋಟಿಸ್, ಗಂಗಾ ನದಿ ಸ್ವಚ್ಛತೆ ಮಾದರಿ

ಹಸಿರು ಬಣ್ಣಕ್ಕೆ ತಿರುಗಿದ ಲಕ್ಷ್ಮಣತೀರ್ಥ

• ಕೆ.ಓಂಕಾರ ಮೂರ್ತಿ

ಮೈಸೂರು: ಹುಣಸೂರು ಪಟ್ಟಣದೊಳಗೆ ಹರಿದು ಹೋಗುವ ಲಕ್ಷ್ಮಣತೀರ್ಥ ನದಿಯಲ್ಲಿ ಹಸಿರು ಪಾಚಿ ಬೆಳೆದಿದ್ದು, ಕಲ್ಮಶ ಸೇರಿ ದುರ್ವಾಸನೆ ಬೀರುತ್ತಿದೆ. ತ್ಯಾಜ್ಯ ತುಂಬಿ ಚರಂಡಿಯಾಗಿ ಮಾರ್ಪಟ್ಟಿದೆ.

ಕಲುಷಿತ ನೀರು ಬಿಳಿಕೆರೆ ಹೋಬಳಿಯ ರಾಮೇನಹಳ್ಳಿ ಬಳಿ ಕಾವೇರಿ ನದಿಗೆ ಸೇರಲಿದೆ. ಈಗಲೂ ಹುಣಸೂರು ನಗರದಿಂದ ಕೊಳಚೆ ನೀರು ಲಕ್ಷ್ಮಣತೀರ್ಥ ನದಿಗೆ ಸೇರುತ್ತಲೇ ಇದೆ. ಹಲವು ಬಾರಿ ಅನುದಾನ ಬಿಡುಗಡೆಯಾಗಿದ್ದರೂ ಶುದ್ಧೀಕರಣ ಪೂರ್ಣ ನಡೆಯಲಿಲ್ಲ.

ಸ್ವಚ್ಛತೆಗೆ ಯೋಜನೆ: ಜೀವನದಿ ಕಾವೇರಿ ಹಾಗೂ ಅದರ ಉಪಪನದಿಗಳು ಭಾರಿ ಪ್ರಮಾಣದಲ್ಲಿ ಕಲುಷಿತ ಆಗುತ್ತಿರುವುದರಿಂದ ಗಂಗಾ ನದಿ ಮಾದರಿಯಲ್ಲಿಯೇ ಸ್ವಚ್ಛತಾ ಅಭಿಯಾನ ಈಗ ರೂಪಿಸಲು ರಾಜ್ಯ ಸರ್ಕಾರ ಈಗ ಮುಂದಾಗಿದೆ.

ಈ ನಿಟ್ಟಿನಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಮತ್ತು ಸಂಬಂಧಿಸಿದ ಇಲಾಖೆಗಳಿಗೆ ನೋಟಿಸ್ ನೀಡಲು ಪರಿಸರ ಹಾಗೂ ಜೀವಿವಿಜ್ಞಾನ ಇಲಾಖೆ ನಿರ್ಧರಿಸಿದೆ.



ಕೊಳಚೆ ನೀರಿನಿಂದ ತುಂಬಿ, ಹಸಿರು ಬಣ್ಣಕ್ಕೆ ತಿರುಗಿರುವ ಲಕ್ಷ್ಮಣತೀರ್ಥ ನದಿ

ಪ್ರಮುಖವಾಗಿ ಕುಶಾಲನಗರ, ಹುಣಸೂರು, ನಂಜನಗೂಡು, ಶ್ರೀರಂಗಪಟ್ಟಣ, ತಿ.ನರಸೀಪುರ, ಕೊಳ್ಳೇಗಾಲ ಪಟ್ಟಣಗಳ ಕೊಳಚೆ ನೀರು ಕಾವೇರಿ ಅಥವಾ ಅದರ ಉಪನದಿಗಳಿಗೆ ಸೇರುತ್ತಿದೆ.

'ಕಾವೇರಿ ನದಿ ಹಾಗೂ ಉಪನದಿಗಳು ಕಲುಷಿತಗೊಳ್ಳುತ್ತಿರುವ ಕಾರಣ ಸಂಬಂಧಿಸಿದ ಇಲಾಖೆಗಳಿಗೆ ನೋಟಿಸ್ ನೀಡಲಾಗುವುದು. ನೀರು ಬಳಕೆ ಮಾಡಲಾಗದಷ್ಟು ನದಿಗಳು ಮಲಿನಗೊಂಡಿವೆ. ಕಾವೇರಿ ನದಿ ಉದ್ದಗಲಕ್ಕೂ ಸ್ವಚ್ಛತೆ ಅಭಿಯಾನ ಕೈಗೊಳ್ಳಲಾಗುವುದು' ಎಂದು ಸಚಿವ ಸಿ.ಪಿ.ಯೋಗೇಶ್ವರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಎಲ್ಲಾ ಕಡೆ ನೀರನ್ನು ನಾವೇ ಕಲುಷಿತಗೊಳಿಸುತ್ತಿದ್ದೇವೆ. ಬೆಂಗಳೂರಿನಲ್ಲಿ ಮಲಿನ ನೀರನ್ನು ಕುಡಿಯುತ್ತಿದ್ದೇವೆ' ಎಂದರು.

> ನಗರ, ಪಟ್ಟಣಗಳಲ್ಲಿ ಕೊಳಚೆ ನೀರನ್ನು ಸಂಸ್ಕರಿಸದೆ ಕಾವೇರಿ ಹಾಗೂ ಉಪನದಿಗಳಿಗೆ ಹರಿಸಲಾಗುತ್ತಿದೆ. ಈ ವ್ಯಾಪ್ತಿಯಲ್ಲಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು
> **ಸಿ.ಪಿ.ಯೋಗೇಶ್ವರ್,** ಪರಿಸರ ಹಾಗೂ ಜೀವಿ ವಿಜ್ಞಾನ ಸಚಿವ

ಮುಖ್ಯಾಂಶಗಳು
- ನದಿ ಸೇರುತ್ತಿರುವ ಪಟ್ಟಣಗಳ ಕೊಳಚೆ ನೀರು
- ರೆಸಾರ್ಟ್, ಕೈಗಾರಿಕೆಗಳಿಂದ ನದಿಗೆ ತ್ಯಾಜ್ಯ
- ಕೆಎಸ್‌ಪಿಸಿಬಿಯಿಂದಲೂ ಸರ್ಕಾರಕ್ಕೆ ಪತ್ರ

ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಸುಮಾರು 98 ಉಪನದಿ, ತೊರೆ, ಹಳ್ಳಗಳು ಕಾವೇರಿ ನದಿ ಸೇರುತ್ತಿವೆ. ಈ ನದಿ ಪಾತ್ರಗಳ ವ್ಯಾಪ್ತಿಗೆ ಬರುವ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದ್ದರಿಂದ ಕೊಳಚೆ ನೀರು ಜಲಮೂಲ ಸೇರುತ್ತಿದೆ. ಕೊಳಚೆ ನೀರನ್ನು ಸಂಸ್ಕರಿಸದೆ ನದಿಗೆ ಹರಿಸುತ್ತಿರುವ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) ಈಚೆಗೆ ಸರ್ಕಾರಕ್ಕೆ ಪತ್ರ ಬರೆದಿತ್ತು.

ಕೊಡಗು ಜಿಲ್ಲೆಯಲ್ಲಿ ನದಿ ಪಾತ್ರಗಳಲ್ಲೇ ರೆಸಾರ್ಟ್ ಹಾಗೂ ಹೋಂಸ್ಟೇ ಹೆಚ್ಚುತ್ತಿವೆ. ಜೊತೆಗೆ ಕಾಫಿ ಕೊಯ್ಲು ಸಂದರ್ಭದಲ್ಲಿ ಕಾಫಿ ಪಲ್ಪಿಂಗ್ ಮಾಡಿದ ನೀರು ಹಾಗೂ ಕೈಗಾರಿಕೆಗಳ ಕಲುಷಿತ ನೀರು ನದಿಗೆ ಹರಿಯುತ್ತಿದೆ.

ನದಿಯಲ್ಲಿ ಸ್ನಾನ ಮಾಡುವವರು, ಪೂಜೆಗೆ ಬರುವವರು ಹಳೆಯ ಬಟ್ಟೆಗಳನ್ನು ನದಿಗೆ ಎಸೆಯುತ್ತಾರೆ. ಪಿಂಡ ಪ್ರದಾನ, ಅಸ್ಥಿ ವಿಸರ್ಜನೆ, ಹೋಮ, ಹವನ ಸಂದರ್ಭದಲ್ಲಿ ಅನ್ನ, ಹಣ್ಣು, ತರಕಾರಿ, ಇತರೆ ವಸ್ತುಗಳನ್ನು ನದಿ ಒಡಲಿಗೆ ಹಾಕುತ್ತಿದ್ದಾರೆ.

'ಕಾವೇರಿ ನದಿಯ ಹಲವೆಡೆ ಪೊದೆ, ಸತ್ತೆ ಗಿಡ ಬೆಳೆದು ತ್ಯಾಜ್ಯ ತುಂಬಿದೆ. ನೀರುಸರಾಗವಾಗಿ ಹರಿಯಲು ಸಾಧ್ಯವಾಗದ ಸ್ಥಿತಿ ಇದೆ' ಎನ್ನುತ್ತಾರೆ ಕಾವೇರಿ ನದಿ ಬಗ್ಗೆ ಯುಜಿಸಿಗೆ ಸಂಶೋಧನಾ ವರದಿ ಸಲ್ಲಿಸಿರುವ ಪ್ರೊ. ರಂಗರಾಜು.

ನಾಳೆಯಿಂದ ಅಧಿವೇಶನ

ಬೆಂಗಳೂರು: ರಾಜ್ಯ ವಿಧಾನಮಂಡಲ ಅಧಿವೇಶನ ಮಾರ್ಚ್ 4 ರಿಂದ 19 ದಿನ ನಡೆಯಲಿದೆ. ಮೊದಲ ಎರಡು ದಿನ 'ಒಂದು ರಾಷ್ಟ್ರ- ಒಂದು ಚುನಾವಣೆ' ಕುರಿತು ಚರ್ಚೆ ನಡೆಯಲಿದೆ. ಮಾರ್ಚ್ 8 ರಂದು ಬಜೆಟ್ ಮಂಡನೆಯಾಗಲಿದೆ.

'ಗುಜರಾತ್‌ನ ಕೆವಾಡಿಯಾದಲ್ಲಿ ನಡೆದಿದ್ದ ಸ್ಪೀಕರ್‌ಗಳ ಸಮ್ಮೇಳನದ ನಿರ್ಣಯದಂತೆ 'ಒಂದು ರಾಷ್ಟ್ರ- ಒಂದು ಚುನಾವಣೆ' ಕುರಿತು ಚರ್ಚಿಸಲು ಸಮಯ ನಿಗದಿ ಮಾಡಲಾಗಿದೆ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು. ವಿಧಾನಪರಿಷತ್ತಿನಲ್ಲೂ ಈ ಕುರಿತು ಎರಡು ದಿನಗಳ ಚರ್ಚೆ ನಡೆಯಲಿದೆ ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಈ ಅಧಿವೇಶನದಲ್ಲಿ ಕರ್ನಾಟಕ ಪೌರಸಭೆಗಳ ಮಸೂದೆ-2021, ಸೊಸೈಟಿಗಳ ನೋಂದಣಿ ಮಸೂದೆ-2021 ಮತ್ತು ಲೇವಾದೇವಿದಾರರ ನೋಂದಣಿ ಮಸೂದೆ-2021ರ ಮಂಡನೆ ಆಗಲಿದೆ. ಪ್ರಶ್ನೋತ್ತರ ಸೇರಿ ಎಲ್ಲ ಕಲಾಪಗಳಿಗೂ ಸಮಯ ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.



ವಿಶ್ವೇಶ್ವರ ಹೆಗಡೆ

ಕೋವಿಡ್ ಕಾರಣದಿಂದ ಕೆಲವು ತಿಂಗಳುಗಳಿಂದ ಸಾರ್ವಜನಿಕರಿಗೆ ವಿಧಾನಸಭೆಯ ಕಲಾಪ ವೀಕ್ಷಿಸಲು ಅವಕಾಶ ನೀಡಿರಲಿಲ್ಲ. ಈ ಬಾರಿ ಗ್ಯಾಲರಿಯಲ್ಲಿ ಅಂತರ ಕಾಯ್ದುಕೊಂಡು ಸಾರ್ವಜನಿಕರಿಗೂ ಕಲಾಪ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು. ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ಕಲಾಪ ವೀಕ್ಷಣೆಗೆ ನಿರ್ಬಂಧ ಮುಂದುವರಿಯಲಿದೆ ಎಂದು ತಿಳಿಸಿದರು.

ಪ್ರೇಮಾನಂದ ಶೆಟ್ಟಿ ಮೇಯರ್, ಸುಮಂಗಲಾ ರಾವ್ ಉಪ ಮೇಯರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಮಹಾನಗರ ಪಾಲಿಕೆ ಮೇಯರ್ ಹಾಗೂ ಉಪ ಮೇಯರ್ ಆಗಿ ಬಿಜೆಪಿಯ ಪ್ರೇಮಾನಂದ ಶೆಟ್ಟಿ ಹಾಗೂ ಸುಮಂಗಲಾ ರಾವ್ ಮಂಗಳವಾರ ಆಯ್ಕೆಯಾದರು.



ಪ್ರೇಮಾನಂದ



ಸುಮಂಗಲಾ

ಕಾಂಗ್ರೆಸ್‌ನ ಅನಿಲ್ ಕುಮಾರ್ ಹಾಗೂ ಜೆಸಿಂತಾ ವಿರುದ್ಧ ಕ್ರಮವಾಗಿ ಬಿಜೆಪಿಯ ಪ್ರೇಮಾನಂದ ಶೆಟ್ಟಿ ಹಾಗೂ ಸುಮಂಗಲಾ ರಾವ್ ತಲಾ 46-14 ಮತಗಳಿಂದ ಗೆಲುವು ಸಾಧಿಸಿದರು.

60 ಸದಸ್ಯ ಬಲದ ಪಾಲಿಕೆಯಲ್ಲಿ ಬಿಜೆಪಿಯ 44, ಕಾಂಗ್ರೆಸ್‌ನ 14 ಹಾಗೂ ಎಸ್‌ಡಿಪಿಐಯ 2 ಸದಸ್ಯರಿದ್ದಾರೆ. ಬಿಜೆಪಿಯ ಇಬ್ಬರೂ ಶಾಸಕರು ಮತ ಚಲಾಯಿಸಿದ್ದು, ಎಸ್‌ಡಿಪಿಐ ಸದಸ್ಯರು ತಟಸ್ಥರಾಗಿ ಉಳಿದರು.

ಮೇಯರ್ ಸಾಮಾನ್ಯ ಹಾಗೂ ಉಪಮೇಯರ್ ಸ್ಥಾನ ಮಹಿಳೆಗೆ ಮೀಸಲಾಗಿತ್ತು. ಮಂಗಳಾದೇವಿ ವಾರ್ಡ್‌ನಿಂದ ಐದನೇ ಬಾರಿಗೆ ಪ್ರೇಮಾನಂದ ಶೆಟ್ಟಿ ಆಯ್ಕೆಯಾಗಿದ್ದಾರೆ. ಕುಂಜತ್ತ್‌ಬೈಲ್‌ನ ವಾರ್ಡ್‌ನಿಂದ ಸುಮಂಗಲಾ ರಾವ್ ಆಯ್ಕೆಯಾಗಿದ್ದಾರೆ.

ಅತ್ಯಾಚಾರ ಆರೋಪಿ ಉದ್ದೇಶಿಸಿ ಹೇಳಿದ ಮಾತು ಹಿಂಪಡೆಯಲು ಆಗ್ರಹ

ನವದೆಹಲಿ (ಪಿಟಿಐ): 'ಸಂತ್ರಸ್ತೆಯನ್ನು ಮದುವೆಯಾಗುವೆಯಾ ಎಂದು ಅತ್ಯಾಚಾರ ಪ್ರಕರಣವೊಂದರ ಆರೋಪಿಯನ್ನು ಉದ್ದೇಶಿಸಿ ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ ಹೇಳಿದ್ದು, ಅವರು ತಮ್ಮ ಈ ಮಾತನ್ನು ಹಿಂಪಡೆಯಬೇಕು' ಎಂದು ಸಿಪಿಎಂ ನಾಯಕಿ ಬೃಂದಾ ಕಾರಟ್ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯನ್ಯಾಯಮೂರ್ತಿ ಬೊಬಡೆ ಅವರಿಗೆ ಪತ್ರ ಬರೆದಿರುವಅವರು, 'ಇಂಥಪ್ರತಿಗಾಮಿ ನಿಲುವುಗಳಿಗೆ ಕೋರ್ಟ್‌ಗಳು ಬೆಂಬಲ ಸೂಚಿಸುತ್ತವೆ ಎಂಬ ಸಂದೇಶ ರವಾನೆಯಾಗಬಾರದು' ಎಂದು ಪ್ರತಿಪಾದಿಸಿದ್ದಾರೆ. 'ನೀವು ಆಕೆಯನ್ನು ಮದುವೆಯಾಗುವಿರಾ...? ಹಾಗಿದ್ದರೆ ಜಾಮೀನು ಪರಿಶೀಲಿಸಬಹುದು, ಇಲ್ಲವಾದರೆ ನೀವು ಜೈಲಿಗೆ ಹೋಗಬೇಕಾಗುತ್ತದೆ..' ಎಂದು ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಮಹಾರಾಷ್ಟ್ರದ ಸರ್ಕಾರಿ ನೌಕರ ಮೋಹಿತ್ ಸುಭಾಷ್ ಚೌಹಾಣ್‌ಗೆ ನ್ಯಾಯಪೀಠ ಸೋಮವಾರ ಕೇಳಿತ್ತು.

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ನೆರವು

ಸರ್ಕಾರದ ಪ್ರಮಾಣಪತ್ರಕ್ಕೆ ಹೈಕೋರ್ಟ್ ಆಘಾತ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಖಂಡ ಕರ್ನಾಟಕ ರೈತ ಸಂಘ ಸಲ್ಲಿಸಿರುವ ಅರ್ಜಿಯ ವಿಚಾರಣೆ
- ಖಾಸಗಿ ಲೇವಾದೇವಿದಾರರ ಮೇಲೆ ರಾಜ್ಯ ಸರ್ಕಾರಕ್ಕೆ ನಿಯಂತ್ರಣವಿಲ್ಲ- ಮಾಹಿತಿ

ಬೆಂಗಳೂರು: ಬ್ಯಾಂಕ್‌ಗಳಿಂದ ಸಾಲ ಪಡೆದು ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಮಾತ್ರ ಪರಿಹಾರ ನೀಡಲಾಗುವುದು ಎಂದು ಕೃಷಿ ಇಲಾಖೆ ಆಯುಕ್ತರು ಸಲ್ಲಿಸಿರುವ ಪ್ರಮಾಣಪತ್ರಕ್ಕೆ ಹೈಕೋರ್ಟ್ ಮಂಗಳವಾರ ಆಘಾತ ವ್ಯಕ್ತಪಡಿಸಿದೆ.

ಖಾಸಗಿ ಲೇವಾದೇವಿದಾರರಿಂದ ಸಾಲ ಪಡೆದು, ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳನ್ನು ಸರ್ಕಾರದ ನೆರವು ಯೋಜನೆಯಿಂದ ಹೊರಗಿಡಲಾಗುವುದೇ ಎಂಬುದರ ಖಚಿತವಾದ ನಿಲುವನ್ನು ತಿಳಿಸುವಂತೆ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ನಿರ್ದೇಶನ ನೀಡಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿ ರೈತರ ಸರಣಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿರುವುದಕ್ಕೆ ಸಂಬಂಧಿಸಿದಂತೆ ಅಖಂಡ ಕರ್ನಾಟಕ ರೈತ ಸಂಘ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವಿಭಾಗೀಯ ಪೀಠದಲ್ಲಿ ನಡೆಯುತ್ತಿದೆ. ಈ ಕುರಿತು ವಿಸ್ತೃತವಾದ ಪ್ರಮಾಣಪತ್ರ ಸಲ್ಲಿಸುವಂತೆ ನ್ಯಾಯಾಲಯ ಹಿಂದಿನ ವಿಚಾರಣೆ ವೇಳೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಕೃಷಿ ಇಲಾಖೆ ಆಯುಕ್ತರು ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಪೀಠ ಮಂಗಳವಾರದ ವಿಚಾರಣೆ ವೇಳೆ ಪರಿಶೀಲಿಸಿತು.

'ಶಹಾಪುರ ತಾಲ್ಲೂಕಿನಲ್ಲಿ 2016ರಿಂದ 2020-21ರವರೆಗೆ 125 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ₹ 5 ಲಕ್ಷ ನಗದು ವಿತರಣೆ ಸೇರಿದಂತೆ ಕೆಲವು ನೆರವನ್ನು ಸಂತ್ರಸ್ತ ಕುಟುಂಬಗಳಿಗೆ ನೀಡಲಾಗುತ್ತಿದೆ. ಶಹಾಪುರ ತಾಲ್ಲೂಕಿನ 125 ರೈತರ ಪೈಕಿ 105 ರೈತರ ಕುಟುಂಬಗಳು ಮಾತ್ರ ಈ ಪರಿಹಾರ ಪಡೆಯಲು ಅರ್ಹವಾಗಿವೆ' ಎಂದು ಕೃಷಿ ಇಲಾಖೆ ಆಯುಕ್ತರು ಪ್ರಮಾಣ ಪತ್ರದಲ್ಲಿ ತಿಳಿಸಿದ್ದರು.

ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ನೆರವು ನೀಡುವ ಸಂಬಂಧ 2015 ರಲ್ಲಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅದರ ಪ್ರಕಾರ, ಬ್ಯಾಂಕ್‌ಗಳು ಮತ್ತು ಪತ್ತಿನ ಸಹಕಾರ ಸಂಘಗಳಿಂದ ಸಾಲ ಪಡೆದಿರುವ ರೈತರ ಕುಟುಂಬಗಳಿಗೆ ಮಾತ್ರ ಪರಿಹಾರ ನೀಡಬಹುದು. ಖಾಸಗಿ ಲೇವಾದೇವಿದಾರರ ಮೇಲೆ ರಾಜ್ಯ ಸರ್ಕಾರಕ್ಕೆ ಯಾವುದೇ ನಿಯಂತ್ರಣವಿಲ್ಲ. ರೈತರು ಅವರ ಬಳಿ ಸಾಲ ಪಡೆಯದಂತೆ ತಡೆಯುವುದಕ್ಕೂ ಸಾಧ್ಯವಿಲ್ಲ ಎಂದು ಪ್ರಮಾಣಪತ್ರದಲ್ಲಿ ಮಾಹಿತಿ ನೀಡಿದ್ದರು.

'ರಾಜ್ಯ ಸರ್ಕಾರವೇ ರೈತರನ್ನು ಕೃತಕವಾಗಿ ಎರಡು ವರ್ಗಗಳಾಗಿ ವಿಂಗಡಿಸಿದೆ. ಈ ರೀತಿಯ ವರ್ಗೀಕರಣವು ಸಂವಿಧಾನದ 14ನೇ ವಿಧಿಗೆ ವಿರುದ್ಧವಾಗಿದೆ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಇಂತಹ ವರ್ಗೀಕರಣವನ್ನು ಒಪ್ಪಿಕೊಳ್ಳುವುದು ಅಸಾಧ್ಯ. ರೈತರು ಸಾಲ ಮರುಪಾವತಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಕಳವಳವಿದೆ' ಎಂದು ನ್ಯಾಯಪೀಠ ವಿಚಾರಣೆ ವೇಳೆ ಹೇಳಿತು.

ಕೃಷಿ ಇಲಾಖೆ ಆಯುಕ್ತರ ಪ್ರಮಾಣಪತ್ರವನ್ನು ಪರಿಶೀಲಿಸಿ ಮೂರು ವಾರಗಳೊಳಗೆ ಹೊಸದಾಗಿ ಪ್ರಮಾಣಪತ್ರ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ನಿರ್ದೇಶನ ನೀಡಿದ ಪೀಠ, 'ಮುಖ್ಯ ಕಾರ್ಯದರ್ಶಿಯು ವಿಷಯದ ಗಂಭೀರತೆಯನ್ನು ಅರಿತು ಪ್ರಮಾಣಪತ್ರ ಸಲ್ಲಿಸುತ್ತಾರೆ ಎಂಬ ವಿಶ್ವಾಸ ನಮಗಿದೆ.

ಒಂದೇ ತಾಲ್ಲೂಕಿನಲ್ಲಿ ಐದು ವರ್ಷಗಳ ಅವಧಿಯಲ್ಲಿ 125 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೆಲವು ರೈತರು ಏಕೆ ಖಾಸಗಿ ಲೇವಾದೇವಿದಾರರ ಬಳಿ ಸಾಲ ಪಡೆಯಲು ಹೋಗಬೇಕಾದ ಅನಿವಾರ್ಯತೆ ಇದೆ ಎಂಬುದನ್ನೂ ಪರಿಶೀಲಿಸಿ ಮುಖ್ಯ ಕಾರ್ಯದರ್ಶಿ ಪ್ರತಿಕ್ರಿಯಿಸುತ್ತಾರೆ ಎಂಬ ನಿರೀಕ್ಷೆ ಇದೆ' ಎಂದು ತಿಳಿಸಿತು.

ಶಹಾಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳ ಜತೆಯಲ್ಲೇ ರಾಜ್ಯದ ಇತರ ಜಿಲ್ಲೆಗಳ ವಿಷಯವನ್ನೂ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ. ರೈತರಿಗೆ ಬೆಳೆ ವಿಮೆ ಸರಿಯಾಗಿ ಪಾವತಿಯಾಗದೇ ಇರುವ ವಿಷಯವನ್ನೂ ಅರ್ಜಿದಾರರು ಪ್ರಶ್ನಿಸಿದ್ದಾರೆ. ಎರಡು ದಶಕಗಳ ಅವಧಿಯಲ್ಲಿ ರಾಜ್ಯದಲ್ಲಿ 20,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಮಾಹಾರಾ ಮತ್ತು ಗುಜರಾತ್‌ನ ನಂತರದ ಸ್ಥಾನದಲ್ಲಿ ಕರ್ನಾಟಕ ಇದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಮಧು ಬಂಗಾರಪ್ಪ ಕಾಂಗ್ರೆಸ್‌ನತ್ತ ದೃಢ ಹೆಜ್ಜೆ?

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಒಳಗೆ ಸೂಕ್ತ ರಾಜಕೀಯ ನಿರ್ಧಾರ ತೆಗೆದುಕೊಳ್ಳುವೆ' ಎಂದು ಹೇಳುವ ಮೂಲಕ ಮಾಜಿ ಶಾಸಕ ಮಧು ಬಂಗಾರಪ್ಪ ಮಂಗಳವಾರ ಜೆಡಿಎಸ್ ಪಕ್ಷವನ್ನು ತೊರೆಯುವ ಸುಳಿವು ನೀಡಿದರು.



ಕಲ್ಲಹಳ್ಳಿಯ ಮನೆಯಲ್ಲಿ ತಮ್ಮ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ, ಗುಲಾಬಿ ಗಿಡಗಳ ವಿತರಣಾ ಸಮಾರಂಭದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಇದು ಬದಲಾವಣೆಯ ಬರ್ತಡೇ. ಬೆಂಬಲಿಗರು, ಅಪ್ಪಾಜಿ ಅಭಿಮಾನಿಗಳು ಹಾಗೂ ನಂಬಿದವರ ಹಿತದೃಷ್ಟಿಯಿಂದ ಖಚಿತ ನಿರ್ಧಾರ ಕೈಗೊಳ್ಳಬೇಕು. ಜೆಡಿಎಸ್ ಒಳ್ಳೆಯ ಅವಕಾಶಗಳನ್ನು ನೀಡಿದೆ. ಎಚ್.ಡಿ. ಕುಮಾರಸ್ವಾಮಿ ಅಣ್ಣನಂತಿದ್ದರು. ಕುಮಾರಣ್ಣ, ದೇವೇಗೌಡರನ್ನು ಎಂದೂ ಮರೆಯುವುದಿಲ್ಲ. ಕೆಲವು ಬೆಳವಣಿಗೆಗಳು ಬೇಸರ ತರಿಸಿದವು. ನಾನು ಅಧಿಕಾರ ಬಯಸಲಿಲ್ಲ. ಜತೆಗಿದ್ದವರಿಗೆ ಅವಕಾಶಗಳು ಸಿಗದಿದ್ದಾಗ ನೋವಾಗಿದ್ದು ಸತ್ಯ' ಎಂದು ಮನದಾಳ ತೋಡಿಕೊಂಡರು.

ಮಧು ಅವರ ಮಾತಿಗೆ ಪುಷ್ಟಿ ನೀಡುವಂತೆ ಜನ್ಮದಿನದ ಕಾರ್ಯಕ್ರಮ ಕಾಂಗ್ರೆಸ್ ಮುಖಂಡರಿಂದಲೇ ತುಂಬಿ ತುಳುಕುತ್ತಿತ್ತು. ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್. ಸುಂದರೇಶ್ ಸೇರಿದಂತೆ ಪಕ್ಷದ ನೂರಾರು ಮುಖಂಡರು ಭಾಗವಹಿಸಿದ್ದರು.

'ಮೈಸೂರು 'ಮೈತ್ರಿ': ಎಐಸಿಸಿಗೆ ವರದಿ'

ಪ್ರಜಾವಾಣಿ ವಾರ್ತೆ

ಮೈಸೂರು: ಎಐಸಿಸಿ ಕಾರ್ಯದರ್ಶಿ ಮಧು ಯಾಕ್ಷಿಗೌಡ, ಮೈಸೂರು ಮಹಾನಗರ ಪಾಲಿಕೆಯ ಮೇಯರ್- ಉಪ ಮೇಯರ್ ಚುನಾವಣೆಗೆ ಸಂಬಂಧಿಸಿ ಕಾಂಗ್ರೆಸ್-ಜೆಡಿಎಸ್ 'ಮೈತ್ರಿ'ಗಾಗಿ ನಡೆದ ಎಲ್ಲ ಬೆಳವಣಿಗೆಯ ಬಗ್ಗೆ ವಿವರವಾದ ವರದಿಯೊಂದನ್ನು ವರಿಷ್ಠರಿಗೆ ಸಲ್ಲಿಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಮಂಗಳವಾರ ರಾತ್ರಿ ಇಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ತನ್ವೀರ್ ಸೇಠ್ ಅವರಿಂದ ಮಾಹಿತಿ ಪಡೆದ ಮಧು ಯಾಕ್ಷಿಗೌಡ, ಮಂಗಳವಾರ ರಾತ್ರಿ ಮೈಸೂರಿನಲ್ಲಿ ಉಪ ಮೇಯರ್ ಅನ್ವರ್ ಬೇಗ್ ಸೇರಿದಂತೆ ಕಾಂಗ್ರೆಸ್‌ನ ಪಾಲಿಕೆಯ 19 ಸದಸ್ಯರು, ಮೂವರು ಪಕ್ಷೇತರ ಸದಸ್ಯರು, ಕೃಷ್ಣರಾಜ, ಚಾಮರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು, ನಗರ ಘಟಕದ ಅಧ್ಯಕ್ಷರಿಂದ ಪ್ರತ್ಯೇಕವಾಗಿ ಅಭಿಪ್ರಾಯ ಸಂಗ್ರಹಿಸಿದರು ಎಂದು ಮೂಲಗಳು ತಿಳಿಸಿವೆ.

'ಕೈ' ತಪ್ಪಿದ ಮೇಯರ್: ತನ್ವೀರ್‌ಗೆ ನೋಟಿಸ್

ಬೆಂಗಳೂರು: ಪಕ್ಷದ ನಾಯಕರ ಆದೇಶ ಉಲ್ಲಂಘಿಸಿ ಮೈಸೂರು ಮೇಯರ್ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟು, ಆ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡ ಕಾರಣಕ್ಕೆ ವಿವರಣೆ ಕೇಳಿ ಶಾಸಕ ತನ್ವೀರ್ ಸೇಠ್ ಅವರಿಗೆ ಎಐಸಿಸಿ ಸೂಚನೆಯಂತೆ ಕೆಪಿಸಿಸಿ ಶಿಸ್ತು ಸಮಿತಿ ಮಂಗಳವಾರ ನೋಟಿಸ್ ನೀಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸೇಠ್, 'ಶಿಸ್ತು ಸಮಿತಿ ಅಧ್ಯಕ್ಷರಾದ ರೆಹಮಾನ್ ಖಾನ್ ನೋಟಿಸ್ ಕೊಟ್ಟಿದ್ದಾರೆ. 2-3 ದಿನಗಳಲ್ಲಿ ಉತ್ತರ ಕೊಡುತ್ತೇನೆ. ಜೊತೆಗೆ ಕಾರಣಗಳನ್ನು ವಿವರಿಸುತ್ತೇನೆ. ಮೈತ್ರಿಯ ಕಾರಣ, ಫಲ, ನಷ್ಟದ ಬಗ್ಗೆಯೂ ವಿವರ ಕೊಡ್ತೇನೆ' ಎಂದರು. ಮೈಸೂರು ಮೇಯರ್ ಚುನಾವಣೆ ಬಳಿಕ ಪಕ್ಷದಲ್ಲಿ ಉಂಟಾಗಿರುವ ಗೊಂದಲಗಳಿಗೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರ ಜೊತೆ ಎಐಸಿಸಿ ಕಾರ್ಯದರ್ಶಿ ಮಧು ಯಾಕ್ಷಿಗೌಡ್ ಚರ್ಚೆ ನಡೆಸಿದರು.

ಸಿದ್ದರಾಮಯ್ಯ ಭಾಗಿ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರದಲ್ಲಿ ಡಿ.ಕೆ ಶಿವಕುಮಾರ್ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ. ಮೈಸೂರು ಬೆಳವಣಿಗೆ ಬಳಿಕ ಇಬ್ಬರ ನಡುವೆ ಭಿನ್ನಮತ ಉಂಟಾಗಿತ್ತು.ಡಿಕೆಶಿ ಅವರು ಮಂಗಳವಾರ ಸಂಜೆ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚಿಸಿದರು.

'ಮೈಸೂರು ನಗರಪಾಲಿಕೆಯಲ್ಲಿ ಮೈತ್ರಿಗೆ ಸಂಬಂಧಿಸಿದಂತೆ, ಎಐಸಿಸಿ ವರಿಷ್ಠರಿಗೆ ಸಿದ್ದರಾಮಯ್ಯ ದೂರು ನೀಡಿದ್ದರು. ಆದ್ದರಿಂದ, ಎಐಸಿಸಿ ಕಾರ್ಯದರ್ಶಿ ಮಧು ಯಾಕ್ಷಿಗೌಡ ಅವರನ್ನು ಸಮಗ್ರ ವರದಿ ಸಂಗ್ರಹಿಸಲಿಕ್ಕಾಗಿ ಕಳುಹಿಸಿಕೊಟ್ಟಿದೆ. ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೆ ವರದಿ ಸಲ್ಲಿಸಲಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಪ್ರತಿಭಟನೆ ಗೌರವಧನವನ್ನು ಸೇವಾ ಹಿರಿತನ ಆಧಾರದಲ್ಲಿ ಹೆಚ್ಚಿಸುವಂತೆ ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು

ಗುಜರಾತ್: 31 ಜಿ.ಪಂ ಬಿಜೆಪಿ ವಶಕ್ಕೆ

ಅಹಮದಾಬಾದ್ (ಪಿಟಿಐ): ಗುಜರಾತ್ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣಾ ಫಲಿತಾಂಶ ಮಂಗಳವಾರ ಬಂದಿದ್ದು, ರಾಜ್ಯದ ಎಲ್ಲ 31 ಜಿಲ್ಲಾ ಪಂಚಾಯಿತಿಗಳ ಅಧಿಕಾರವನ್ನು ಬಿಜೆಪಿ ತನ್ನ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದೆ. ಅಂತೆಯೇ 81 ಪುರಸಭೆಗಳ ಪೈಕಿ 74ರಲ್ಲಿ ಹಾಗೂ 231 ತಾಲ್ಲೂಕು ಪಂಚಾಯಿತಿಗಳಲ್ಲಿ 196ರಲ್ಲಿ ಗೆಲುವು ಸಾಧಿಸಿದೆ.

ಕಳೆದ ತಿಂಗಳಷ್ಟೇ ರಾಜ್ಯದ ಆರೂ ಪಾಲಿಕೆಗಳಲ್ಲಿ ಜಯ ಸಾಧಿಸಿದ್ದ ಬಿಜೆಪಿ ತನ್ನ ವಿಜಯ ಯಾತ್ರೆಯನ್ನು ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮುಂದುವರಿಸಿದೆ. ಒಟ್ಟು 8,261 ಸ್ಥಾನಗಳಲ್ಲಿ ಬಿಜೆಪಿ 6,110ರಲ್ಲಿ, ಕಾಂಗ್ರೆಸ್ 1,768 ರಲ್ಲಿ, ಎಎಪಿ 42ರಲ್ಲಿ ಹಾಗೂ ಪಕ್ಷೇತರರು 286 ಸ್ಥಾನಗಳಲ್ಲಿ ಗೆದ್ದಿದ್ದಾರೆ ಎಂದು ರಾಜ್ಯ ಚುನಾವಣಾ ಆಯೋಗ ತಿಳಿಸಿದೆ.


ರಾಜೀನಾಮೆ: ಕಾಂಗ್ರೆಸ್‌ನ ಹೀನಾಯ ಸೋಲಿನ ಹೊಣೆ ಹೊತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಮಿತ್ ಚಾವ್ಡಾ ಮತ್ತು ವಿರೋಧ ಪಕ್ಷದ ನಾಯಕ ಪರೇಶ್ ಧನಾನಿ ಅವರು ಮಂಗಳವಾರ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಹರಿಯಾಣ: ಸ್ಥಳೀಯರಿಗೆ ಶೇ 75ರಷ್ಟು ಮೀಸಲಾತಿ- ಮಸೂದೆಗೆ ಅಂಕಿತ

ಚಂಡೀಗಡ (ಪಿಟಿಐ): ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಸ್ಥಳಿಯರಿಗೆ ಶೇ 75ರಷ್ಟು ಮೀಸಲಾತಿ ನೀಡುವ ಮಸೂದೆಗೆ ಹರಿಯಾಣ ರಾಜ್ಯಪಾಲ ಸತ್ಯದೇವ್ ನಾರಾಯಣ್ ಆರ್ಯ ಅವರು ಅಂಕಿತ ಹಾಕಿದ್ದಾರೆ ಎಂದು ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಮಂಗಳವಾರ ತಿಳಿಸಿದ್ದಾರೆ.

'ಈ ಸಂಬಂಧ ಸರ್ಕಾರ ಶೀಘ್ರವೇ ಅಧಿಸೂಚನೆ ಹೊರಡಿಸುವುದು' ಎಂದು ಖಟ್ಟರ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಈ ಮಸೂದೆಯನ್ನು ವಿಧಾನಸಭೆ ಕಳೆದ ವರ್ಷವೇ ಅಂಗೀಕರಿಸಿತ್ತು. ಬಿಜೆಪಿ ಮೈತ್ರಿ ಪಕ್ಷವಾದ ಜನನಾಯಕ ಜನತಾ ಪಾರ್ಟಿ ಈ ಮೀಸಲಾತಿ ನೀಡುವುದಾಗಿ ಚುನಾವಣೆ ಸಂದರ್ಭದಲ್ಲಿ ಭರವಸೆ ನೀಡಿತ್ತು.



ಮನೋಹರ ಲಾಲ್ ಖಟ್ಟರ್

ಖಾಸಗಿ ಕ್ಷೇತ್ರದಲ್ಲಿ, ಮಾಸಿಕ ₹ 50,000ಕ್ಕಿಂತ ಕಡಿಮೆ ವೇತನ ಇರುವ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಸ್ಥಳೀಯರಿಗೆ ಶೇ 75ರಷ್ಟು ಮೀಸಲಾತಿ ನೀಡಲಾಗುತ್ತದೆ. ಆರಂಭದಲ್ಲಿ ಈ ಸೌಲಭ್ಯ 10 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ ಎಂದು ಮೂಲಗಳು ಹೇಳಿವೆ.

ತುರ್ತು ಪರಿಸ್ಥಿತಿ ಹೇರಿದ್ದು ಪ್ರಮಾದ: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ಒಂದು ಪ್ರಮಾದ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ.

ಭಾರತದ ಮಾಜಿ ಆರ್ಥಿಕ ಸಲಹೆಗಾರ ಹಾಗೂ ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಕೌಶಿಕ್ ಬಸು ಅವರೊಂದಿಗೆ ನಡೆಸಿದ ಸಂವಾದದಲ್ಲಿ ಮಾತನಾಡಿದ ರಾಹುಲ್, 'ದೇಶದ ಸಾಂಸ್ಥಿಕ ಚೌಕಟ್ಟನ್ನು ಮೀರುವ ಪ್ರಯತ್ನವನ್ನು ಕಾಂಗ್ರೆಸ್ ಎಂದಿಗೂ ಮಾಡಿಲ್ಲ' ಎಂದೂ ಹೇಳಿದ್ದಾರೆ.

ಬಾಲಿವುಡ್ ನಟಿ ಕಂಗನಾ ಅರ್ಜಿ ವಿಚಾರಣೆ ಸ್ಥಗಿತ

ಬೆಂಗಳೂರು: ಕೃಷಿ ಸಂಬಂಧಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಟೀಕಿಸಿ ಮಾಡಿದ್ದ ಟ್ವೀಟ್ ಆಧರಿಸಿ ತಮ್ಮ ವಿರುದ್ಧ ಪ್ರಕರಣ ದಾಖಲಿಸಲು ತುಮಕೂರು ಜೆಎಂಎಫ್ ನ್ಯಾಯಾಲಯ ನೀಡಿರುವ ಆದೇಶ ಪ್ರಶ್ನಿಸಿ ಬಾಲಿವುಡ್ ನಟಿ ಕಂಗನಾ ರನೌತ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಸ್ಥಗಿತಗೊಳಿಸಿದೆ.

ಖಾಸಗಿ ದೂರನ್ನು ವಿಚಾರಣೆಗೆ ಅಂಗೀಕರಿಸಿದ್ದ ಜೆಎಂಎಫ್ ನ್ಯಾಯಾಲಯ, ಕಂಗನಾ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವಂತೆ 2020ರ ಅ.9ರಂದು ಪೊಲೀಸರಿಗೆ ಆದೇಶಿಸಿತ್ತು. ಅದನ್ನು ಪ್ರಶ್ನಿಸಿ ಕಂಗನಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ಪೀಠದಲ್ಲಿ ಬುಧವಾರ ಕಂಗನಾ ಅವರ ಅರ್ಜಿ ವಿಚಾರಣೆಗೆ ಬಂತು. ಸರಿಯಾದ ವಿಧಾನದಲ್ಲಿ ಆಕ್ಷೇಪಣೆ ಸಲ್ಲಿಕೆಯಾಗುವವರೆಗೂ ವಿಚಾರಣೆಯನ್ನು ಸ್ಥಗಿತಗೊಳಿಸುವುದಾಗಿ ನ್ಯಾಯಮೂರ್ತಿ ತಿಳಿಸಿದರು. ಪ್ರಕರಣದ ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಿದರು.

2020ರ ಸೆ. 21ರಂದು ರೈತರ ಪ್ರತಿಭಟನೆ ಕುರಿತು ಟ್ವೀಟ್ ಮಾಡಿದ್ದ ಕಂಗನಾ, 'ಪೌರತ್ವ ತಿದ್ದುಪಡಿ ಕಾಯ್ದೆಯ ವಿರುದ್ಧ ಕೆಲವರು ಸುಳ್ಳು ಮಾಹಿತಿ ಮತ್ತು ವದಂತಿ ಹಬ್ಬಿಸಿದ್ದರಿಂದ ಗಲಭೆ ಸೃಷ್ಟಿಯಾಗಿತ್ತು. ಅವರೇ ಈಗ ಕೃಷಿ ಕಾಯ್ದೆಗಳಿಗೆ ಸಂಬಂಧಿಸಿದಂತೆಯೂ ಸುಳ್ಳು ಮಾಹಿತಿ, ವದಂತಿ ಹಬ್ಬಿಸಿ ಭಯ ಸೃಷ್ಟಿಸಲು ಯತ್ನಿಸುತ್ತಿದ್ದಾರೆ. ಅವರೆಲ್ಲರೂ ಭಯೋತ್ಪಾದಕರು' ಎಂದು ಹೇಳಿದ್ದರು.

5 ವರ್ಷದಲ್ಲಿ 50 ಸಾವಿರ ಉದ್ಯೋಗ ಸೃಷ್ಟಿ ಗುರಿ

ಒಂದನೇ ಪುಟದಿಂದ

'ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ತಂತ್ರಜ್ಞಾನ ಮತ್ತು ನಾವೀನ್ಯತಾ ಸಂಸ್ಥೆ (ಕಿಟ್ಸ್) ಹಾಗೂ ನ್ಯಾಸ್‌ಕಾಂ ಸಂಸ್ಥೆಯ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಇದನ್ನು ರಚಿಸಲಾಗಿದೆ' ಎಂದು ಹೇಳಿದರು.

'ರಾಜ್ಯದಲ್ಲಿ 400 ಕ್ಕೂ ಹೆಚ್ಚು ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಹಾಗೂ ಜಿಸಿಸಿಗಳಿವೆ. ವೈಮಾಂತರಿಕ್ಷ ಮತ್ತು ರಕ್ಷಣೆ ಸೇರಿ 5 ಆದ್ಯತಾ ವಲಯಗಳಲ್ಲಿ ಕ್ರಾಂತಿಕಾರಕ ಮುನ್ನಡೆ ಸಾಧಿಸಲು ರಾಜ್ಯವು ಸಜ್ಜಾಗಿದೆ. ಈ ನೀತಿ ರಾಜ್ಯದ ಪ್ರಗತಿಗೆ ಹೊಸ ದಿಕ್ಕು ತೋರಲಿದೆ. ದೇಶದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಉದ್ಯಮಕ್ಕೆ ಅತಿ ಹೆಚ್ಚು ಕೊಡುಗೆ ನೀಡುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ನಾವು ಅಗ್ರಸ್ಥಾನದಲ್ಲಿದ್ದೇವೆ. ಈ ಸ್ಥಾನ ಕಾಯ್ದುಕೊಳ್ಳುವ ಗುರಿಯನ್ನೂ ಹೊಂದಿದ್ದೇವೆ. ಪ್ರಧಾನಮಂತ್ರಿಯವರ 'ಆತ್ಮನಿರ್ಭರ ಭಾರತ' ಕಲ್ಪನೆಯಂತೆ ಈ ನೀತಿ ರೂಪುಗೊಂಡಿದೆ' ಎಂದು ನುಡಿದರು.

ಪ್ರೋತ್ಸಾಹಕ ಕ್ರಮ

- ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಾಚೆಗೆ ಉದ್ಯಮ ಸ್ಥಾಪನೆ/ ವಿಸ್ತರಣೆ ಮಾಡಿದರೆ ಶೇ 50ರಷ್ಟು ಹಾಗೂ ಗರಿಷ್ಠ ₹2 ಕೋಟಿವರೆಗೆ ಬಾಡಿಗೆ ಮರುಪಾವತಿ.
- ಬಂಡವಾಳದ ಶೇ 20ರಷ್ಟು, ಗರಿಷ್ಠ ₹2 ಕೋಟಿವರೆಗೆ ಹೂಡಿಕೆ ಸಬ್ಸಿಡಿ.
- ನಾವೀನ್ಯತಾ ಪ್ರಯೋಗಾಲಯಗಳನ್ನು ಸ್ಥಾಪಿಸಿದರೆ ವೆಚ್ಚದ ಶೇ 33 (ಗರಿಷ್ಠ ₹8 ಕೋಟಿ) ನೆರವು.
- ಡಿಜಿಟಲ್ ನಾವೀನ್ಯತಾ ಕಾರ್ಯಯೋಜನೆಗಳಿಗೆ ಗರಿಷ್ಠ ₹3 ಕೋಟಿಯವರೆಗೆ ನೆರವು.
- ಶೈಕ್ಷಣಿಕ ವಲಯದ ಸಂಶೋಧನೆಗಳನ್ನು ಔದ್ಯಮಿಕ ಅನ್ವಯಿಕತೆಯಾಗಿ ಪರಿವರ್ತಿಸಲು ಪ್ರತಿ ಸಂಸ್ಥೆಗೆ ವರ್ಷಕ್ಕೆ ₹75 ಲಕ್ಷ ಅನುದಾನ.
- ಇಂಟರ್ನ್‌ಶಿಪ್ ಉತ್ತೇಜಿಸಲು ಪ್ರತಿ ಸಂಸ್ಥೆಗೆ ಶೇ 50 ರಷ್ಟು ಸ್ಟೈಪೆಂಡ್ ಮರುಪಾವತಿ. ಪ್ರತಿ ಅಭ್ಯರ್ಥಿಗೆ ಮೂರು ತಿಂಗಳವರೆಗೆ ಮಾಸಿಕ ಗರಿಷ್ಠ ₹10 ಸಾವಿರ ಭತ್ಯೆ. ಇದರಲ್ಲಿ ಶೇ 33ರಷ್ಟು ಮಹಿಳಾ ಅಭ್ಯರ್ಥಿಗಳಿರಬೇಕು. ಇಂಟರ್ನಿಗಳ ಪೈಕಿ ಶೇ 30 ಅಭ್ಯರ್ಥಿಗಳನ್ನು ಪೂರ್ಣಾವಧಿ ಉದ್ಯೋಗಕ್ಕೆ ಪರಿಗಣಿಸಬೇಕು.

ಆದ್ಯತಾ ವಲಯಗಳು

- ವೈಮಾಂತರಿಕ್ಷ ಮತ್ತು ರಕ್ಷಣೆ
- ವಾಹನ-ವಾಹನ ಬಿಡಿ-ಭಾಗಗಳು-ವಿದ್ಯುತ್ ಚಾಲಿತ ವಾಹನಗಳು
- ಜೈವಿಕ ತಂತ್ರಜ್ಞಾನ, ಔಷಧ ಮತ್ತು ವೈದ್ಯಕೀಯ ಉಪಕರಣಗಳು
- ಅರೆವಾಹಕಗಳು, ದೂರಸಂಪರ್ಕ, ಎಲೆಕ್ಟ್ರಾನಿಕ್ ವ್ಯವಸ್ಥೆ ಮತ್ತು ಅಭಿವೃದ್ಧಿ ನಿರ್ವಹಣೆ (ಇ.ಎಸ್.ಡಿ.ಎಂ.)
- ಸಾಫ್ಟ್‌ವೇರ್ ಉತ್ಪನಗಳು

ನೀತಿಯ ಉದ್ದೇಶ:
- ಉದ್ಯಮ ಹಾಗೂ ಶೈಕ್ಷಣಿಕ ವಲಯದ ನಡುವೆ ಸಂಪರ್ಕ ಸೇತುವೆ ನಿರ್ಮಿಸುವುದು.
- ಕೌಶಲಯುಕ್ತ ಎಂಜಿನಿಯರಿಂಗ್ ಮಾನವ ಸಂಪನ್ಮೂಲ ಸೃಷ್ಟಿ.
- ಪರೀಕ್ಷೆ, ಪ್ರಾಯೋಗಿಕ ಮಾದರಿ ಹಾಗೂ ಇತರ ಅತ್ಯಾಧುನಿಕ ಮೂಲಸೌಕರ್ಯ ನಿರ್ಮಾಣ.
- ಬೆಂಗಳೂರು ಬಿಟ್ಟು ಬೇರೆ ಪಟ್ಟಣ ಮತ್ತು ನಗರಗಳಲ್ಲಿ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ಉದ್ಯಮ ಬೆಳೆಸುವುದು

ಉತ್ತರಪ್ರದೇಶ: ಶಾಲೆಗೆ ಹೊರಟ ಬಾಲಕಿಯರು ನಾಪತ್ತೆ

ಶಹಜಹಾನ್‌ಪುರ (ಉತ್ತರ ಪ್ರದೇಶ): ಮನೆಯಿಂದ ಶಾಲೆಗೆ ತೆರಳಿದ್ದ ಮೂವರು ಅಪ್ರಾಪ್ತ ಬಾಲಕಿಯರು ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

‘15 ವರ್ಷದ ಇಬ್ಬರು, 10 ವರ್ಷದ ಒಬ್ಬ ಬಾಲಕಿ ನಾಪತ್ತೆಯಾಗಿದ್ದಾರೆ. ಇವರು ಸದರ್ ಪ್ರದೇಶದವರು. ಇದರಲ್ಲಿ ಇಬ್ಬರ ಬಳಿ ಹಣ ಇತ್ತು. ಮತ್ತೊಬ್ಬ ಬಾಲಕಿಯ ಬಳಿ ಬಟ್ಟೆಗಳಿದ್ದವು. ಈಕೆ ಶಾಲೆಯ ಕಾರ್ಯಕ್ರಮಕ್ಕಾಗಿ ಬಟ್ಟೆಯನ್ನು ಕೊಂಡೊಯ್ಯುತ್ತಿದ್ದೇನೆ ಎಂದು ಪೋಷಕರಲ್ಲಿ ಹೇಳಿದ್ದಳು’ ಎಂದು ಪೊಲೀಸ್ ವರಿಷ್ಠಾಧಿಕಾರಿ ಎಸ್. ಆನಂದ್ ಅವರು ತಿಳಿಸಿದರು.

ರೈತರ ಪ್ರತಿಭಟನೆ: ದೇಶದ ಪರ ಟ್ವೀಟ್ ಮಾಡಿದ ಗಣ್ಯರ ವಿರುದ್ಧ ತನಿಖೆಗೆ ಆದೇಶಿಸಿದ ಆರೋಪ

ಉದ್ಧವ್ ಸರ್ಕಾರದ ಮೇಲೆ ಬಿಜೆಪಿ ಆಕ್ರೋಶ

ಮುಂಬೈ (ಪಿಟಿಐ): ‘ಭಾರತದ ಪರವಾಗಿ’ ಟ್ವೀಟ್ ಮಾಡಿದ ಸಚಿನ್ ತೆಂಡೂಲ್ಕರ್, ಲತಾ ಮಂಗೇಶ್ಕರ್ ಅವರಂತಹ ಗಣ್ಯರ ವಿರುದ್ಧ ಮಹಾರಾಷ್ಟ್ರ ಸರ್ಕಾರ ತನಿಖೆಗೆ ಮುಂದಾಗಿದೆ ಎಂದು ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ವಿಧಾನಸಭೆಯಲ್ಲಿ ಮಂಗಳವಾರ ಆರೋಪಿಸಿದ್ದಾರೆ. ದೆಹಲಿಯಲ್ಲಿ ರೈತರ ಪ್ರತಿಭಟನೆಯ ಕುರಿತು ವಿದೇಶಗಳ ಖ್ಯಾತನಾಮರು ದನಿಯೆತ್ತಲು ಶುರು ಮಾಡಿದ ಮೇಲೆ ಭಾರತದಲ್ಲೂ ಕೆಲವು ಪ್ರಮುಖರು ದೇಶದ ಪರವಾಗಿ ಟ್ವೀಟ್ ಮಾಡಿದ್ದರು.

ಫಡಣವೀಸ್ ಆರೋಪವನ್ನು ಅಲ್ಲಗಳೆದ ಗೃಹಸಚಿವ ಅನಿಲ್ ದೇಶ್‌ಮುಖ್, ‘ಬಿಜೆಪಿ ಐಟಿ ಘಟಕದ ಟ್ವೀಟ್‌ಗಳನ್ನು ತನಿಖೆ ಮಾಡಲು ಸೂಚಿಸಲಾಗಿದೆಯೇ ಹೊರತು ತೆಂಡೂಲ್ಕರ್ ಅಥವಾ ಲತಾ ಮಂಗೇಶ್ಕರ್ ಅವರ ಟ್ವೀಟ್‌ಗಳನ್ನಲ್ಲ’ ಎಂದು ಸ್ಪಷ್ಟನೆ ನೀಡಿದ್ದಾರೆ.

ದೆಹಲಿಯಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆ ಕುರಿತು ಟ್ವೀಟ್ ಮಾಡುವಂತೆ ಕೆಲವು ಪ್ರಸಿದ್ಧ ವ್ಯಕ್ತಿಗಳ ಮೇಲೆ ಒತ್ತಡ ಹೇರಲಾಗಿದೆ ಎಂಬ ಆರೋಪದ ಬಗ್ಗೆ ರಾಜ್ಯ ಗುಪ್ತಚರ ಇಲಾಖೆ ತನಿಖೆ ನಡೆಸಲಿದೆ ಎಂದು ಫೆಬ್ರುವರಿ 8 ರಂದು ದೇಶಮುಖ್ ಹೇಳಿದ್ದರು. ಖ್ಯಾತನಾಮರ ಟ್ವೀಟ್‌ಗೂ ಬಿಜೆಪಿಗೂ ನಂಟು ಇದೆಯೇ ಎಂಬ ಬಗ್ಗೆ ತನಿಖೆ ನಡೆಸುವಂತೆ ಕಾಂಗ್ರೆಸ್ ಒತ್ತಾಯಿಸಿತ್ತು.



ದೇವೇಂದ್ರ ಫಡಣವೀಸ್

ತೆಂಡೂಲ್ಕರ್, ಲತಾ ಮಂಗೇಶ್ಕರ್ ಸೇರಿದಂತೆ ಕೆಲವು ಗಣ್ಯರು ‘#ಇಂಡಿಯಾ ಟುಗೆದರ್‘, ‘#ಇಂಡಿಯಾ ಅಗೇನ್‌ಸ್ಟ್ ಪ್ರೊಪಗಾಂಡ’ ಎಂಬ ಹ್ಯಾಷ್‌ಟ್ಯಾಗ್‌ನಡಿ ಟ್ವೀಟ್ ಮಾಡಿದ್ದರು. ಪಾಪ್‌ತಾರೆ ರಿಯಾನಾ ಹಾಗೂ ಪರಿಸರ ಹೋರಾಟಗಾರ್ತಿ ಗ್ರೇಟಾ ಥನ್‌ಬರ್ಗ್ ಅವರು ರೈತರ ವಿಚಾರವನ್ನು ಟ್ವಿಟರ್‌ನಲ್ಲಿ ಪ್ರಸ್ತಾಪಿಸಿದ ಬಳಿಕ ಇಲ್ಲಿನ ಕೆಲವು ಪ್ರಮುಖರು ಭಾರತದ ಪರವಾಗಿ ಟ್ವೀಟ್ ಮಾಡಿದ್ದರು.

‘ಭಾರತ ಒಗ್ಗಟ್ಟಾಗಿದೆ’ ಎಂದು ಗಣ್ಯರು ಟ್ವೀಟ್ ಮಾಡುವುದು ತಪ್ಪೇ? ಇದು ತಪ್ಪು ಎಂದು ಯಾರಾದರೂ ದೂರು ನೀಡಿದಲ್ಲಿ ಗೃಹಸಚಿವರು ಒಮ್ಮೆ ಯೋಚಿಸಿ ತನಿಖೆಗೆ ಆದೇಶಿಸಬೇಕಲ್ಲವೇ’ ಎಂದು ಫಡಣವೀಸ್ ಹರಿಹಾಯ್ದಿದ್ದಾರೆ.

‘ಬಿಜೆಪಿ ಐಟಿ ಘಟಕದ ಟ್ವೀಟ್‌ಗಳ ಬಗ್ಗೆ ತನಿಖೆ ನಡೆಸಿದಾಗ 12 ವ್ಯಕ್ತಿಗಳ ಜೊತೆ ಪ್ರಕರಣಕ್ಕೆ ಸಂಬಂಧವಿದೆ ಎಂಬುದು ತಿಳಿದುಬಂದಿದೆ. ಇವರ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ’ ಎಂದು ದೇಶ್‌ಮುಖ್ ಹೇಳಿದರು.

ಪ್ರತಿಕ್ರಿಯಿಸಿದ ಫಡಣವೀಸ್, ‘ಒಂದು ವೇಳೆ, ಟ್ವೀಟ್ ಮಾಡುವಂತೆ ಗಣ್ಯರಿಗೆ ನಾನು ಹೇಳಿದ್ದೇನೆ ಎಂದು ಅಂದುಕೊಳ್ಳಿ. ನಾನು ಮಾಡಿದ್ದರಲ್ಲಿ ತಪ್ಪೇನಿದೆ. ದೇಶದ ಪರವಾಗಿ ನಿಲ್ಲುವಂತೆ ಕೇಳಿಕೊಳ್ಳುವುದು ಅಪರಾಧವೇ’ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಟೂಲ್‌ಕಿಟ್ ಪ್ರಕರಣ: ಪ್ರತಿಕ್ರಿಯೆ ನೀಡಲು ಕಾಲಾವಕಾಶ

(ನವದೆಹಲಿ ವರದಿ): ರೈತರ ಪ್ರತಿಭಟನೆಗೆ ಬೆಂಬಲವಾಗಿ ರೂಪಿಸಲಾದ ಟೂಲ್‌ಕಿಟ್ ಪ್ರಕರಣದ ಆರೋಪಿ ನಿಕಿತಾ ಜೇಕಬ್ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಗೆ ಪ್ರತಿಕ್ರಿಯೆ ನೀಡಲು ದೆಹಲಿ ಪೊಲೀಸರಿಗೆ ಕೋರ್ಟ್ ಒಂದು ವಾರ ಸಮಯ ನೀಡಿದೆ. ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಧರ್ಮೇಂದ್ರ ರಾಣಾ ಅವರು ಇದೇ 9ರವರೆಗೆ ಪೊಲೀಸರಿಗೆ ಕಾಲಾವಕಾಶ ನೀಡಿದರು.

ರೈತರ ಪ್ರತಿಭಟನೆಗೆ ಸಂಬಂಧಿಸಿದ ಟೂಲ್‌ಕಿಟ್ ಅನ್ನು ಪ್ರಕರಣದ ಪ್ರಮುಖ ಆರೋಪಿ ದಿಶಾ ರವಿ ಜೊತೆ ಹಂಚಿಕೊಂಡ ಆರೋಪ ನಿಕಿತಾ ಜೇಕಬ್ ಮೇಲಿದೆ. ಮತ್ತೊಬ್ಬ ಆರೋಪಿ ಶಾಂತನು ಮುಲುಕ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯು ಇದೇ 9ರಂದು ವಿಚಾರಣೆಗೆ ಬರಲಿದೆ. ಇವರ ಮೇಲೆ ದೇಶದ್ರೋಹ ಪ್ರಕರಣ ದಾಖಲಾಗಿದೆ.

ಶಾಂತನು ಜೊತೆ ನಂಟು ಬೆಸೆಯದೇ ತಮ್ಮ ಪ್ರಕರಣವನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಬೇಕು ಎಂದು ನಿಕಿತಾ ಪರವಾಗಿ ಅವರ ವಕೀಲರಾದ ರೆಬೆಕಾ ಜಾನ್ ನ್ಯಾಯಾಲಯವನ್ನು ಕೋರಿದರು.

ಜಾಮೀನು ಕೋರಿದ ಪರಿಸರವಾದಿ

(ಪಣಜಿ ವರದಿ): ಟೂಲ್‌ಕಿಟ್ ಪ್ರಕರಣದ ಆರೋಪಿಗಳಾದ ನಿಕಿತಾ ಜೇಕಬ್ ಮತ್ತು ಶಾಂತನು ಅವರ ಪರಿಚಿತರಾದ ಗೋವಾದ ಪರಿಸರ ಕಾರ್ಯಕರ್ತ ಶುಭಂಕರ್ ಚೌಧರಿ ಅವರು ನಿರೀಕ್ಷಣಾ ಜಾಮೀನು ಕೋರಿದ್ದಾರೆ. ಪ್ರಕರಣದ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರು ತಮ್ಮನ್ನು ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಿ, ಬಂಧಿಸುವ ಸಾಧ್ಯತೆಯಿದೆ ಎಂಬ ಕಾರಣಕ್ಕೆ ಬಾಂಬೆ ಹೈಕೋರ್ಟ್‌ನ ಗೋವಾ ಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಚೌಧರಿ ಅವರ ಹೆಸರಿಲ್ಲದಿದ್ದರೂ, ಅರ್ಜಿದಾರರನ್ನು ಪ್ರಕರಣದಲ್ಲಿ ಸೇರಿಸುವ ಸಾಧ್ಯತೆಯಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಈಗಾಗಲೇ ದೆಹಲಿ ಪೊಲೀಸರಿಗೆ ನೋಟಿಸ್ ನೀಡಲಾಗಿದೆ.

ನಿಧನ ವಾರ್ತೆ

ಬಿಜೆಪಿ ಸಂಸದ ನಂದಕುಮಾರ್ ಸಿಂಗ್ ಚೌಹಾಣ್

ನವದೆಹಲಿ: ಬಿಜೆಪಿಯ ಲೋಕಸಭಾ ಸದಸ್ಯ ನಂದ ಕುಮಾರ್ ಸಿಂಗ್ ಚೌಹಾಣ್ ಸೋಮವಾರ ರಾತ್ರಿ ನಿಧನರಾದರು. ಕೊರೊನಾ ಸೋಂಕಿಗೆ ಒಳಗಾಗಿದ್ದ ಅವರು ದೆಹಲಿಯ ಮೇದಾಂತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ನಂದಕುಮಾರ್ (68) ಮಧ್ಯ ಪ್ರದೇಶದ ಖಾಂಡವಾ ಕ್ಷೇತ್ರದ ಸಂಸದರಾಗಿದ್ದರು.


'ಖಾಂಡವಾ ಕ್ಷೇತ್ರದ ಲೋಕ ಸಭಾ ಸದಸ್ಯ ನಂದಕುಮಾರ್ ಸಿಂಗ್ ಚೌಹಾಣ್ ಅವರು ಅಗಲಿಕೆಯು ನೋವು ತಂದಿದೆ. ಮಧ್ಯ ಪ್ರದೇಶದಲ್ಲಿ ಬಿಜೆಪಿಯನ್ನು ಬಲಗೊಳಿಸುವಲ್ಲಿ ತೋರಿರುವ ಶ್ರಮಗಳಿಂದ ಅವರು ನೆನಪಿನಲ್ಲಿ ಉಳಿಯುತ್ತಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಕಂಬನಿ ಮಿಡಿದಿದ್ದಾರೆ.

ಕೊಳಲುವಾದಕ ಪ್ರಭಾತ್ ಶರ್ಮ

ಗುವಾಹಟಿ (ಪಿಟಿಐ): ಅಸ್ಸಾಂನ ಖ್ಯಾತ ಕೊಳಲುವಾದಕ, ಸಂಗೀತ ಸಂಯೋಜಕ ಹಾಗೂ ಗಾಯಕರಾದ ಪ್ರಭಾತ್ ಶರ್ಮ (85) ಮಂಗಳವಾರ ನಿಧನರಾದರು.



ರಾಷ್ಟ್ರ ಪ್ರಶಸ್ತಿ ವಿಜೇತ ಅವರ ಮಗಳು ತರಳಿ ಶರ್ಮ ಈ ವಿಚಾರವನ್ನು ದೃಢಪಡಿಸಿದ್ದು, ‘ಮುಂಜಾನೆ 4.30ಕ್ಕೆ ಎದ್ದ ತಂದೆ, ಅಮ್ಮನ ಜೊತೆ ಮಾತನಾಡಿ ನಂತರ ಮಲಗಿಕೊಂಡರು. ಬೆಳಿಗ್ಗೆ 6 ಗಂಟೆಗೆ ಎಬ್ಬಿಸುವಾಗ ಅವರು ನಿಧನರಾಗಿದ್ದರು’ ಎಂದು ಹೇಳಿದ್ದಾರೆ. 2003ರಲ್ಲಿ ಅವರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು.





ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳ ಮೂಲಕ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ, ಹಣ ಕೇಳುವ ದಂಧೆ ಪ್ರಾರಂಭವಾಗಿದೆ. ಇದರ ಕುರಿತು ನಾವು ಹೇಗೆ ಎಚ್ಚರ ವಹಿಸಬಹುದು. ಇಲ್ಲಿದೆ ನೋಡಿ

ನಕಲಿ ಖಾತೆಗಳ ಹಾವಳಿ ಬೇಸ್ತು ಬೀಳದಿರಿ

ಅವಿನಾಶ್ ಬಿ.

'ಸ್ನೇಹಿತರೇ ಈಗ ಫೇಸ್‌ಬುಕ್, ಇನ್‌ಸ್ಟಾಗ್ರಾಂನಲ್ಲಿ ಹೊಸದಾಗಿ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ ಹಣ ಕೇಳಿದ್ದಾರೆ. ಕೆಲವರಿಗೆ ಕೊಟ್ಟಿದ್ದೇನೆ. ಆದರೆ ಮೋಸ ಹೋದೆ' ಅಂತ ಹೇಳಿರುವುದನ್ನು ಇತ್ತೀಚಿನ ದಿನಗಳಲ್ಲಿ ಹೆಚ್ಚಿನವರು ಕೇಳಿದ್ದೀರಿ. ವಾಸ್ತವವಾಗಿ ಸ್ನೇಹಿತರ ಹೆಸರಲ್ಲಿ ಹಣ ಮಾಡುವ ಇಂಟರ್ನೆಟ್ ಕಥೆಗಳಿವು.

ಇಂಟರ್ನೆಟ್ ಎಂಬುದು ಮುಳ್ಳಿನ ಮೇಲಿನ ನಡಿಗೆಯಂತೆಯೇ; ಎಚ್ಚರ ತಪ್ಪಿದರೆ ಚುಚ್ಚುತ್ತದೆ. ಇದಕ್ಕೆ ಉದಾಹರಣೆಯೇ, ನಮ್ಮನ್ನೇ ಹೋಲುವ ಅಥವಾ ನಮ್ಮ ಸ್ನೇಹಿತರನ್ನೇ ಹೋಲುವ ಸಾಕಷ್ಟು ನಕಲಿ ಖಾತೆಗಳು ದಿಢೀರ್ ಆಗಿ ಹುಟ್ಟಿಕೊಳ್ಳಲಾರಂಭಿಸಿರುವುದು. ನಾವೇನೋ ಹ್ಯಾಕ್ ಆಗಿದೆ ಅಂತೆಲ್ಲಾ ಹೆದರುತ್ತಿದ್ದೇವೆ. ಆದರೆ ಇದು ಹಣ ಮಾಡುವ ವಂಚಕರ ದಂಧೆ. ನಮ್ಮದೇ ಪ್ರೊಫೈಲಿನಿಂದ ಫೋಟೋಗಳನ್ನು ಕದ್ದು, ತಮ್ಮ ಪ್ರೊಫೈಲಿಗೆ ಹಾಕಿಕೊಳ್ಳುತ್ತಾರೆ. ಫ್ರೆಂಡ್ ರಿಕ್ವೆಸ್ಟ್ ಬಂದಾಗ ಅವರು ಈಗಾಗಲೇ ನಮ್ಮ ಫ್ರೆಂಡ್ ಲಿಸ್ಟ್‌ಲ್ಲಿ ಇದ್ದಾರೆಯೇ ಅಂತ ನಾವು ಯೋಚಿಸುವುದೇ ಇಲ್ಲ. ಸ್ನೇಹದ ಕೋರಿಕೆಯನ್ನು ಸ್ವೀಕರಿಸಿಬಿಡುತ್ತೇವೆ. ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಪ್ರಭಾವವುಳ್ಳವರು ಫ್ರೆಂಡ್ ರಿಕ್ವೆಸ್ಟ್ ಕಳಿಸಿದರೆ 'ಹೆಮ್ಮೆ' ಮತ್ತು 'ಪ್ರತಿಷ್ಠೆ'ಯೂ ಆಗುತ್ತದೆ ಅಲ್ವೇ? ಒಪ್ಪಿಕೊಂಡಿರುತ್ತೇವೆ.

ಈ ವಂಚನೆಯ ಟ್ರೆಂಡ್ ಈಗ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮಾತ್ರವಲ್ಲದೆ ಇಮೇಲ್ ಮೂಲಕವೂ ಹಬ್ಬುತ್ತಿದೆ. ಇದಕ್ಕೆ ಇಂಪರ್ಸೊನೇಶನ್ ಎನ್ನುತ್ತಾರೆ. ಸಾಮಾಜಿಕ ಜಾಲತಾಣಗಳ ಬಗ್ಗೆ ಅಲ್ಪಜ್ಞಾನ ಇರುವವರು, ವಯಸ್ಕರೇ ಈ ವಂಚಕರ ಪ್ರಮುಖ ಟಾರ್ಗೆಟ್. ವಿದ್ಯಾವಂತರೂ ಈ ವಂಚಕರ ಸುಳಿಗೆ ಬಿದ್ದಿದ್ದಾರೆ ಎಂಬುದು ಮತ್ತಷ್ಟು ಆತಂಕಕಾರಿ ಸಂಗತಿ.

ತಕ್ಷಣ ಏನು ಮಾಡಬೇಕು?


ಮೊದಲನೆಯದಾಗಿ, ಫ್ರೆಂಡ್ ರಿಕ್ವೆಸ್ಟ್ ಬಂದಾಗಲೇ ಎಚ್ಚರಿಕೆ ವಹಿಸಲೇಬೇಕು. ಆ ಪ್ರೊಫೈಲಿನಲ್ಲಿ ಕೇವಲ ಒಂದೆರಡು ಪೋಸ್ಟ್‌ಗಳಿರಬಹುದು ಅಥವಾ ಪ್ರೊಫೈಲ್ ಲಾಕ್ ಮಾಡಿರಬಹುದು. ಆಗಲೇ ನಿಮಗೆ ಸಂಶಯ ಮೂಡಬೇಕು. ದುಡ್ಡು ಕೇಳುವಷ್ಟು ಸಲುಗೆ ಇದ್ದವರಲ್ಲಿ ನಿಮ್ಮ ಮೊಬೈಲ್ ನಂಬರ್ ಇರುವುದಿಲ್ಲವೇ? ಸೋಷಿಯಲ್ ಮೀಡಿಯಾದಲ್ಲಿ ಕೇಳಿದರೆಂದರೆ ಹಣ ಕೊಡಲೇಬಾರದು. ವಂಚಕರು ಬಹುತೇಕ ಹೊರ ದೇಶ ಅಥವಾ ಹೊರ ರಾಜ್ಯದವರಾಗಿರುತ್ತಾರೆ. ಹೀಗಾಗಿ ನಮ್ಮದೇ ಭಾಷೆಯಲ್ಲಿ ಮಾತನಾಡುವುದೂ ಅವರನ್ನು ಪತ್ತೆ ಮಾಡುವ ಮತ್ತೊಂದು ವಿಧಾನ.

ನಿಮ್ಮ ಹೆಸರಲ್ಲಿ ಅಥವಾ ಸ್ನೇಹಿತರ ಹೆಸರಲ್ಲಿ ನಕಲಿ ಖಾತೆ ಸೃಷ್ಟಿಯಾಗಿದೆ ಎಂಬುದು ಖಚಿತವಾದ ಬಳಿಕ, ಆ ನಕಲಿ ಪ್ರೊಫೈಲ್‌ನ ಬಲಭಾಗದಲ್ಲಿರುವ ಮೂರು ಚುಕ್ಕಿಗಳ ಮೆನುವನ್ನು ಆಯ್ಕೆ ಮಾಡಿದಾಗ, Find Support or Report Profile ಎಂಬ ವಿಭಾಗವೊಂದು ಕಾಣಿಸುತ್ತದೆ. ಅಲ್ಲಿಗೆ ಹೋಗಿ ಈ ಬಗ್ಗೆ ಫೇಸ್‌ಬುಕ್‌ಗೆ ದೂರು ಕೊಡಿ.

ಅಂತೆಯೇ ಈ ನಕಲಿ ಖಾತೆಯಿಂದ ಫ್ರೆಂಡ್ ರಿಕ್ವೆಸ್ಟ್ ಸ್ವೀಕರಿಸಿ ಯಾರೂ ಮೋಸ ಹೋಗದಂತೆ ಎಚ್ಚರಿಕೆ ಸೂಚನೆಯನ್ನು ಪೋಸ್ಟ್ ಮಾಡಿಬಿಡಿ.

ಇನ್‌ಸ್ಟಾಗ್ರಾಂನಲ್ಲಾದರೆ ಅದರ help ವಿಭಾಗಕ್ಕೆ ಹೋಗಿ Report an Impersonation Account ಅಂತ ಹುಡುಕಿದಾಗ ಬರುವ ಲಿಂಕ್‌ನಲ್ಲಿ ದೂರು ನೀಡಬಹುದು. ಅಲ್ಲಿ ಪೂರ್ಣ ವಿವರ ನೀಡಿ, ಗುರುತಿನ ದಾಖಲೆಯನ್ನೂ ನೀಡಬೇಕಾಗಬಹುದು. ಇದೇ ರೀತಿ, ಇಮೇಲ್ ಮೂಲಕ ಬರುವ ಕೋರಿಕೆಗಳನ್ನೂ ತಿರಸ್ಕರಿಸಿಬಿಡಿ. ಸೈಬರ್ ಪೊಲೀಸರಿಗೂ ದೂರು ನೀಡಿ.

ಗಮನದಲ್ಲಿರಲಿ. ಇಂತಹ ವಿದ್ಯಮಾನದ ಬಗ್ಗೆ ಕೆಲವರು 'ನನ್ನ ಖಾತೆ ಹ್ಯಾಕ್ ಆಗಿದೆ' ಅಂತ ಭಯಬೀಳುತ್ತಾರೆ. ಆತಂಕ ಬೇಡ. ಇವೆಲ್ಲ ನಕಲಿ ಖಾತೆಗಳಷ್ಟೇ. ಆದರೆ, ಆನ್‌ಲೈನ್‌ಗೆ ಬಂದಿರೆಂದಾದರೆ ಪ್ರತಿ ಹೆಜ್ಜೆಯಲ್ಲೂ ಎಚ್ಚರಿಕೆ ಅಗತ್ಯ. ❖



ಮನವೊಲಿಕೆಗೆ ವಾಟ್ಸ್‌ಆ್ಯಪ್ ಕಸರತ್ತು!

ವಾಟ್ಸ್‌ಆ್ಯಪ್‌ನ ಹೊಸ ನಿಯಮ ಒಪ್ಪದಿದ್ದರೆ ಮೇ 15ರ ಬಳಿಕ ವಾಟ್ಸ್‌ಆ್ಯಪ್ ಖಾತೆ ಡಿಲೀಟ್ ಆಗುವುದಿಲ್ಲವಾದರೂ ಕೆಲವು ಆಯ್ಕೆಗಳು ನಿಷ್ಕ್ರಿಯವಾಗಲಿವೆ.

ವಿಶ್ವನಾಥ ಎಸ್.

ಖಾಸಗಿತನಕ್ಕೆ ಸಂಬಂಧಿಸಿದ ತನ್ನ ಹೊಸ ನಿಯಮವನ್ನು ಬಳಕೆದಾರರು ಅಷ್ಟು ಸುಲಭಕ್ಕೆ ಒಪ್ಪಿಕೊಳ್ಳುವುದಿಲ್ಲ ಎನ್ನುವುದು ವಾಟ್ಸ್‌ಆ್ಯಪ್ ಗಮನಕ್ಕೆ ಬಂದಿದೆ. ಆ ಕಾರಣಕ್ಕಾಗಿಯೇ ಪದೇ ಪದೇ ಸ್ಪಷ್ಟನೆ, ಭರವಸೆ ಕೊಡುವ ಜೊತೆ ಜೊತೆಗೇ ನಿಯಮದಲ್ಲಿ ಕೆಲವೊಂದು ಬದಲಾವಣೆಗಳನ್ನೂ ಮಾಡುತ್ತಾ ಬಳಕೆದಾರರ ಮನವೊಲಿಸುವ ಕಸರತ್ತು ನಡೆಸುತ್ತಿದೆ.

ಹೊಸ ನಿಯಮದ ಬಗ್ಗೆ ಬಳಕೆದಾರರು, ಪ್ರಮುಖ ಉದ್ಯಮಿಗಳಿಂದ ತೀವ್ರ ಟೀಕೆ ವ್ಯಕ್ತವಾಗುತ್ತಿರುವುದು ಮಾತ್ರವಲ್ಲ. ವಾಟ್ಸ್‌ಆ್ಯಪ್ ಬಳಕೆ ಕೈಬಿಟ್ಟು ಸಿಗ್ನಲ್ ಮತ್ತು ಟೆಲಿಗ್ರಾಂ ಆ್ಯಪ್ ಬಳಸುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಹೊಸದಾಗಿ ವಾಟ್ಸ್‌ಆ್ಯಪ್ ಡೌನ್‌ಲೋಡ್ ಮಾಡುವವರ ಸಂಖ್ಯೆಯಲ್ಲಿ ಇಳಿಕೆ ಕಂಡುಬರುತ್ತಿದೆ. ಈ ಬೆಳವಣಿಗೆಯು ವಾಟ್ಸ್‌ಆ್ಯಪ್‌ನ ನಿದ್ದೆಗೆಡಿಸುತ್ತಿದೆ. ಹೀಗಾಗಿ ಫೆಬ್ರುವರಿ 8ರಿಂದ ಜಾರಿಗೊಳಿಸಲು ಹೊರಡಿಸಿದ್ದ ನಿಯಮವನ್ನು ಮೇ 15ಕ್ಕೆ ಮುಂದೂಡಿದೆ. ತಪ್ಪು ಮಾಹಿತಿ ಹರಡುತ್ತಿರುವುದರಿಂದ ಹೊಸ ನೀತಿಯನ್ನು ಒಪ್ಪಿಕೊಳ್ಳುವ ಗಡುವನ್ನು ವಿಸ್ತರಣೆ ಮಾಡಿರುವುದಾಗಿ ಘೋಷಿಸಿದೆ.

ಖಾಸಗಿ ನೀತಿಯಲ್ಲಿ ಮಾಡಿರುವ ಬದಲಾವಣೆಗಳನ್ನು ಕೈಬಿಡುವಂತೆ ಭಾರತದ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಸಚಿವಾಲಯವೂ ವಾಟ್ಸ್‌ಆ್ಯಪ್‌ಗೆ ಪತ್ರ ಬರೆದಿದೆ. ಬಳಕೆದಾರರ ಖಾಸಗಿ ಹಕ್ಕನ್ನು ಉಲ್ಲಂಘಿಸಲಾಗುತ್ತಿದೆ ಎಂದು ಆರೋಪಿಸಿ ವಕೀಲರೊಬ್ಬರು ವಾಟ್ಸ್‌ಆ್ಯಪ್‌ನ ಹೊಸ ನೀತಿಯ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಕುರಿತು ವಿಚಾರಣೆ ನಡೆಸಿದ ನ್ಯಾಯಾಲಯವು ವಾಟ್ಸ್‌ಆ್ಯಪ್‌ನಿಂದ ಸ್ಪಷ್ಟನೆ ಪಡೆಯಲು ಕೇಂದ್ರ ಸರ್ಕಾರಕ್ಕೆ ಮೂರುವಾರಗಳ ಕಾಲಾವಕಾಶ ನೀಡಿದೆ. ವಾಟ್ಸ್‌ಆ್ಯಪ್‌ನ ಹೊಸ ನೀತಿಯ ಕುರಿತು ಉನ್ನತ ಮಟ್ಟದ ಪರಿಶೀಲನೆ ನಡೆಸುವುದಾಗಿ ಕೇಂದ್ರವು ಹೈಕೋರ್ಟ್‌ಗೆ ತಿಳಿಸಿದೆ.

ಮೇ 15ರಂದು ಹೊಸ ನೀತಿಗೆ ಒಪ್ಪಿಗೆ ನೀಡದೇ ಇರುವ ಬಳಕೆದಾರರ ಖಾತೆ ಡಿಲೀಟ್ ಮಾಡುವುದಿಲ್ಲ. ಆದರೆ, ಹೊಸ ನೀತಿ ಒಪ್ಪಿಕೊಳ್ಳದ ಹೊರತು ವಾಟ್ಸ್‌ಆ್ಯಪ್ ಸಂಪೂರ್ಣವಾಗಿ ಕಾರ್ಯನಿರ್ವಹಿಸುದಿಲ್ಲ. ಅಂದರೆ, ಹೊಸ ನೀತಿಯನ್ನು ಒಪ್ಪಿಕೊಳ್ಳಲಿ ಎನ್ನುವ ಕಾರಣಕ್ಕೆ ಅಲ್ಪಾವಧಿಗೆ ಮಾತ್ರ ವಾಟ್ಸ್‌ಆ್ಯಪ್ ಕರೆಗಳು, ನೋಟಿಫಿಕೇಷನ್ ಬರುತ್ತವೆ. ಆದರೆ, ಮೆಸೇಜ್ ಓದಲು ಅಥವಾ ಕಳುಹಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದೆ.

ಅಲ್ಪಾವಧಿಗೆ ವಾಟ್ಸ್‌ಆ್ಯಪ್ ಕಾಲ್ ಮತ್ತು ನೋಟಿಫಿಕೇಷನ್ ವೈಶಿಷ್ಟ್ಯಗಳು ಇರಲಿವೆ ಎಂದು ಕಂಪನಿ ತಿಳಿಸಿದೆಯಾದರೂ ಎಲ್ಲಿಯವರೆಗೆ ಎನ್ನುವುದನ್ನು ಇನ್ನಷ್ಟೇ ನಿಖರವಾಗಿ ತಿಳಿಸಬೇಕಿದೆ. ಮೆಸೇಜ್ ಕಳುಹಿಸಲು, ಓದಲು ಸಾಧ್ಯವಾಗದೇ ಇದ್ದರೆ ವಾಟ್ಸ್‌ಆ್ಯಪ್ ಇದ್ದೂ ಇಲ್ಲದಂತೆಯೇ ಸರಿ. ಏಕೆಂದರೆ ಬಹುಪಾಲು ಬಳಕೆದಾರರು ವಾಟ್ಸ್‌ಆ್ಯಪ್ ಬಳಸುತ್ತಿರುವುದೇ ಮೆಸೇಜ್ ಮೂಲಕ ಸಂವಹನ ನಡೆಸಲು. ಹೀಗಿರುವಾಗ ಆ ಆಯ್ಕೆಯೇ ಇಲ್ಲದೇ ಇದ್ದರೆ? ಒಟ್ಟಾರೆಯಾಗಿ ಗಮನಿಸಿದರೆ, ಕಂಪನಿಯು ಏನೆಲ್ಲಾ ಭರವಸೆ, ಸ್ಪಷ್ಟನೆ ನೀಡಿದರೂ ನಿಯಮದಲ್ಲಿ ಪರಿಷ್ಕರಣೆ ಮಾಡಿದರೂ ವಾಟ್ಸ್‌ಆ್ಯಪ್ ಬಳಸಬೇಕು ಎಂದರೆ ಹೊಸ ನಿಯಮ ಒಪ್ಪಿಕೊಳ್ಳದೇ ಬೇರೆ ದಾರಿ ಇಲ್ಲ ಎನ್ನುವುದಂತೂ ಸ್ಪಷ್ಟವಾಗುತ್ತದೆ. ❖

ಬಳಕೆದಾರರಿಗೆ ಇರುವ ಆಯ್ಕೆಗಳೇನು?

- ಮೇ 15ರ ಬಳಿಕವೂ ಹೊಸ ನಿಯಮಕ್ಕೆ ಒಪ್ಪಿಗೆ ನೀಡಬಹುದು.
- ಮೇ 15ಕ್ಕೂ ಮುನ್ನ ಚಾಟ್ ಹಿಸ್ಟರಿಯನ್ನು ಎಕ್ಸ್‌ಪೋರ್ಟ್ ಮಾಡಿಕೊಳ್ಳಬಹುದು. ನಿಮ್ಮ ಖಾತೆಯ ರಿಪೋರ್ಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಖಾತೆಯನ್ನು ಡಿಲೀಟ್ ಮಾಡುವ ಮುನ್ನ ಮತ್ತೊಮ್ಮೆ ಆಲೋಚಿಸಿ. ಏಕೆಂದರೆ ಒಮ್ಮೆ ಡಿಲೀಟ್ ಮಾಡಿದರೆ ಮತ್ತೆ ಮರು ಸ್ಥಾಪನೆ ಸಾಧ್ಯವಿಲ್ಲ. ಮೆಸೇಜ್ ಹಿಸ್ಟರಿ ಅಳಿಸಿಹೋಗುತ್ತದೆ. ಎಲ್ಲಾ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಂದ ನೀವು ಹೊರಬರಬೇಕಾಗುತ್ತದೆ. ಅಷ್ಟೇ ಅಲ್ಲ ವಾಟ್ಸ್‌ಆ್ಯಪ್ ಬ್ಯಾಕಪ್ ಸಹ ಡಿಲೀಟ್ ಆಗುತ್ತದೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಬೆಳಕು, ಪ್ರತಿಫಲನ ಮತ್ತು ವಕ್ರೀಭವನ

ಭೌತಶಾಸ್ತ್ರ

ಎಸ್ಸೆಸ್ಸೆಲ್ಸಿ

ಅಧ್ಯಾಯ-10

ಒಂದು ವಸ್ತುವಿನ ಮೇಲೆ ಬಿದ್ದ ಬೆಳಕು ಪ್ರತಿಫಲಿಸಿದಾಗ, ಪ್ರತಿಫಲಿತ ಬೆಳಕನ್ನು ನಮ್ಮ ಕಣ್ಣುಗಳು ಸ್ವೀಕರಿಸಿದಾಗ ವಸ್ತುಗಳು ನಮಗೆ ಗೋಚರಿಸುತ್ತವೆ. ಬೆಳಕು ಯಾವಾಗಲೂ ಸರಳರೇಖೆಯ ಪಥದಲ್ಲಿ ಚಲಿಸುತ್ತದೆ. ಬೆಳಕಿನ ಹಾದಿಯಲ್ಲಿ ಅಪಾರದರ್ಶಕ ವಸ್ತುವು ಬಂದಾಗ ನೆರಳನ್ನು ಉಂಟು ಮಾಡುತ್ತದೆ.

ಬೆಳಕಿನ ಪ್ರತಿಫಲನ

ದರ್ಪಣದಂತಹ ಹೆಚ್ಚು ನಯಗೊಳಿಸಿದ ಮೇಲ್ಮೈಗಳು ತಮ್ಮ ಮೇಲೆ ಬೀಳುವ ಬೆಳಕನ್ನು ಹಿಂದಕ್ಕೆ ಪ್ರತಿಫಲಿಸುತ್ತವೆ. ಈ ಕ್ರಿಯೆಯನ್ನು ಬೆಳಕಿನ ಪ್ರತಿಫಲನ ಎನ್ನುವರು.

ಪ್ರತಿಫಲದ ನಿಯಮಗಳು


1. ಪತನ ಕೋನವು ಪ್ರತಿಫಲನ ಕೋನಕ್ಕೆ ಸಮನಾಗಿರುತ್ತದೆ.
2. ಪತನ ಕಿರಣ ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು ಪ್ರತಿ ಫಲಿತ ಕಿರಣ ಈ ಮೂರು ಒಂದೇ ಸಮತಲದಲ್ಲಿರುತ್ತವೆ.

ಸಮತಲ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬದ ಲಕ್ಷಣಗಳು

- ಉಂಟಾದ ಪ್ರತಿಬಿಂಬವು ಯಾವಾಗಲೂ ಮಿಥ್ಯ ಮತ್ತು ನೇರವಾಗಿರುತ್ತದೆ.
- ಪ್ರತಿಬಿಂಬದ ಗಾತ್ರವು ವಸ್ತುವಿನ ಗಾತ್ರಕ್ಕೆ ಸಮನಾಗಿರುತ್ತದೆ.
- ವಸ್ತುವು ದರ್ಪಣದ ಮುಂದೆ ಎಷ್ಟು ದೂರದಲ್ಲಿದೆಯೋ, ಅಷ್ಟೆ ಹಿಂದೆ ಪ್ರತಿಬಿಂಬವು ಉಂಟಾಗುತ್ತದೆ.

ವಕ್ರ ಮೇಲ್ಮೈ ದರ್ಪಣಗಳು (ಗೋಳೀಯ ದರ್ಪಣಗಳು)


1) ನಿಮ್ನ ದರ್ಪಣ:



(a)

ಗೋಳೀಯ ದರ್ಪಣದ, ಪ್ರತಿಫಲಿಸುವ ಮೇಲ್ಮೈ ಒಳಮುಖವಾಗಿ ಬಾಗಿದ್ದರೆ ಅಂದರೆ, ಗೋಳದ ಕೇಂದ್ರದ ಕಡೆಗೆ ಮುಖ ಮಾಡಿದ್ದರೆ ಅದನ್ನು ನಿಮ್ನ ದರ್ಪಣ ಎಂದು ಕರೆಯುತ್ತಾರೆ.

2) ಪೀನದರ್ಪಣ:



(b)

ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಹೊರಮುಖವಾಗಿದ್ದರೆ ಅದನ್ನು ಪೀನ ದರ್ಪಣ ಎನ್ನುವರು.

ಗೋಳೀಯ ದರ್ಪಣಗಳ ಕೆಲ ಮುಖ್ಯ ಅಂಶಗಳು

ಧ್ರುವ (P): ಒಂದು ಬಿಂದುವಾಗಿದ್ದು, ಗೋಳಾಕಾರದ ಪ್ರತಿಫಲಿಸುವ ಮೇಲ್ಮೈಯ ಕೇಂದ್ರವಾಗಿದೆ.

ವಕ್ರತಾ ಕೇಂದ್ರ (C): ಇದು ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ರೂಪಿಸುವ ಗೋಳದ ಕೇಂದ್ರವಾಗಿದೆ. ಇದು ನಿಮ್ನ ದರ್ಪಣದಲ್ಲಿ ಅದರ ಮುಂಭಾಗದಲ್ಲಿಯೂ, ಪೀನ ದರ್ಪಣದಲ್ಲಿ ಅದರ ಹಿಂಭಾಗದಲ್ಲಿಯೂ ಇರುತ್ತದೆ.

ವಕ್ರತಾ ತ್ರಿಜ್ಯ (R): ಗೋಳೀಯ ದರ್ಪಣದ ಪ್ರತಿಫಲಿಸುವ ಭಾಗವನ್ನು ಹೊಂದಿರುವ ಗೋಳದ ತ್ರಿಜ್ಯವನ್ನು ದರ್ಪಣದ ವಕ್ರತಾ ತ್ರಿಜ್ಯ ಎನ್ನುವರು.

ಪ್ರಧಾನಾಕ್ಷ: ಗೋಳೀಯ ದರ್ಪಣದ ವಕ್ರತಾ ಕೇಂದ್ರ ಮತ್ತು ಧ್ರುವದ ಮೂಲಕ ಹಾದು ಹೋಗುವ ಸರಳ ರೇಖೆಯಾಗಿದೆ.

ಸಂಗಮ ಬಿಂದು (F): ನಿಮ್ನ ದರ್ಪಣದಲ್ಲಿ ಪ್ರತಿಫಲಿತ ಕಿರಣಗಳು ದರ್ಪಣದ ಪ್ರಧಾನಾಕ್ಷದ ಮೇಲಿರುವ ಒಂದು ಬಿಂದುವಿನಲ್ಲಿ ಸಂಧಿಸುತ್ತವೆ. ಇದನ್ನು ನಿಮ್ನದರ್ಪಣದ ಸಂಗಮ ಬಿಂದು ಎನ್ನುವರು.

ಪೀನ ದರ್ಪಣದಲ್ಲಿ ಪ್ರತಿಫಲಿತ ಕಿರಣಗಳು ಪ್ರಧಾನಾಕ್ಷದ ಮೇಲಿರುವ ಒಂದು ಬಿಂದುವಿನಿಂದ ಬಂದಂತೆ ಭಾಸವಾಗುತ್ತದೆ. ಈ ಬಿಂದುವನ್ನು ಪೀನದರ್ಪಣದ ಸಂಗಮ ಬಿಂದು ಎನ್ನುವರು.

ಸಂಗಮ ದೂರ (f): ಇದು ಗೋಳೀಯ ದರ್ಪಣದ ಧ್ರುವ ಮತ್ತು ಸಂಗಮ ಬಿಂದುಗಳ ನಡುವಿನ ದೂರವಾಗಿದೆ.

ಅಪರ್ಚರ್: ಇದು ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈನ ವ್ಯಾಸವಾಗಿದೆ.

ವಕ್ರತಾ ತ್ರಿಜ್ಯ ಮತ್ತು ಸಂಗಮ ದೂರಗಳ ನಡುವಿನ ಸಂಬಂಧ: ಗೋಳೀಯ ದರ್ಪಣದ ವಕ್ರತಾ ತ್ರಿಜ್ಯ R ಮತ್ತು ಸಂಗಮ ದೂರ f ಗಳ ನಡುವಿನ ಸಂಬಂಧವು $R = 2f$ ಆಗಿದೆ. ಅಂದರೆ ವಕ್ರತಾ ತ್ರಿಜ್ಯ ಸಂಗಮ ದೂರ ಎರಡರಷ್ಟಿರುತ್ತದೆ ಮತ್ತು ಸಂಗಮ ಬಿಂದುವು ದರ್ಪಣದ ಧ್ರುವ ಮತ್ತು ವಕ್ರತಾ ಕೇಂದ್ರವನ್ನು ಸೇರಿಸುವ ರೇಖೆಯ ಮಧ್ಯಭಾಗದಲ್ಲಿರುತ್ತದೆ.

ನಿಮ್ನ ದರ್ಪಣದ ಉಪಯೋಗಗಳು

- ಟಾರ್ಚ್‌ಗಳಲ್ಲಿ, ತಪಾಸಣಾ ದೀಪಗಳಲ್ಲಿ ಮತ್ತು ವಾಹನಗಳ ಮುಂಭಾಗದ ದೀಪಗಳಲ್ಲಿ ಬೆಳಕಿನ ಸಮಾಂತರ ಕಿರಣ ಪುಂಜವನ್ನು ಪಡೆಯಲು ಬಳಸಲಾಗುತ್ತದೆ.
- ಕ್ಷೌರ ದರ್ಪಣಗಳಲ್ಲಿ ಮುಖದ ದೊಡ್ಡ ಪ್ರತಿಬಿಂಬ ಪಡೆಯಲು ಬಳಸುತ್ತಾರೆ.
- ದಂತ ವೈದ್ಯರು ರೋಗಿಯ ಹಲ್ಲುಗಳ ದೊಡ್ಡ ಪ್ರತಿಬಿಂಬವನ್ನು ಪಡೆಯಲು ಬಳಸುತ್ತಾರೆ.
- ಸೌರ ಕುಲುಮೆಗಳಲ್ಲಿ ಸೂರ್ಯನ ಕಿರಣಗಳನ್ನು ಕೇಂದ್ರೀಕರಿಸಲು ಬಳಸುತ್ತಾರೆ

ಪೀನದರ್ಪಣದ ಉಪಯೋಗಗಳು

- ವಾಹನಗಳಲ್ಲಿ ಹಿನ್ನೋಟ ದರ್ಪಣಗಳಾಗಿ ಉಪಯೋಗಿಸುತ್ತಾರೆ. ಇದು ಅವರ ಹಿಂಭಾಗದ ಹೆಚ್ಚಿನ ಕ್ಷೇತ್ರವನ್ನು ವೀಕ್ಷಿಸಲು ಸಹಾಯಕವಾಗಿದೆ.
- ಸಂಚಾರಿ ದರ್ಪಣಗಳಾಗಿ ಬಳಸುತ್ತಾರೆ. ❖

ಚಿತ್ರಕೃಪೆ: ಎನ್‌ಸಿಇಆರ್‌ಟಿ

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಪೀರಿಯಾಡಿಕ್ ಕ್ಲಾಸಿಫಿಕೇಷನ್ ಆಫ್ ಎಲಿಮೆಂಟ್ಸ್_ಹಿಸ್ಟರಿ ಆಫ್ ಪೀರಿಯಾಡಿಕ್ ಕ್ಲಾಸಿಫಿಕೇಷನ್ ಆಫ್ ಎಲಿಮೆಂಟ್ಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ https://bit.ly/301ay7u

ಅರೆವಾಹಕ ಎಲೆಕ್ಟ್ರಾನಿಕ್ಸ್: ಸಾಮಗ್ರಿಗಳು ಮತ್ತು ಸರಳ ಮಂಡಲಗಳು

ಭೌತಶಾಸ್ತ್ರ

ದ್ವಿತೀಯ ಪಿಯುಸಿ


ವಾಹಕತೆಯ ಆಧಾರದ ಮೇಲೆ ವಸ್ತುಗಳ ವರ್ಗೀಕರಣ:

ವಸ್ತುಗಳು	ಗುಣಲಕ್ಷಣಗಳು	ವಾಹಕತೆ (Σ)	ರೋಧಶೀಲನೆ (∫)
1) ಲೋಹಗಳು	ಕಡಿಮೆ ರೋಧಶೀಲತೆ ಹೆಚ್ಚಿನ ವಾಹಕತೆ	$10^2 - 10^8\ Sm^{-1}$	$10^{-2} - 10^{-8}\ \Omega m$
2) ಅರೆ ವಾಹಕಗಳು	ರೋಧಶೀಲತೆ ಮತ್ತು ವಾಹಕತೆ ಬೆಲೆಯ ಲೋಹಗಳ ಮತ್ತು ನಿರೋಧಕಗಳ ನಡುವೆ ಇರುತ್ತದೆ.	$10^5 - 10^{-6}\ Sm^{-1}$	$10^{-5} - 10^6\ \Omega m$
3) ನಿರೋಧಕಗಳು	ಅತಿ ಹೆಚ್ಚು ರೋಧ ಶೀಲತೆ ಮತ್ತು ಅತಿ ಕಡಿಮೆ ವಾಹಕತ್ವ	$10^{-11} - 10^{-19}\ Sm^{-1}$	$10^{11} - 10^{19}\ \Omega m$

ಶಕ್ತಿಯ ಪಟ್ಟಿ ಸಿದ್ಧಾಂತದ ಆಧಾರದ ಮೇಲೆ ವರ್ಗೀಕರಣ


ಎಲೆಕ್ಟ್ರಾನುಗಳ ಶಕ್ತಿಯು ನಿರಂತರವಾಗಿ ಬದಲಾಗುವ ಅವುಗಳ ಶಕ್ತಿಮಟ್ಟಗಳನ್ನು ಶಕ್ತಿಪಟ್ಟಿ ಎನ್ನುವರು. ಎಲ್ಲಾ ವೇಲೆನ್ಸ್ ಎಲೆಕ್ಟ್ರಾನ್‌ಗಳು ಸೇರ್ಪಡೆಗೊಂಡಿರುವ ಅವುಗಳ ಶಕ್ತಿಮಟ್ಟವನ್ನು ವೇಲೆನ್ಸ್ ಪಟ್ಟಿ (Ev)ಎಂತಲೂ ವೇಲೆನ್ಸ್ ಪಟ್ಟಿಯ ಮೇಲ್ಭಾಗದಲ್ಲಿರುವ ಪಟ್ಟಿಯನ್ನು ವಹನ ಪಟ್ಟಿ (Ec) ಎಂತಲೂ ಕರೆಯುತ್ತಾರೆ.

ಹೊರಗಿನ ಶಕ್ತಿ ಪೂರೈಕೆಯಾದಾಗ ಎಲೆಕ್ಟ್ರಾನ್‌ಗಳು ವೇಲೆನ್ಸ್ ಪಟ್ಟಿಯಿಂದ ವಹನ ಪಟ್ಟಿಗೆ ಚಲಿಸಿ ವಸ್ತುವಿನ ವಾಹಕತೆಗೆ ಕಾರಣೀಕರ್ತವಾಗುತ್ತವೆ. ವೇಲೆನ್ಸ್ ಪಟ್ಟಿ ಮತ್ತು ವಹನ ಪಟ್ಟಿಗಳ ನಡುವಿನ ಅಂತರವನ್ನು ಶಕ್ತಿ ಪಟ್ಟಿ ಅಂತರ (Eg) ಎಂದು ಕರೆಯುತ್ತಾರೆ. ಈ ಅಂತರವು ವಸ್ತುಗಳ ವಾಹಕತೆಯನ್ನು ನಿರ್ಧರಿಸುತ್ತದೆ.



(i)

(1) ವಾಹಕಗಳು



(ii)


ವೇಲೆನ್ಸ್ ಪಟ್ಟಿ ಮತ್ತು ವಹನ ಪಟ್ಟಿಗಳೆರೆಡು ಪರಸ್ಪರ ಅಧಿವ್ಯಾಪಿಸಿದ್ದು ಎಲೆಕ್ಟ್ರಾನುಗಳು ಎರಡು ಪಟ್ಟಿಗಳ ನಡುವೆ ಸುಲಭವಾಗಿ ಮತ್ತು ಸ್ವತಂತ್ರವಾಗಿ ಚಲಿಸಬಲ್ಲವು. ಇಲ್ಲಿ ($Eg = 0$) ಶಕ್ತಿ ಅಂತರವು ಶೂನ್ಯವಾಗಿರುತ್ತದೆ.

ಉದಾ: ಲೋಹಗಳು

(2) ನಿರೋಧಕಗಳು:


ಇಂತಹ ವಸ್ತುಗಳಲ್ಲಿ ಶಕ್ತಿ ಅಂತರ (Eg) ಯು ತುಂಬಾ ಜಾಸ್ತಿಯಿದ್ದು ($Eg > 3eV$) ವೇಲೆನ್ಸ್ ಪಟ್ಟಿಯ ಎಲೆಕ್ಟ್ರಾನ್‌ಗಳು ಆಕ್ರಮಿಸಿಕೊಂಡಿರುತ್ತವೆ.

ಹೆಚ್ಚಿನ ಹೊರಗಿನ ಶಕ್ತಿಯನ್ನು ನೀಡುವ ತನಕ ವಹನ ಪಟ್ಟಿಯು ಖಾಲಿಯಾಗಿರುವುದರಿಂದ ಇದು ಯಾವುದೇ ವಾಹಕತೆಯನ್ನು ತೋರಿಸುವುದಿಲ್ಲ



(b)

(3) ಅರೆವಾಹಕಗಳು



(c)

ಅರೆವಾಹಕಗಳಲ್ಲಿ ಶಕ್ತಿ ಅಂತರವು ತುಂಬಾ ಕಡಿಮೆ ಇದ್ದು ($Eg > 3eV$) ಕೊಠಡಿ ಉಷ್ಣತೆಯಲ್ಲಿ ಎಲೆಕ್ಟ್ರಾನ್‌ಗಳು ವೇಲೆನ್ಸ್ ಪಟ್ಟಿಯಿಂದ ವಹನ ಪಟ್ಟಿಗೆ ದಾಟಲು ಬೇಕಾಗಿರುವ ತೃಪ್ತಿಕರವಾದ ಶಕ್ತಿಯನ್ನು ಪಡೆದುಕೊಂಡು ದಾಟಬಲ್ಲವು. ಹೀಗೆ ದಾಟುವಾಗ ಎಲೆಕ್ಟ್ರಾನ್‌ಗಳು ವೇಲೆನ್ಸ್ ಪಟ್ಟಿಯಲ್ಲಿ ರಂಧ್ರವನ್ನು ಉಂಟು ಮಾಡುತ್ತವೆ. ವಹನ ಪಟ್ಟಿಯಲ್ಲಿರುವ ಎಲೆಕ್ಟ್ರಾನ್‌ಗಳು ಮತ್ತು ವೇಲೆನ್ಸ್ ಪಟ್ಟಿಯಲ್ಲಿರುವ ರಂಧ್ರಗಳು ಈ ವಸ್ತುವಿನ ವಾಹಕತೆಗೆ ಕಾರಣೀಕರ್ತವಾಗಿವೆ.

(ಮುಂದುವರೆಯುವುದು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಆಲ್ಟರ್‌ನೇಟಿಂಗ್ ಕರೆಂಟ್: ಎಸಿ ವೋಲ್ಟೇಜ್ ಅಪ್ಲೈಡ್ ಟು ಸೀರೀಸ್ ಎಲ್‌ಸಿಆರ್ ಸರ್ಕ್ಯೂಟ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ https://bit.ly/3dXgHdb

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಮ್ಮನ್ನು ಒಪ್ಪುವವರಿಂದ ನಮಗೆ ಸಮಾಧಾನ ಸಿಗಬಹುದು. ಆದರೆ, ನಮ್ಮ ಬೆಳವಣಿಗೆ ಆಗುವುದು ನಮ್ಮನ್ನು ಒಪ್ಪದವರಿಂದ ಮಾತ್ರ!

–ಬಿಲ್ ಗೇಟ್ಸ್

ಅಡುಗೆ ಅನಿಲ ದರ ಏರಿಕೆ ಜನರಿಗೆ ಗಾಯದ ಮೇಲೆ ಬರೆ

ಕೋವಿಡ್ ಪಿಡುಗು ದೇಶವನ್ನು ಆವರಿಸುವ ಮುನ್ನವೇ ಇದ್ದ ಆರ್ಥಿಕ ಹಿನ್ನಡೆ, ಕೋವಿಡ್ ಹರಡುವಿಕೆ ತಡೆಯಲು ಸರ್ಕಾರ ಘೋಷಿಸಿದ ಲಾಕ್‌ಡೌನ್ ಮತ್ತು ಅದರಿಂದಾದ ಜೀವನೋಪಾಯ ನಷ್ಟದಿಂದಾಗಿ ಸಾಮಾನ್ಯ ಜನರ ಬದುಕು ದುಸ್ತರವಾಗಿದೆ. ಈ ಸಂಕಷ್ಟದ ಸ್ಥಿತಿಯಿಂದ ಬದುಕನ್ನು ಮತ್ತೆ ಹಳಿಗೆ ತರಬೇಕು ಎನ್ನುವಷ್ಟರಲ್ಲಿ ಬೆಲೆ ಏರಿಕೆಯ ಹೊಡೆತಕ್ಕೆ ಜನರು ತತ್ತರಿಸುವಂತಾಗಿದೆ. ಇತ್ತೀಚಿನ ದಿನಗಳಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ನಿತ್ಯದ ರೂಢಿ ಎಂಬಂತಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ದರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿಯೇ ಮುಂದುವರಿಯುತ್ತಿದೆ. ಇದು, ಇತರ ಎಲ್ಲ ಅಗತ್ಯ ವಸ್ತುಗಳ ಬೆಲೆ ಏರುವಂತೆ ಮಾಡಿದೆ. ಅಡುಗೆ ಅನಿಲದ ದರವು ನಿರಂತರವಾಗಿ ಏರಿಕೆಯಾಗಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಗೃಹ ಬಳಕೆಯ 14.2 ಕೆ.ಜಿ. ತೂಕದ ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ದರವು ಫೆಬ್ರುವರಿ ಆರಂಭದಿಂದ ಈವರೆಗೆ ₹125 ಏರಿಕೆಯಾದುದರ ಹಿಂದಿನ ಕಾರಣವೇನು ಎಂಬುದೇ ಜನರಿಗೆ ಅರ್ಥವಾಗದ ಸ್ಥಿತಿ ಇದೆ. ಮಾಲಿನ್ಯವನ್ನು ತಗ್ಗಿಸಲು ಮತ್ತು ಗ್ರಾಮೀಣ ಪ್ರದೇಶದ ಜನರ ಆರೋಗ್ಯ ರಕ್ಷಣೆಯ ಉದ್ದೇಶದಿಂದಲೇ ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಗ್ರಾಮೀಣ ಪ್ರದೇಶದ ಬಡಜನರಿಗೆ ಅಡುಗೆ ಅನಿಲ ಸಂಪರ್ಕವನ್ನು ಉಚಿತವಾಗಿ ನೀಡುವ ಮೂಲಕ ಉರುವಲು ಬಳಕೆಯನ್ನು ತಗ್ಗಿಸುವುದು ಸರ್ಕಾರದ ಉದ್ದೇಶವಾಗಿತ್ತು. ಆದರೆ, ಈಗ ಉಜ್ವಲಾ ಯೋಜನೆಯ ಅನಿಲ ಸಿಲಿಂಡರ್ ಬೆಲೆಯನ್ನೂ ಏರಿಸಲಾಗಿದೆ. ಉಜ್ವಲಾ ಯೋಜನೆಯಡಿಯಲ್ಲಿ ಸಿಕ್ಕ ಮೊದಲ ಸಿಲಿಂಡರ್‌ನ ಅನಿಲ ಮುಗಿದ ಬಳಿಕ ಹಲವು ಕುಟುಂಬಗಳು ಹೊಸ ಸಿಲಿಂಡರ್ ಪಡೆದುಕೊಳ್ಳುತ್ತಿಲ್ಲ ಎಂದು ಹಲವು ವರದಿಗಳು ಹೇಳಿವೆ. ಇಂತಹ ಸಂದರ್ಭದಲ್ಲಿ ಅಡುಗೆ ಅನಿಲದ ಬಳಕೆಯನ್ನು ಉತ್ತೇಜಿಸಲು ಸರ್ಕಾರವು ಕ್ರಮ ಕೈಗೊಳ್ಳಬೇಕಿತ್ತು. ಆದರೆ, ನಿರಂತರ ದರ ಏರಿಕೆ ಮೂಲಕ ಜನರು ಎಲ್‌ಪಿಜಿ ಬಳಕೆಯಿಂದ ದೂರ ಸರಿಯುವಂತೆ ಸರ್ಕಾರವೇ ಮಾಡುತ್ತಿದೆ.



ಈಗಿನ ಸಂಕಷ್ಟದ ಸನ್ನಿವೇಶದಲ್ಲಿ, ಸಾಮಾನ್ಯ ಜನರು ಬೆಲೆ ಏರಿಕೆಯಿಂದ ಹೈರಾಣಾಗುವುದನ್ನು ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವ ಹೊಣೆಗಾರಿಕೆಯಿಂದ ಸರ್ಕಾರ ಜಾರಿಕೊಳ್ಳಬಾರದು

ಪೆಟ್ರೋಲಿಯಂ ಉತ್ಪನ್ನಗಳಿಗೆ (ಎಲ್‌ಪಿಜಿ ಮತ್ತು ಸೀಮೆ ಎಣ್ಣೆ) ಕೇಂದ್ರ ಸರ್ಕಾರವು ನೀಡುತ್ತಿದ್ದ ಸಹಾಯಧನವನ್ನು ಬಹುತೇಕ ನಿಲ್ಲಿಸಲಾಗಿದೆ. ಕೋವಿಡ್ ತಡೆ ಲಾಕ್‌ಡೌನ್ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶದ ಜನರಿಗೆ ಎಲ್‌ಪಿಜಿ ಪೂರೈಸಲು ಹೆಚ್ಚು ಹಣ ಬೇಕು ಎಂಬ ಕಾರಣಕ್ಕೆ ನಗರ ಪ್ರದೇಶದ ಜನರಿಗೆ ಎಲ್‌ಪಿಜಿ ಸಬ್ಸಿಡಿಯನ್ನು ತಡೆ ಹಿಡಿಯಲಾಗಿತ್ತು. ಬ್ಯಾಂಕ್ ಖಾತೆಗೆ ಸಬ್ಸಿಡಿ ಮೊತ್ತ ಬರುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿವೆ. ಸಬ್ಸಿಡಿ ವಿಚಾರದಲ್ಲಿ ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ಒದಗಿಸುವುದು ಸರ್ಕಾರದ ಕೆಲಸ. ಒಂದೆರಡು ವರ್ಷಗಳಿಂದ ಪ್ರತೀ ತಿಂಗಳು ಎಲ್‌ಪಿಜಿ ದರವನ್ನು ಸ್ವಲ್ಪ ಸ್ವಲ್ಪವೇ ಹೆಚ್ಚಿಸಲಾಗಿದೆ. ಇದು, ಸಬ್ಸಿಡಿ ಹೊರೆ ಇಳಿಸಿಕೊಳ್ಳುವ ಜಾಣ್ಮೆಯ ನಡೆಯಾದರೂ, ಜನಪರವಾದ ಕ್ರಮ ಅಲ್ಲ ಎಂಬ ವಿಶ್ಲೇಷಣೆ ಇದೆ. ಜನರ ಸಂಕಷ್ಟದ ಸಮಯದಲ್ಲಿ ಆರ್ಥಿಕ ಲೆಕ್ಕಾಚಾರದ ಬದಲು ಮಾನವೀಯ ಅಂತಃಕರಣವನ್ನು ಸರ್ಕಾರ ತೋರಿಸಬೇಕು. ಆದರೆ, ಆ ಮನಸ್ಥಿತಿಯಲ್ಲಿ ಸರ್ಕಾರ ಇಲ್ಲ ಎಂಬುದನ್ನು ಈ ಬಾರಿಯ ಬಜೆಟ್ ಕೂಡ ತೋರಿಸುತ್ತದೆ. ಪೆಟ್ರೋಲಿಯಂ ಉತ್ಪನ್ನಗಳಿಗೆ ಸಹಾಯಧನ ನೀಡಲು ಬಜೆಟ್‌ನಲ್ಲಿ ₹14,073 ಕೋಟಿ ತೆಗೆದಿರಿಸಲಾಗಿದೆ. ಕಳೆದ ಬಾರಿ ಈ ಬಾಬ್ತಿನಲ್ಲಿ ವೆಚ್ಚವಾದ ಮೊತ್ತವು ₹39,054 ಕೋಟಿ. ಈ ಎರಡು ಅಂಕಿಗಳನ್ನು ಹೋಲಿಸಿ ನೋಡಿದರೆ ಸರ್ಕಾರದ ಧೋರಣೆಯ ಅರಿವಾಗುತ್ತದೆ. ತೈಲ ಉತ್ಪಾದಕ ರಾಷ್ಟ್ರಗಳು ಪೂರೈಕೆಗೆ ಮಿತಿ ಹೇರಿಕೊಂಡಿರುವುದು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಲು ಒಂದು ಕಾರಣ. ಡೀಸೆಲ್ ದರ ಏರಿಕೆಯು ಸಾಗಾಟ ವೆಚ್ಚವನ್ನು ಏರಿಸಿ, ಸಿಲಿಂಡರ್ ಬೆಲೆ ಇನ್ನಷ್ಟು ಹೆಚ್ಚಲು ಕಾರಣವಾಗುತ್ತದೆ. ಆದರೆ, ಎಲ್‌ಪಿಜಿ ಸೇರಿದಂತೆ ಅತ್ಯಂತ ಅಗತ್ಯವಾದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಇಂತಹ ಅಸಾಮಾನ್ಯ ಪರಿಸ್ಥಿತಿಯಲ್ಲಿ ನಿಯಂತ್ರಣದಲ್ಲಿ ಇರಿಸುವುದು ಸರ್ಕಾರಕ್ಕೆ ಅಸಾಧ್ಯವೇನೂ ಅಲ್ಲ. ಈಗಿನ ಸಂಕಷ್ಟದ ಸನ್ನಿವೇಶದಲ್ಲಿ, ಸಾಮಾನ್ಯ ಜನರು ಬೆಲೆ ಏರಿಕೆಯಿಂದ ಹೈರಾಣಾಗುವುದನ್ನು ತಪ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವ ಹೊಣೆಗಾರಿಕೆಯಿಂದ ಸರ್ಕಾರ ಜಾರಿಕೊಳ್ಳಬಾರದು.

ದಿನದ ಟ್ವೀಟ್

ಸತ್ಯವನ್ನು ಹತ್ತಿಕ್ಕುತ್ತಿವೆ



ಮಹಾರಾಷ್ಟ್ರ ಮತ್ತು ಕೇರಳ ಕೋವಿಡ್– 19 ಪರೀಕ್ಷೆ ನಡೆಸುತ್ತಿವೆ ಹಾಗೂ ಪ್ರಕರಣಗಳ ಸಂಖ್ಯೆಯ ವಿಚಾರದಲ್ಲಿ ಇತರ ಕೆಲವು ರಾಜ್ಯಗಳಂತಲ್ಲದೆ ಪಾರದರ್ಶಕತೆ ಕಾಯ್ದುಕೊಳ್ಳುತ್ತಿವೆ. ಕೆಲವು ರಾಜ್ಯಗಳು ಈ ವಿಷಯದಲ್ಲಿ ಸತ್ಯವನ್ನು ಹತ್ತಿಕ್ಕುತ್ತಿವೆ. ಕೋವಿಡ್‌ಗೆ ಸಂಬಂಧಿಸಿದ ವಾಸ್ತವವನ್ನು ಕೆಲವರು ಒಪ್ಪಿಕೊಳ್ಳುತ್ತಿಲ್ಲವೆಂಬಂತೆ ತೋರುತ್ತಿದೆ.

ಪೂಜಾ ಭಟ್, ನಟಿ, ನಿರ್ದೇಶಕಿ

---

25 ವರ್ಷಗಳ ಹಿಂದೆ

ಭಾನುವಾರ, 3-3-1996

● **ಕನ್ನಡ ಚಿತ್ರೋದ್ಯಮದ ಬಿಕ್ಕಟ್ಟು ಇತ್ಯರ್ಥ**

ಬೆಂಗಳೂರು, ಮಾರ್ಚ್ 2– ಕನ್ನಡ ಚಿತ್ರರಂಗದಲ್ಲಿ ಕಳೆದ ಕೆಲವು ದಿನಗಳಿಂದ ಉಂಟಾಗಿದ್ದ ಬಿಕ್ಕಟ್ಟು, ಚಿತ್ರರಂಗದ ಎಲ್ಲ ಕ್ಷೇತ್ರಗಳ ಪ್ರಮುಖರ ಸರ್ವಸಮ್ಮತ ತೀರ್ಮಾನದಿಂದಾಗಿ ಅಂತ್ಯಗೊಂಡಿದೆ.

ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಎಂ.ಸಿ.ನಾಣಯ್ಯ ಅವರ ಸಮ್ಮುಖದಲ್ಲಿ ನಡೆದ ಚಿತ್ರರಂಗದ ಪ್ರತಿನಿಧಿಗಳ ದೀರ್ಘ ಚರ್ಚೆಯ ಫಲಶ್ರುತಿ ಇದು. ಈ ಹೊಸ ಒಡಂಬಡಿಕೆಯ ಪ್ರಕಾರ, ಈ ವರ್ಷದ ಆಗಸ್ಟ್ 31ರವರೆಗೆ ಏಕಕಾಲಕ್ಕೆ ಪರಭಾಷಾ ಚಿತ್ರಗಳನ್ನು ಬಿಡುಗಡೆ ಮಾಡಬಹುದು. ಆದರೆ ಈ ಅವಧಿಯಲ್ಲಿ ಕನ್ನಡ ಚಿತ್ರಗಳಿಗೆ ಮೊದಲ ಆದ್ಯತೆ ನೀಡಬೇಕು.

ಚಿತ್ರಮಂದಿರಗಳ ಬಾಡಿಗೆ ದರಕ್ಕೆ ಸಂಬಂಧಿಸಿದಂತೆ ಸ್ಲ್ಯಾಬ್ ಪೂರ್ವ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಚಿತ್ರಮಂದಿರಗಳ ಪ್ರವೇಶ ದರವನ್ನು ಗರಿಷ್ಠ ರೂ. 20ಕ್ಕಿಂತ ಹೆಚ್ಚು ಮಾಡದಿರಲು ತೀರ್ಮಾನಿಸಲಾಗಿದೆ. ವಿತರಕರು ಚಿತ್ರ ಪ್ರದರ್ಶನದಿಂದ ಸಂಗ್ರಹವಾದ ಹಣವನ್ನು ನಿರ್ಮಾಪಕರಿಗೆ 15 ದಿನದೊಳಗೆ ಪಾವತಿ ಮಾಡಲು ಒಪ್ಪಿಕೊಂಡಿದ್ದಾರೆ.

● **ನ್ಯಾಯದಾನ ವ್ಯವಸ್ಥೆ ಸರಳೀಕರಣಕ್ಕೆ ಕ್ರಮ**

ಬೆಳಗಾವಿ, ಮಾರ್ಚ್ 2– ವಿಳಂಬ ಮತ್ತು ವಿಪರೀತ ವೆಚ್ಚದಿಂದ ಕೂಡಿರುವ ಹಾಲಿ ನ್ಯಾಯದಾನ ವ್ಯವಸ್ಥೆಯಿಂದ ಸಾಮಾನ್ಯ ಜನರು ನ್ಯಾಯಾಂಗ ವ್ಯವಸ್ಥೆಯ ಬಗೆಗೇ ಭ್ರಮನಿರಸನ ಹೊಂದುವಂತೆ ಆಗಿದ್ದು ಶೀಘ್ರವಾಗಿ ಮತ್ತು ಸುಲಭವಾಗಿ ನ್ಯಾಯ ಒದಗಿಸುವ ಪರ್ಯಾಯ ನ್ಯಾಯ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವನ್ನು ಪ್ರಧಾನಿ ಪಿ.ವಿ.ನರಸಿಂಹ ರಾವ್ ಒತ್ತಿ ಹೇಳಿದರು.

ಇಲ್ಲಿಗೆ ಸಮೀಪದ ಚಿಕ್ಕೋಡಿ ಪಟ್ಟಣದಲ್ಲಿ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮತ್ತು ವಕೀಲರ ಸಂಘದ 150ನೇ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪ್ರಧಾನಿಯವರು, ಹಾಲಿ ನ್ಯಾಯದಾನ ವ್ಯವಸ್ಥೆಯಿಂದ ದುರ್ಬಲ ವರ್ಗಗಳು ತೀರಾ ಗಾಸಿಗೊಂಡಿವೆ ಎಂದು ವಿಷಾದಿಸಿದರು.

---

50 ವರ್ಷಗಳ ಹಿಂದೆ

ಬುಧವಾರ, 3-3-1971

● **ಅಪೀಲು ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ**

ನವದೆಹಲಿ, ಮಾರ್ಚ್ 2– ಆಡಳಿತ ಕಾಂಗ್ರೆಸ್ ಪಕ್ಷ ಚುನಾವಣೆ ಉದ್ದೇಶಗಳಿಗಾಗಿ ಸರ್ಕಾರಿ ಯಂತ್ರ ಬಳಸುವುದನ್ನು ತಡೆಗಟ್ಟುವಂತೆ ಕೋರಿ ಐದು ವಿರೋಧ ಪಕ್ಷಗಳು ಇಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದವು.

ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಆರು ಜನರ ವಿರುದ್ಧ ಈ ಸಂಬಂಧ ಸಲ್ಲಿಸಿದ್ದ ಅರ್ಜಿಯೊಂದನ್ನು ದೆಹಲಿ ಹೈಕೋರ್ಟ್ ಕಳೆದ ಮಂಗಳವಾರ ವಜಾ ಮಾಡಿತ್ತು. ದೆಹಲಿ ಹೈಕೋರ್ಟಿನ ಈ ತೀರ್ಪಿನ ವಿರುದ್ಧ ಐದು ವಿರೋಧ ಪಕ್ಷಗಳು ಈಗ ಸುಪ್ರೀಂ ಕೋರ್ಟಿಗೆ ಅಪೀಲು ಅರ್ಜಿ ಸಲ್ಲಿಸಿವೆ. ಈ ಅರ್ಜಿಯನ್ನು ತಕ್ಷಣವೇ ವಿಚಾರಣೆಗೆತ್ತಿಕೊಳ್ಳಬೇಕೆಂದು ಅರ್ಜಿದಾರರ ಪರ ವಕೀಲರು ಮಾಡಿಕೊಂಡ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿತು.

● **ಬಿರುಸಿನ ಭಿತ್ತಿಪತ್ರ ಸಮರ**

ಬೆಂಗಳೂರು, ಮಾರ್ಚ್ 2– ಲೋಕಸಭಾ ಚುನಾವಣೆಗಾಗಿ ಮಾರ್ಚ್ 7ರಂದು ಮತಗಟ್ಟೆಗೆ ಹೋಗುವ ಬೆಂಗಳೂರಿನಲ್ಲಿ ಭಿತ್ತಿಪತ್ರಗಳ ಸಮರ ಇನ್ನೂ ಬಿರುಸಾಗಿಯೇ ನಡೆದಿದೆ.

ಜನಸಂಘದ ವ್ಯಂಗ್ಯಚಿತ್ರಗಳಿಗೆದುರಾಗಿ, ಆಡಳಿತ ಕಾಂಗ್ರೆಸ್ಸು ಬೃಹತ್ ಚಿತ್ರಗಳನ್ನು ನಿಲ್ಲಿಸತೊಡಗಿದೆ. ಶ್ರೀ ಹನುಮಂತಯ್ಯನವರ ಪರವಾಗಿ ಪ್ರಚಾರಕ್ಕಿಳಿದಿರುವ ಡಿ.ಎಂ.ಕೆ ನೂರಾರು ಭಿತ್ತಿಪತ್ರಗಳನ್ನು ಗೋಡೆಗಳಿಗೇರಿಸುತ್ತಿದೆ.

ಇಲ್ಲಿ ಚೀನಾಕ್ಕೆ ಪ್ರಜಾಸರ್ಕಾರದ ಬಯಕೆ, ಭಾರತಕ್ಕೆ ಮಿಲಿಟರಿ ಜೊತೆ ನಂಟು!

ಮ್ಯಾನ್ಮಾರ್: ನಮ್ಮದು ದ್ವಂದ್ವ ನಿಲುವೇ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಮ್ಯಾನ್ಮಾರ್‌ನಲ್ಲಿ ಒಂದು ತಿಂಗಳಿನಿಂದ ನಡೆಯುತ್ತಿರುವ ಪ್ರತಿಭಟನೆ ಇದೀಗ ತೀವ್ರಗೊಂಡಿದೆ. 2020ರ ಸಾರ್ವತ್ರಿಕ ಚುನಾವಣೆಯಲ್ಲಿ ಆಂಗ್ ಸಾನ್ ಸೂ ಕಿ ನೇತೃತ್ವದ ನ್ಯಾಷನಲ್ ಲೀಗ್ ಆಫ್ ಡೆಮಾಕ್ರಸಿ ಪಕ್ಷ ಬಹುಮತ ಪಡೆದುಕೊಂಡಿತ್ತು. ಆದರೆ ಈ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿರುವ ಮ್ಯಾನ್ಮಾರ್ ಸೇನೆಯು ಫೆಬ್ರುವರಿ 1ರಂದು ಸೂ ಕಿ ಮತ್ತು ಇತರ ನಾಯಕರನ್ನು ಗೃಹಬಂಧನದಲ್ಲಿ ಇರಿಸಿ, ತುರ್ತುಪರಿಸ್ಥಿತಿ ಘೋಷಿಸಿ, ಆಡಳಿತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು.

ಒಂದು ಕಾಲದಲ್ಲಿ ಬರ್ಮಾ ಎಂದು ಕರೆಸಿಕೊಳ್ಳುತ್ತಿದ್ದ, ನಂತರ ಮ್ಯಾನ್ಮಾರ್ ಆಗಿ ಬದಲಾದ ಆಗ್ನೇಯ ಏಷ್ಯಾದ ಈ ಆಯಕಟ್ಟಿನ ದೇಶವು ನೈಸರ್ಗಿಕ ಸಂಪನ್ಮೂಲ ಮತ್ತು ವಾಣಿಜ್ಯಿಕ ವ್ಯವಹಾರದ ದೃಷ್ಟಿಯಿಂದ ಪ್ರಾಂತೀಯ ಹಾಗೂ ಜಾಗತಿಕ ಮಹತ್ವವನ್ನು ಪಡೆದಿದೆ. ಅದೇ ಕಾರಣದಿಂದ, ಇತ್ತೀಚಿನ ಮ್ಯಾನ್ಮಾರ್ ಬೆಳವಣಿಗೆಯ ಕುರಿತು ಹಲವು ರಾಷ್ಟ್ರಗಳು ಕಳವಳ ವ್ಯಕ್ತಪಡಿಸಿವೆ.

ಹಾಗೆ ನೋಡಿದರೆ, ಮ್ಯಾನ್ಮಾರ್ ಸೇನೆ ತನ್ನ ರಾಜಕೀಯ ಮಹತ್ವಾಕಾಂಕ್ಷೆಯನ್ನು ಹಲವು ಸಂದರ್ಭಗಳಲ್ಲಿ ಪ್ರಕಟಿಸಿದೆ. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಆಡಳಿತಾತ್ಮಕವಾಗಿ ಬರ್ಮಾವನ್ನು ವಸಾಹತುಶಾಹಿ ಭಾರತದ ಪ್ರಾಂತ್ಯವಾಗಿ ಬ್ರಿಟಿಷರು ಪರಿಗಣಿಸಿದ್ದರು. ಈ ವ್ಯವಸ್ಥೆ 1937ರವರೆಗೆ ಮುಂದುವರಿದಿತ್ತು. ನಂತರ ಬ್ರಿಟಿಷ್ ಭಾರತದಿಂದ ಅದನ್ನು ಪ್ರತ್ಯೇಕ ವಸಾಹತು ಎಂದು ಗುರುತಿಸಲಾಯಿತು. 1948ರಲ್ಲಿ ಬರ್ಮಾ ಸ್ವತಂತ್ರಗೊಂಡಿತು. 1962ರಲ್ಲಿ ಮ್ಯಾನ್ಮಾರ್ ಸೇನೆ ಆಡಳಿತದ ಚುಕ್ಕಾಣಿ ಹಿಡಿಯಿತು. 1974ರಲ್ಲಿ ದೇಶದ ಹೆಸರಿಗೆ ತಿದ್ದುಪಡಿ ತಂದು 'ಸೋಷಿಯಲಿಸ್ಟ್ ರಿಪಬ್ಲಿಕ್ ಆಫ್ ದಿ ಯೂನಿಯನ್ ಆಫ್ ಬರ್ಮಾ' ಎಂದು ಕರೆಯಿತು. 1988ರಲ್ಲಿ ಮ್ಯಾನ್ಮಾರ್ ಮತ್ತೊಮ್ಮೆ ಸೇನೆಯ ಆಡಳಿತಕ್ಕೆ ಒಳಪಟ್ಟಿತು. ಆಗ ದೇಶದ ಹೆಸರನ್ನು 'ಯೂನಿಯನ್ ಆಫ್ ಬರ್ಮಾ' ಎಂದು ಬದಲಿಸಿತು. ಒಂದು ವರ್ಷದ ಬಳಿಕ ದೇಶದ ಹೆಸರನ್ನು 'ಯೂನಿಯನ್ ಆಫ್ ಮ್ಯಾನ್ಮಾರ್' ಎಂದು ಕರೆಯಿತು. ಹೀಗೆ ಹೆಸರು ಬದಲಿಸುವಾಗ 'ವಸಾಹತುವಾಗಿ ಪಡೆದ ಹೆಸರನ್ನು ತ್ಯಜಿಸಿ, ಕೇವಲ ಒಂದು ಜನಾಂಗವನ್ನು ಪ್ರತಿನಿಧಿಸುವ ಹೆಸರನ್ನು ಬಿಟ್ಟು, 135 ವಿವಿಧ ಜನಾಂಗಗಳನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಒಂದು ಹೆಸರನ್ನು ರಾಷ್ಟ್ರಕ್ಕೆ ಇಡಲಾಗಿದೆ' ಎಂಬ ಕಾರಣ ನೀಡಿತು.

90ರ ದಶಕದಲ್ಲಿ ಪ್ರಜಾಪ್ರಭುತ್ವದ ಪರ ಚಳವಳಿ ಅಲ್ಲಿ ತೀವ್ರಗೊಂಡಿತು. ಸೂ ಕಿ ನೊಬೆಲ್ ಪ್ರಶಸ್ತಿ ಪಡೆದರು. 15 ವರ್ಷಗಳ ಕಾಲ ಗೃಹಬಂಧನದಲ್ಲಿ ಇದ್ದರು. ಕೊನೆಗೂ 2010ರಲ್ಲಿ ಮಿಲಿಟರಿ ಆಡಳಿತ ತನ್ನ ಪ್ರಭಾವವನ್ನು ಹಾಗೆಯೇ ಉಳಿಸಿಕೊಂಡು, ಆಡಳಿತವನ್ನು ಪ್ರಜಾತಂತ್ರ ಸರ್ಕಾರಕ್ಕೆ ಬಿಟ್ಟುಕೊಡಲು ಮುಂದಾಯಿತು. ರಾಜಕೀಯ ವಿರೋಧಿಗಳನ್ನು ಬಿಡುಗಡೆಗೊಳಿಸಿತು. ಹತ್ತು ವರ್ಷಗಳ ಕಾಲ ಪ್ರಜಾಸರ್ಕಾರ ಕಾರ್ಯನಿರ್ವಹಿಸಿತು. ಹಾಗಾಗಿ ಇತ್ತೀಚಿನ ಸೇನಾ ದಂಗೆ ಮ್ಯಾನ್ಮಾರ್‌ಗೆ ಹೊಸದೇನಲ್ಲ.

ಇಲ್ಲಿ ಮುಖ್ಯವಾಗಿ ಇರುವ ಪ್ರಶ್ನೆ ಎಂದರೆ, ಮ್ಯಾನ್ಮಾರ್ ಸೇನಾ ದಂಗೆ ಭಾರತದ ಮೇಲೆ ಪರಿಣಾಮ ಬೀರುತ್ತದೆಯೇ ಎನ್ನುವುದು. ಈ ಪ್ರಶ್ನೆಯನ್ನು ಅವಲೋಕಿಸುವಾಗ ಚೀನಾವನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕು. ಮ್ಯಾನ್ಮಾರ್ ಜೊತೆಗೆ ಭಾರತ ಗಡಿಯನ್ನು ಹಂಚಿಕೊಂಡಿದೆ. ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಉಭಯ ದೇಶಗಳು ಬೆಸೆದುಕೊಂಡಿವೆ. ವ್ಯಾಪಾರ, ಹೂಡಿಕೆ, ಇಂಧನ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಸಹಭಾಗಿತ್ವವನ್ನು ಹೊಂದಿವೆ. 1962ರಲ್ಲಿ ಮೊದಲ ಬಾರಿಗೆ ಸೇನಾ ದಂಗೆ ನಡೆದಾಗ ಭಾರತ ಕಳವಳಗೊಂಡಿತ್ತು. ಆದರೆ ಗಡಿಯಾಚೆಗಿನ ಸಂಘರ್ಷ, ಚೀನಾದ ಪ್ರಭಾವ, ವಾಣಿಜ್ಯ ಸಂಬಂಧ ಮತ್ತು ತನ್ನ ವಲಸಿಗರ ಸುರಕ್ಷತೆ ಸೇರಿದಂತೆ ಭಾರತ ತನ್ನ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮ್ಯಾನ್ಮಾರ್ ಮಿಲಿಟರಿ ಆಡಳಿತದೊಂದಿಗೆ ಸೌಹಾರ್ದಯುತ ಸಂಬಂಧ ಕಾಯ್ದುಕೊಂಡಿತು. ತಮ್ಮ ಸ್ನೇಹಿತ ಯೂನು ಅವರ ಬಂಧನ ಮತ್ತು ಪ್ರಜಾಪ್ರಭುತ್ವದ ಅಂತ್ಯದ ಕುರಿತು ಪ್ರಧಾನಿ ಜವಾಹರಲಾಲ್ ನೆಹರೂ ವೈಯಕ್ತಿಕವಾಗಿ ಬೇಸರಗೊಂಡಿದ್ದರೂ ಚೀನಾಕ್ಕಿಂತ ಮುಂಚೆ ಬರ್ಮಾದ ಮಿಲಿಟರಿ ಆಡಳಿತವನ್ನು ಅನುಮೋದಿಸುವ ಕೆಲಸಕ್ಕೆ ಮುಂದಾದರು. ಭಾರತ ಈ ವಿಷಯದಲ್ಲಿ ಜಾಣ್ಮೆ ಪ್ರದರ್ಶಿಸಿತ್ತು.


1990ರ ದಶಕದ ಉತ್ತರಾರ್ಧದಲ್ಲಿ ಪ್ರಜಾಪ್ರಭುತ್ವದ ಸುಧಾರಣೆಗಳಿಗೆ ತೆರೆದುಕೊಳ್ಳುವಂತೆ ಸೇನಾ ನಾಯಕರ ಮೇಲೆ ಒತ್ತಡ ಹೇರುವ ಕೆಲಸವನ್ನು ಭಾರತವು ದ್ವಿಪಕ್ಷೀಯ ಸಂಬಂಧಕ್ಕೆ ಚ್ಯುತಿ ಬಾರದ ರೀತಿಯಲ್ಲಿ ಮಾಡಿತು. ಮ್ಯಾನ್ಮಾರ್ ಮೇಲೆ ಹೇರಲಾಗಿದ್ದ ದಿಗ್ಬಂಧನ ಮತ್ತು ಮಿಲಿಟರಿ ದಂಗೆಯ ಕುರಿತಾದ ಖಂಡನಾ ನಿರ್ಣಯವನ್ನು ಬೆಂಬಲಿಸದ ಕಾರಣ ವಿಶ್ವಸಂಸ್ಥೆಯಲ್ಲಿ ಭಾರತ ಟೀಕೆಗೆ ಒಳಗಾಯಿತು. 2010ರಲ್ಲಿ ಭಾರತೀಯ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ್ದ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮ, ಮ್ಯಾನ್ಮಾರ್ ವಿಷಯದಲ್ಲಿ ಭಾರತ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ ಎಂದಿದ್ದರು. ಎಲ್ಲ ಟೀಕೆಗಳ ಹೊರತಾಗಿಯೂ ಭಾರತ ಅನುಸರಿಸಿದ ಎಚ್ಚರಿಕೆಯ ನಡೆಯಿಂದಾಗಿ, ಮ್ಯಾನ್ಮಾರಿನಲ್ಲಿ ಮಿಲಿಟರಿ ಆಡಳಿತವಿರಲಿ ಪ್ರಜಾ ಸರ್ಕಾರವಿರಲಿ ಭಾರತ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಳ್ಳುವುದು ಸಾಧ್ಯವಾಯಿತು. 'ಆ್ಯಕ್ಟ್ ಈಸ್ಟ್' ಮತ್ತು 'ನೆರೆಯ ರಾಷ್ಟ್ರಗಳಿಗೆ ಆದ್ಯತೆ' ನೀತಿಯ ಅಡಿಯಲ್ಲಿ ಭಾರತವು ಮ್ಯಾನ್ಮಾರ್‌ನೊಂದಿಗೆ ರಾಜಕೀಯ, ಮಿಲಿಟರಿ, ಭದ್ರತೆ, ಆರ್ಥಿಕ ಮತ್ತು ರಾಜತಾಂತ್ರಿಕ ಸಂಬಂಧವನ್ನು ಗಟ್ಟಿಗೊಳಿಸಿಕೊಂಡಿತು. 1990ರ ದಶಕದ ಉತ್ತರಾರ್ಧದಿಂದ ಮ್ಯಾನ್ಮಾರ್ ಸೇನೆಗೆ ಭಾರತವು ಶಸ್ತ್ರಾಸ್ತ್ರ ಮಾರಾಟ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸಿ, ಮ್ಯಾನ್ಮಾರ್ ಕಾಡುಗಳಲ್ಲಿದ್ದ ಬಂಡುಕೋರರನ್ನು ಸೆರೆಹಿಡಿಯುವ ಕೆಲಸವನ್ನು ಉಭಯ ದೇಶಗಳು ಮಾಡಿವೆ.

ಅತ್ತ ಬರ್ಮಾ ಮತ್ತು ಚೀನಾ ನಡುವೆ ರಾಜತಾಂತ್ರಿಕ ಸಂಬಂಧ 1950ರಲ್ಲಿ ಏರ್ಪಟ್ಟಿತಾದರೂ 1960ರ ದಶಕದಲ್ಲಿ ಅದು ಏರಿಳಿತ ಕಂಡಿತು. ಬರ್ಮಾದ ಮಿಲಿಟರಿ ಸರ್ಕಾರವನ್ನು ಭಾರತ ಅನುಮೋದಿಸಿದ ಬೆನ್ನಲ್ಲೇ ಚೀನಾ ಕೂಡ ಮಿಲಿಟರಿ ಆಡಳಿತಕ್ಕೆ ಮಾನ್ಯತೆ ನೀಡಿತ್ತು. ಆದರೆ ಆಡಳಿತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಬರ್ಮಾ ಕಮ್ಯುನಿಸ್ಟ್ ಪಕ್ಷಕ್ಕೆ ಚೀನಾ ಹಣಕಾಸು ನೆರವನ್ನು ನೀಡುತ್ತಿತ್ತು. ಇದರಿಂದಾಗಿ ಬರ್ಮಾ ಆಡಳಿತವು ಚೀನಾವನ್ನು ದೂರವೇ ಇಟ್ಟಿತು. ವಲಸಿಗ ಚೀನೀಯರು ಸ್ಥಳೀಯವಾಗಿ ಪಾರಮ್ಯ ಮೆರೆಯುತ್ತಿದ್ದಾರೆ ಮತ್ತು ಅದಕ್ಕೆ ಚೀನಾ ಬೆಂಬಲವಿದೆ ಎಂಬುದು ಕಾರಣವಾಗಿ, 1967ರಲ್ಲಿ ವ್ಯಾಪಕವಾದ ಚೀನಾ ವಿರೋಧಿ ಗಲಭೆಗಳು ಬರ್ಮಾದಲ್ಲಿ ನಡೆದವು. ಹೀಗಾಗಿ ಬರ್ಮಾದ ಸೇನಾ ಆಡಳಿತ ಚೀನಾದ ಬಗ್ಗೆ ಆಸಕ್ತಿ ಕಳೆದುಕೊಂಡಿತು ಮತ್ತು ಭಾರತಕ್ಕೆ ಹೆಚ್ಚು ಹತ್ತಿರವಾಯಿತು. ಆದರೆ ಪ್ರಜಾ ಪ್ರಭುತ್ವವಾದಿ ಸೂ ಕಿ ಆಡಳಿತದಲ್ಲಿ ಚೀನಾ- ಮ್ಯಾನ್ಮಾರ್ ಸಂಬಂಧ ಗಟ್ಟಿಗೊಂಡಿತು. ಮ್ಯಾನ್ಮಾರ್ ಸೇನೆ ನಡೆಸಿದ ರೋಹಿಂಗ್ಯಾ ಸಮುದಾಯದ ಮೇಲಿನ ದಾಳಿ ಮತ್ತು ಜನಾಂಗೀಯ ಹತ್ಯೆಯನ್ನು ಸೂ ಕಿ ಖಂಡಿಸಲಿಲ್ಲ ಎಂದು ಜಾಗತಿಕ ಸಮುದಾಯ ಆರೋಪಿಸಿದ ನಂತರ 'ಬೆಲ್ಟ್ ಆ್ಯಂಡ್ ರೋಡ್ ಯೋಜನೆ'ಯ ಚೀನಾ ಪ್ರಸ್ತಾಪಕ್ಕೆ ಸೂ ಕಿ ಒಪ್ಪಿಗೆ ಸೂಚಿಸಿದರು. ಸೇನಾ ಆಡಳಿತ ಬದಿಗೆ ಇಟ್ಟಿದ್ದ ಚೀನಾದ ರೈಲ್ವೆ ಯೋಜನೆಗೂ ಅಂಕಿತ ಹಾಕಿದರು. ನಂತರ ಚೀನಾಕ್ಕೂ ಹಲವು ಬಾರಿ ಭೇಟಿಯಿತ್ತರು. ಹಾಗಾಗಿ ಕಮ್ಯುನಿಸ್ಟ್ ಚೀನಾ ಮ್ಯಾನ್ಮಾರಿನಲ್ಲಿ ಪ್ರಜಾ ಸರ್ಕಾರವನ್ನು ಬಯಸುತ್ತದೆ!

ಒಟ್ಟಿನಲ್ಲಿ, ಪ್ರಜಾಪ್ರಭುತ್ವವನ್ನು ಆದರ್ಶವಾಗಿಸಿಕೊಂಡಿರುವ ಭಾರತ, ರಾಜಕೀಯ ಸ್ಥಿರತೆ, ಆಂತರಿಕ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಮ್ಯಾನ್ಮಾರ್ ಪ್ರಜಾಪ್ರಭುತ್ವದ ಹಾದಿಯಲ್ಲಿ ಸಾಗಬೇಕು ಎಂದು ಪ್ರತಿಪಾದಿಸುತ್ತದೆಯಾದರೂ, ಅಲ್ಲಿನ ಸೇನೆಯೊಂದಿಗೂ ಉತ್ತಮ ಸಂಬಂಧ ಹೊಂದಿದೆ. ಹಾಗಾಗಿ ಮ್ಯಾನ್ಮಾರ್ ಸೇನಾ ದಂಗೆಯಿಂದಾಗಿ ದ್ವಿಪಕ್ಷೀಯ ಸಂಬಂಧದಲ್ಲಿ ಹೆಚ್ಚು ವ್ಯತ್ಯಾಸವಾಗಲಾರದು. ಮ್ಯಾನ್ಮಾರ್ ಕುರಿತ ಭಾರತದ ನಿಲುವನ್ನು ಆದರ್ಶ ಮತ್ತು ಹಿತಾಸಕ್ತಿಯ ನಡುವೆ ಸಮತೋಲನ ಸಾಧಿಸುವ ಪ್ರಾಯೋಗಿಕ ಧೋರಣೆ ಎನ್ನಬಹುದು. ಅದನ್ನು ಜಗತ್ತು ದ್ವಂದ್ವ ನಿಲುವು ಎಂದರೆ ನಾವು ತಲೆಕೆಡಿಸಿಕೊಳ್ಳಬೇಕಿಲ್ಲ.



ಚುರುಮುರಿ



ಜಾತಿ ಫಜೀತಿ

● ಮಣ್ಣೆರಾಜು

'**ಮಗು** ಹುಟ್ಟಿದ ತಕ್ಷಣ ಜಾತೀಕರಣ, ಆನಂತರ, ನಾಮಕರಣ. ಮಗು ದೊಡ್ಡದಾದ ಮೇಲೆ ಹೆಸರು ಬದಲಾವಣೆ ಮಾಡಿಕೊಳ್ಳಬಹುದು. ಆದರೆ, ಸುಲಭವಾಗಿ ಜಾತಿ ಚೇಂಜ್ ಮಾಡಿಕೊಳ್ಳೋದು ಕಷ್ಟ ಅಲ್ವೇನ್ರೀ?' ಅಂದಳು ಸುಮಿ.

'ಹೌದು, ಕುರಿ ಹಳ್ಳಕ್ಕೆ ಬಿದ್ದಂತೆ ನಾವು ಜಾತಿಯಲ್ಲಿ ಬೀಳ್ತೀವಿ. ಅಪ್ಪ ಅಮ್ಮನ ಕೇರಾಫ್ ಜಾತಿ ನಮ್ಮ ಜೊತೆ ಕಂಟಿನ್ಯೂ ಆಗುತ್ತೆ' ಅಂದ ಶಂಕ್ರಿ.

'ಸಾಲದ್ದಕ್ಕೆ, ಇವರು ಇಂಥಾ ಜಾತಿಯವರು ಅಂತ ಸಮಾಜ ಬ್ರ್ಯಾಂಡ್ ಮಾಡುತ್ತದೆ, ಸರ್ಕಾರ ಜಾತಿಯನ್ನು ದಾಖಲು ಮಾಡುತ್ತದೆ. ಶಿಕ್ಷಣ, ಉದ್ಯೋಗ, ಸೌಲಭ್ಯಗಳು ಜಾತಿ ಆಧಾರದಲ್ಲಿ ಹಂಚಿಕೆ ಆಗುತ್ತವೆ'.

'ಹೌದು, ಜಾತ್ಯತೀತ ಮನಃಸ್ಥಿತಿ ಇದ್ದರೂ ಜಾತಿ ಬಿಡದ ಪರಿಸ್ಥಿತಿಯಲ್ಲಿ ಸಿಕ್ಕಿಬಿಡುತ್ತೇವೆ'.

'ಶಾಂತಮ್ಮ ಬೇರೆ ಜಾತಿಯವನ ಜೊತೆ ಓಡಿಹೋಗಿ ಮದುವೆಯಾಗಿದ್ದಳು. ಎರಡೂ ಕಡೆಯವರು ಅವರನ್ನು ತಮ್ಮ ಜಾತಿಯಿಂದ ಹೊರಗೆ ಹಾಕಿದ್ದರು. ಈಗ ಶಾಂತಮ್ಮನ ಮಗಳಿಗೆ ಆ ಎರಡು ಜಾತಿಗಳಲ್ಲೂ ಗಂಡು ಸಿಗುತ್ತಿಲ್ಲವಂತೆ' ನೊಂದಳು ಸುಮಿ.

'ಅದೇನು ಜಾತಿ ಸಂಬಂಧವೋ... ರಕ್ತ ಸಂಬಂಧಿಗಳು ಅಂತ ಹೇಳಿಕೊಳ್ಳುವವರ ರಕ್ತದ ಗುಂಪುಗಳೇ ಒಂದಕ್ಕೊಂದು ಮ್ಯಾಚ್ ಆಗಲ್ಲ... ಹಹ್ಹಹ್ಹಾ...' ಶಂಕ್ರಿ ನಕ್ಕ.

'ಅಷ್ಟೇ ಅಲ್ಲಾರೀ, ರಕ್ತ ಹಂಚಿಕೊಂಡು ಹುಟ್ಟಿದ ಮಕ್ಕಳ ರಕ್ತದ ಗ್ರೂಪ್ ಕೂಡಾ ಅಪ್ಪಮ್ಮನ ರಕ್ತದ ಗುಂಪು ಸೇರುವುದಿಲ್ಲ, ಬೇರೆ ಬ್ಲಡ್ ಗ್ರೂಪ್ ಇರುತ್ತದೆ'.

'ಜೊತೆಗೆ, ನಮ್ಮನಮ್ಮವರಲ್ಲೇ ನಡೆಯುವ ಐಪಿಎಲ್ ಪಂದ್ಯದ ರೀತಿ ಒಂದೇ ಜಾತಿಯ ಬಿಪಿಎಲ್, ಎಪಿಎಲ್ ಅನ್ನೋ ಬಡವ-ಶ್ರೀಮಂತರ ನಡುವೆ ಪೈಪೋಟಿ ನಡೆದೇ ಇದೆ'.

'ಈ ವ್ಯತ್ಯಾಸ ನಿವಾರಣೆ ಮಾಡಿ ತಮ್ಮ ಜಾತಿಯ ಸರ್ವರಿಗೂ ಸಮಾನ ಸೌಲಭ್ಯ ಸಿಗಬೇಕು ಅಂತ ಆಯಾ ಜಾತಿಯ ಗುರು-ಹಿರಿಯರು ಮೀಸಲಾತಿ ಹೋರಾಟ ನಡೆಸುತ್ತಿರುವುದು ಪ್ರಸ್ತುತ ವಿದ್ಯಮಾನ...' ಎಂದಳು ಸುಮಿ.

ಸಂಗತ

ಪ್ರತ್ಯೇಕ ವಿ.ವಿ.ಯಿಂದ ಪ್ರತ್ಯೇಕತೆ

ಅಂಗವಿಕಲ ಮಕ್ಕಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವುದರಿಂದ ಸಮಾಜದಲ್ಲಿ ಸಾಮಾನ್ಯ ಮತ್ತು ಅಂಗವಿಕಲ ಮಕ್ಕಳ ನಡುವಿನ ಅಂತರ ಹೆಚ್ಚಾಗುತ್ತದೆ

● ಚಂದ್ರಶೇಖರ ಪುಟ್ಟಪ್ಪ

ರಾಷ್ಟ್ರೀಯ ಶಿಕ್ಷಣ ನೀತಿ- 2020 ಪ್ರಕಾರ, ಎಲ್ಲ ಅಂಗವಿಕಲ ಮಕ್ಕಳಿಗೂ ತಂತ್ರಜ್ಞಾನ ಆಧಾರಿತ ಪರಿಕರಗಳು, ಭಾಷೆಗೆ ಸೂಕ್ತವಾದ ಬೋಧನಾ ಕಲಿಕಾ ಸಾಮಗ್ರಿಗಳೊಂದಿಗೆ ಅಂತರ್ಗತ ಶಿಕ್ಷಣದ (ಇನ್‌ಕ್ಲೂಸಿವ್ ಎಜುಕೇಷನ್) ಮೂಲಕ ಸಮಗ್ರ ಶಿಕ್ಷಣ ದೊರೆಯಬೇಕು. ಇಂತಹ ಮಕ್ಕಳಿಗೆ ಹೇಗೆ ಕಲಿಸಬೇಕು ಎಂಬ ಜ್ಞಾನವು ಎಲ್ಲಾ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಅವಿಭಾಜ್ಯ ಅಂಗವಾಗಬೇಕು.


ಸಾಮಾನ್ಯ ಮಕ್ಕಳೊಂದಿಗೆ ಈ ವಿಶೇಷ ಮಕ್ಕಳು ಒಟ್ಟಿಗೆ ಶಿಕ್ಷಣ ಪಡೆಯುವುದರಿಂದ ಅವರು ಬೌದ್ಧಿಕ ವಿಕಾಸ, ಭಾಷಾ ವಿಕಾಸ, ಸಾಮಾಜಿಕ ವಿಕಾಸ ಹೊಂದಲು, ವ್ಯಾವಹಾರಿಕ ಜ್ಞಾನ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ನ್ಯೂನತೆಗಳ ಬಗ್ಗೆ ಜಾಗೃತಿ ಉಂಟಾಗಿ, ಅಂಗವಿಕಲ ಮಕ್ಕಳ ಜನನ ಪ್ರಮಾಣ ಕಡಿಮೆಯಾಗಲು ಸಹಾಯಕವಾಗುತ್ತದೆ.

ಆದರೆ ಕೆಲವರು ಇದ್ಯಾವುದರ ಅರಿವೇ ಇಲ್ಲದೆ ಸ್ವಹಿತಾಸಕ್ತಿ ಸಾಧನೆಗಾಗಿ, ಅಂಗವಿಕಲರಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಸಂಬಂಧ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವುದು ವಿಪರ್ಯಾಸ. ಇದರಿಂದ ಆಗಬಹುದಾದ ಸಾಧಕ– ಬಾಧಕಗಳ ಅಧ್ಯಯನ ನಡೆಸದೆ, ಇಂತಹದ್ದೊಂದು ವಿಶ್ವವಿದ್ಯಾಲಯದ ಅಗತ್ಯದ ಬಗ್ಗೆ ಅಂಗವಿಕಲರೊಂದಿಗಾಗಲೀ ಅಂಗವಿಕಲರ ಸಂಘ ಸಂಸ್ಥೆಗಳೊಂದಿಗಾಗಲೀ ಚರ್ಚಿಸದೆ ಏಕಪಕ್ಷೀಯವಾಗಿ ಮುಂದಡಿ ಇಡುವುದರ ಔಚಿತ್ಯವಾದರೂ ಏನು ಎಂಬ ಪ್ರಶ್ನೆ ಮೂಡುತ್ತದೆ. ಅಂಗವಿಕಲ ಮಕ್ಕಳಿಗೆ ಪ್ರತ್ಯೇಕ ಶಿಕ್ಷಣದ ವ್ಯವಸ್ಥೆಯಿಂದ, ಸಮಾಜದಲ್ಲಿ ಸಾಮಾನ್ಯ ಮತ್ತು ಅಂಗವಿಕಲ ಮಕ್ಕಳ ನಡುವಿನ ಅಂತರ ಹೆಚ್ಚಾಗುತ್ತದೆ.

ಇನ್ನು ವಿಶ್ವವಿದ್ಯಾಲಯದ ಅಗತ್ಯ ಬರುವುದು ಪಿಯು ವಿದ್ಯಾಭ್ಯಾಸದ ನಂತರ. ಅಂಗವಿಕಲರಿಗೆ ಶೇ 5ರಷ್ಟು ಮೀಸಲಾತಿಯಂತೆ ಈಗಿರುವ ವಿಶ್ವವಿದ್ಯಾಲಯಗಳಲ್ಲಿಯೇ ಉನ್ನತ ವ್ಯಾಸಂಗ ಮಾಡಬಯಸುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದ್ದು, ಈ ಸೀಟುಗಳು ಭರ್ತಿಯಾಗದೇ ಉಳಿಯುತ್ತಿವೆ. ಇಂತಹ ಸ್ಥಿತಿ ಇರುವಾಗ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವುದು ಒಂದು ರೀತಿಯಲ್ಲಿ ಮೀಸಲಾತಿ ವಂಚಿಸಿ ಅಂಗವಿಕಲರನ್ನು ಪ್ರತಿಷ್ಠಿತ ಕಾಲೇಜುಗಳಿಂದ ದೂರವಿಡುವ ಹುನ್ನಾರ. ಅದರ ಬದಲು ಅಂಗವಿಕಲ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ನಂತರ ವಿದ್ಯಾಭ್ಯಾಸ ಮುಂದುವರಿಸಲು ಅನುವಾಗುವಂತೆ ಅವರಿಗೆ ಆರ್ಥಿಕ ನೆರವು ಒದಗಿಸಿ, ಉನ್ನತ ಶಿಕ್ಷಣಕ್ಕೆ ಸಹಕಾರಿಯಾಗುವಂತಹ ಯೋಜನೆಗಳನ್ನು ರೂಪಿಸಬೇಕು.

ಒಂದು ವೇಳೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸಿದಲ್ಲಿ ಏನಾಗಬಹುದೆಂದು ಗಮನಿಸೋಣ. ರಾಜಧಾನಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾಗುತ್ತದೆ, ಅದಕ್ಕೊಬ್ಬ ಕುಲಪತಿ, ರಿಜಿಸ್ಟ್ರಾರ್, ಗಜಗಾತ್ರದ ಸಿಬ್ಬಂದಿ ವರ್ಗ, ಹತ್ತಾರು ಎಕರೆ ಸ್ಥಳ, ಸುಸಜ್ಜಿತ ಕಟ್ಟಡ, ಕೋಟ್ಯಂತರ ರೂಪಾಯಿ ಯೋಜನೆ... ಇವಿಷ್ಟು ಬಲಿಷ್ಠರ, ಪ್ರಭಾವಿಗಳ ಹಾಗೂ ಅಂಗವಿಕಲರಲ್ಲದ ಸಾಮಾನ್ಯರ ಪಾಲಾಗುವುದಂತೂ ನಿಶ್ಚಿತ. ಅಂಗವಿಕಲರ ಕಲ್ಯಾಣ ಇಲಾಖೆಯಲ್ಲಿಯೇ ಅಂಗವಿಕಲ ನೌಕರರನ್ನು ಕಾಣದಂತಹ ಸ್ಥಿತಿ ಇರುವಾಗ ಇನ್ನು ವಿಶ್ವವಿದ್ಯಾಲಯದಲ್ಲಿ ಅಂಗವಿಕಲರು ನೌಕರಿ ಗಿಟ್ಟಿಸಿಕೊಳ್ಳುವುದು ಗಗನಕುಸುಮವೇ ಸರಿ.

ರಾಜ್ಯದ ಯಾವುದೋ ಜಿಲ್ಲೆಯ ಅಂಗವಿಕಲರೊಬ್ಬರು ರಾಜಧಾನಿಯಲ್ಲಿರುವ ವಿಶ್ವವಿದ್ಯಾಲಯಕ್ಕೆ ಕಲಿಯಲು ಬರುವುದು ಕಷ್ಟಸಾಧ್ಯ. ಆದ್ದರಿಂದ ತಾಲ್ಲೂಕಿಗೊಂದು ವಿಶೇಷ ಕಾಲೇಜು ಸ್ಥಾಪನೆ ಅನಿವಾರ್ಯವಾಗುತ್ತದೆ. ಕಾನೂನು ವಿಶ್ವವಿದ್ಯಾಲಯ, ತಾಂತ್ರಿಕ ವಿಶ್ವವಿದ್ಯಾಲಯ, ವೈದ್ಯಕೀಯ ವಿಶ್ವವಿದ್ಯಾಲಯ ಹೀಗೆ ವಿವಿಧ ವಿಷಯವಾರು ಕ್ಷೇತ್ರಗಳಿಗೂ ಅಂಗವಿಕಲ ವಿಶ್ವವಿದ್ಯಾಲಯ ಸ್ಥಾಪಿಸಬೇಕಾಗುತ್ತದೆ. ಇದು ಅಂಗವಿಕಲರಲ್ಲದ ಸಾಮಾನ್ಯರಿಗೆ ಉದ್ಯೋಗ ಸೃಜಿಸಬಹುದು ಅಷ್ಟೇ. ಪ್ರವೇಶಕ್ಕೆ ಅಷ್ಟೊಂದು ಅಂಗವಿಕಲ ವಿದ್ಯಾರ್ಥಿಗಳನ್ನು ತರುವುದಾದರೂ ಎಲ್ಲಿಂದ ಎಂದು ಯೋಚಿಸಬೇಕಾಗಿದೆ.



ಉನ್ನತ ವ್ಯಾಸಂಗಕ್ಕೆ ಅರ್ಹರಿರುವ ಅಂಗವಿಕಲ ವಿದ್ಯಾರ್ಥಿಗಳ ಅಂಕಿಅಂಶದ ಸಮೀಕ್ಷೆ ಈವರೆಗೂ ನಡೆದಿಲ್ಲ. ಅಂದಾಜಿನ ಪ್ರಕಾರ, ಒಂದು ಜಿಲ್ಲೆಯಲ್ಲಿ ಸುಮಾರು 8- 10 ಅಂಗವಿಕಲ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸ ಮಾಡುತ್ತಿದ್ದರೆ ಹೆಚ್ಚು. ಅದರಂತೆಯೇ ಲೆಕ್ಕ ಮಾಡಿದರೂ ರಾಜ್ಯದಲ್ಲಿ ಒಟ್ಟಾರೆ ಸುಮಾರು 250ರಿಂದ 300 ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕೆ ಲಭ್ಯರಾಗಬಹುದು. ಅವರಲ್ಲಿ ಒಬ್ಬೊಬ್ಬರ ಅಭಿರುಚಿ, ಆಸಕ್ತಿಯ ವಿಷಯ ಬೇರೆಬೇರೆ ಇರುತ್ತದೆ. ವೈದ್ಯ ವಿಜ್ಞಾನದ ಆವಿಷ್ಕಾರದ ಫಲವಾಗಿ ಅಂಗವಿಕಲರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಉದಾಹರಣೆಗೆ, ಕುರುಡುತನ, ಪೋಲಿಯೊ ಪೀಡಿತರ ಸಂಖ್ಯೆ ಇಲ್ಲವಾಗುತ್ತಿರುವುದು ಸಂತಸದ ವಿಷಯ. ರಕ್ತಸಂಬಂಧಿ ಕಾಯಿಲೆ, ಅಪಘಾತದಿಂದಾಗುವ ಅಂಗವೈಕಲ್ಯ ಮತ್ತು ಬುದ್ಧಿಮಾಂದ್ಯತೆ ಮಾತ್ರ ಉಳಿಯುತ್ತಿವೆ. ಕೆಲವು ವಿಶೇಷ ಶಾಲೆಗಳು ತಮ್ಮಲ್ಲಿರುವ ಮಕ್ಕಳ ಸಂಖ್ಯೆಗಿಂತ ಅತಿ ಹೆಚ್ಚು ಮಕ್ಕಳ ಲೆಕ್ಕ ತೋರಿಸಿ ಅನುದಾನ ಪಡೆಯುತ್ತಿವೆ. ಅಂಗವಿಕಲ ಮಕ್ಕಳ ಹೆಸರಿನಲ್ಲಿ ತಿಂದು ತೇಗುವ ಕೆಲವು ಭ್ರಷ್ಟ ಸ್ವಯಂಸೇವಾ ಸಂಸ್ಥೆಗಳಂತೆ ವಿಶ್ವವಿದ್ಯಾಲಯದಲ್ಲಿ ಮಾಡಲಾಗುವುದಿಲ್ಲ. ಆದ್ದರಿಂದ ಇದೊಂದು ರೀತಿ ಬಿಳಿ ಆನೆಯನ್ನು ಸಾಕಿದಂತೆ ಆಗುತ್ತದೆ.

ಅಂಗವಿಕಲರಿಗೆ ಪ್ರಯೋಜನವಾಗದ, ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪನೆ ಬದಲು, ರಾಜ್ಯದಲ್ಲಿ ಅಂಗವಿಕಲರ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರ ತೆರೆದು, ಶಿಕ್ಷಕರಿಗೆ, ಅಂಗವಿಕಲರ ಪ್ರಗತಿಗಾಗಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೌಶಲ ತರಬೇತಿ ವ್ಯವಸ್ಥೆ ಮಾಡಲಿ. ಈ ಮೂಲಕ, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗೆ ಕೈಜೋಡಿಸಲಿ.

ಲೇಖಕ: ಕಾರ್ಯಾಧ್ಯಕ್ಷ, ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ

ವಾಚಕರ ವಾಣಿ

ಪರೀಕ್ಷಾ ಕೇಂದ್ರ ಮತ್ತು ಮೋಸದಾಟ

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಜನವರಿಯಲ್ಲಿ ನಡೆಸಬೇಕಿದ್ದ ಪ್ರಥಮ ದರ್ಜೆ ಸಹಾಯಕರ (ಎಫ್.ಡಿ.ಎ) ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣದಿಂದ ರದ್ದುಗೊಳಿಸಿ ಫೆಬ್ರುವರಿ 28ರಂದು ನಡೆಸಿದೆ. ವಿಜಯಪುರದ ಪರೀಕ್ಷಾ ಕೇಂದ್ರವೊಂದರಲ್ಲಿ ಪರೀಕ್ಷೆಗೆ ಹಾಜರಾಗಿದ್ದ ನಮ್ಮ ಸಂಬಂಧಿಯೊಬ್ಬರು ಹಂಚಿಕೊಂಡ ಅನುಭವ ನಮ್ಮಲ್ಲಿ ಕಳವಳವನ್ನುಂಟು ಮಾಡಿತು. ಅವರು ಹೇಳಿದ ಪ್ರಕಾರ, ಕೋಣೆಯಲ್ಲಿ ಕೆಲವರನ್ನು ಹೊರತುಪಡಿಸಿ ಉಳಿದವರೆಲ್ಲರೂ ಅತ್ಯಂತ ಭರದಲ್ಲಿ ನಕಲು ಮಾಡುತ್ತಿದ್ದರಂತೆ. ಪರೀಕ್ಷಾ ಕೋಣೆಯಲ್ಲಿ ಮೊಬೈಲ್ ಬಳಕೆ ನಿಷಿದ್ಧವಾಗಿದ್ದರೂ ಸ್ವತಃ ಪರೀಕ್ಷಾ ನಿರೀಕ್ಷಕರೇ ಮೊಬೈಲ್ ಬಳಸಿ ಅಭ್ಯರ್ಥಿಗಳಿಗೆ ಉತ್ತರ ಹೇಳಿಕೊಟ್ಟರಂತೆ. ಅವರ ಈ ನಡೆಗೆ ನನ್ನ ಸಂಬಂಧಿ ಆಕ್ರೋಶ ವ್ಯಕ್ತಪಡಿಸಿದಾಗ 'ನಾನು ಅಭ್ಯರ್ಥಿಗಳಿಗೆ ಸಹಾಯವಾಗಲೆಂದು ಉತ್ತರಗಳನ್ನು ಹೇಳಿಕೊಡುತ್ತಿದ್ದೇನೆ' ಎಂದರಂತೆ! ಇಡೀ ಪರೀಕ್ಷಾ ಕೋಣೆ ಸಂತೆಯ ವಾತಾವರಣದಂತೆ ಭಾಸವಾಗುತ್ತಿತ್ತು ಎಂಬುದನ್ನು ಅವರಿಂದ ಕೇಳಿದೆವು.

ಉದ್ಯೋಗ ದೊರಕಿಸಿಕೊಳ್ಳಲು ಪರೀಕ್ಷೆಗೆಂದು ತಿಂಗಳಾನುಗಟ್ಟಲೆ ಗಂಭೀರವಾಗಿ ತಯಾರಿ ನಡೆಸಿ, ಪ್ರಶ್ನೆಪತ್ರಿಕೆ ಸೋರಿಕೆಯಿಂದ ಅದಾಗಲೇ ಹೈರಾಣಾಗಿದ್ದ ಅಭ್ಯರ್ಥಿಗಳಿಗೆ, ಇಂತಹ ಘಟನೆಗಳು ವ್ಯವಸ್ಥೆಯ ಬಗ್ಗೆ ಬೇಸರ ಹುಟ್ಟಿಸುತ್ತವೆ. ಆಯ್ಕೆ ಪ್ರಕ್ರಿಯೆಯ ಬಗ್ಗೆ ಸಂಪೂರ್ಣ ನಂಬಿಕೆ ಕಳೆದುಕೊಳ್ಳುವಂತೆ ಮಾಡುತ್ತವೆ. ಇಂತಹ ಅಪ್ರಾಮಾಣಿಕ ವ್ಯವಸ್ಥೆಯ ನಡುವೆ ಸತತ ಪರಿಶ್ರಮ ನಡೆಸಿ ನೌಕರಿ ಪಡೆಯಲು ಮಾಡುವ ಪ್ರಯತ್ನಗಳೆಲ್ಲ ನಿರರ್ಥಕ ಎಂದೆನಿಸುವುದರಲ್ಲಿ ಸಂದೇಹವಿಲ್ಲ. ಮೇಲಿನದು ಕೇವಲ ಒಬ್ಬರ ಅನುಭವವಾದರೆ, ಬೇರೆ ಬೇರೆ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಕಣ್ಣ ಮುಂದೆ ನಡೆದ ಮೋಸದಾಟಗಳು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗಿದ್ದರೂ ಆಯೋಗ ಕಣ್ಣುಮುಚ್ಚಿ ಕುಳಿತಿರುವುದು ದುರದೃಷ್ಟಕರ ವಿಚಾರ.

ಅರ್ಚನಾ ಖ್ಯಾಡಿ, ಮೇಲುಕೋಟೆ

ಸಾಲಕ್ಕಾಗಿ ಅವಾಸ್ತವಿಕ ನಿಯಮ ಸಲ್ಲದು

ಪ್ರಧಾನಮಂತ್ರಿ ಆತ್ಮನಿರ್ಭರ ಯೋಜನೆಯಡಿ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬೀದಿ ಬದಿಯ ವ್ಯಾಪಾರಸ್ಥರು ಸಾಲ ಪಡೆಯಲು ಯುಪಿಐ ಐ.ಡಿ ಹೊಂದಿರಬೇಕು. ಇದಕ್ಕಾಗಿ ಅವರು ಸ್ಮಾರ್ಟ್ ಫೋನ್ ಹೊಂದಿರಲೇಬೇಕಾದಂತಹ ಅನಿವಾರ್ಯ ಸ್ಥಿತಿ ಸೃಷ್ಟಿಯಾಗಿರುವುದು ಎಷ್ಟು ಸರಿ? ಕೋವಿಡ್‌ನಿಂದ ಈಗಾಗಲೇ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಬೀದಿ ಬದಿಯ ವ್ಯಾಪಾರಸ್ಥರು ಸರ್ಕಾರದಿಂದ ₹ 10 ಸಾವಿರ ಸಾಲ ಸೌಲಭ್ಯ ಪಡೆಯಲು ಸ್ಮಾರ್ಟ್ ಫೋನ್ ಖರೀದಿ ಮಾಡಬೇಕಾಗುತ್ತದೆ. ಇದಕ್ಕೆ ಕನಿಷ್ಠ ₹ 8 ಸಾವಿರದಿಂದ ₹ 10 ಸಾವಿರ ಬೇಕಾಗುತ್ತದೆ. ಅದಕ್ಕೆ ಯಾರು ಸಾಲ ಕೊಡುತ್ತಾರೆ? ಜೊತೆಗೆ ಸ್ಮಾರ್ಟ್ ಫೋನ್ ಬಳಸಲು ಬರದೇ ಇರುವವರ ಪಾಡೇನು?

ಈ ವ್ಯಾಪಾರಿಗಳಲ್ಲಿ ಹಲವರು ಬ್ಯಾಂಕ್‌ನ ಅರ್ಜಿ ತುಂಬಿಸಲೇ ಬಾರದೆ ಒದ್ದಾಡುತ್ತಾರೆ. ಹೀಗಿರುವಾಗ ಇನ್ನು ಸ್ಮಾರ್ಟ್ ಫೋನ್ ಬಳಕೆ ಬಗ್ಗೆ ಅವರಿಗೆ ತರಬೇತಿ ನೀಡುವವರು ಯಾರು? ಸಾಲ ಕೊಡುವ ಸಲುವಾಗಿ ಈ ವ್ಯಾಪಾರಸ್ಥರನ್ನು ಇನ್ನಷ್ಟು ಸಂಕಷ್ಟಕ್ಕೆ ಗುರಿ ಮಾಡುವುದು ಸರಿಯಲ್ಲ.

ಜ್ಯೋತಿ ಭಾಸ್ಕರ್, ಬೆಂಗಳೂರು

ವಿಶ್ವಾಸ ವೃದ್ಧಿಗೆ ಸಹಕಾರಿ

ಕೋವಿಡ್ ಲಸಿಕೆ ಪ್ರಯೋಗದ ಮತ್ತೊಂದು ಹಂತ ಆರಂಭವಾಗಿದೆ. ಲಸಿಕೆ ಯಾವಾಗ ಬಂದೀತು ಎಂದು ಆಸಕ್ತಿಯಿಂದ ಕಾದಿದ್ದ ಕೋವಿಡ್ ಯೋಧರೂ ಅದನ್ನು ಹಾಕಲು ಆರಂಭಿಸಿದಾಗ ವ್ಯಾಕ್ಸಿನ್ ತೆಗೆದುಕೊಳ್ಳಲು ಹಿಂದುಮುಂದು ನೋಡಿದ್ದು ಒಂದು ವಿಪರ್ಯಾಸ. ಈಗ ಮತ್ತೆ ಕೋವಿಡ್ ಸೋಂಕಿತರ ಸಂಖ್ಯೆ ಕೆಲವು ರಾಜ್ಯಗಳಲ್ಲಿ ಹೆಚ್ಚುತ್ತಿರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ. ಲಸಿಕೆ ಬಗ್ಗೆ ಜನರಲ್ಲಿ ನಂಬಿಕೆ ಹುಟ್ಟಿಸಲು ಪ್ರಧಾನಿ ಮೊದಲುಗೊಂಡು ಅನೇಕ ಗಣ್ಯರು ವ್ಯಾಕ್ಸಿನ್ ಹಾಕಿಸಿಕೊಳ್ಳುತ್ತಿದ್ದಾರೆ. ಇದರಿಂದ, ಲಸಿಕೆ ಕುರಿತು ಜನರಲ್ಲಿ ವಿಶ್ವಾಸ ವೃದ್ಧಿಸಬಹುದು.

ಇದುವರೆಗೂ ಸುಮಾರು ಒಂದೂವರೆ ಕೋಟಿ ಜನರಿಗೆ ವ್ಯಾಕ್ಸಿನ್ ಹಾಕಿರುವುದರಿಂದ ಅದನ್ನು ತೆಗೆದುಕೊಂಡವರ ಆರೋಗ್ಯದ ಕುರಿತು ರಾಜ್ಯವಾರು ಮಾಹಿತಿ ಪ್ರಕಟಿಸಿದರೆ ಅದು ಖಂಡಿತ ಜನರಿಗೆ ವ್ಯಾಕ್ಸಿನ್ ಪರಿಣಾಮದ ಬಗ್ಗೆ ಸ್ಪಷ್ಟ ಚಿತ್ರಣ ನೀಡಬಹುದು. ಆತಂಕ ನಿವಾರಣೆಯಾದರೆ ಜನ ತಾವಾಗಿಯೇ ಲಸಿಕೆ ಪಡೆಯಲು ಮುಂದಾಗುತ್ತಾರೆ. ಆಗ, ವ್ಯಾಕ್ಸಿನ್‌ಗಾಗಿ ನೂಕುನುಗ್ಗಲು ಉಂಟಾಗಬಹುದು. ಪರಿಣಾಮವಾಗಿ, ಅವ್ಯವಸ್ಥೆ ಮತ್ತು ಕೃತಕ ಅಭಾವ, ಕಾಳಸಂತೆ ಎಲ್ಲವೂ ತಲೆ ಎತ್ತಬಹುದು. ಸರ್ಕಾರ ಇದರ ಬಗ್ಗೆಯೂ ಈಗಲೇ ಯೋಚಿಸಿ ಸೂಕ್ತ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ.

ಸತ್ಯಬೋಧ, ಬೆಂಗಳೂರು

ಕಕ್ಷೆಯ ತೆಕ್ಕೆಗೆ

ಹತ್ತೊಂಬತ್ತು
ಉಪಗ್ರಹಗಳು ಕಕ್ಷೆಗೆ,
ಜೊತೆಗೆ ಅಗತ್ಯ
ವಸ್ತುಗಳ ಬೆಲೆಯೂ
ಅವುಗಳ ತೆಕ್ಕೆಗೆ!

ಕುಮಾರ ಚಲವಾದಿ, ಹಾಸನ

ಪೊಲೀಸರ ಪ್ರಭಾವ: ಏನಿದರ ರಹಸ್ಯ?

ಮಂಗಳೂರಿನಲ್ಲಿ ವಂಚನೆ ಪ್ರಕರಣವೊಂದರಲ್ಲಿ ವಶಕ್ಕೆ ಪಡೆದಿದ್ದ ಐಷಾರಾಮಿ ಕಾರು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪೊಲೀಸ್ ಅಧಿಕಾರಿಗಳು ಅಮಾನತುಗೊಂಡಿದ್ದಾರೆ. ಇದರೊಂದಿಗೆ ಪೊಲೀಸ್ ವ್ಯವಸ್ಥೆಯಲ್ಲಿ ಡಕಾಯಿತಿ, ಸುಲಿಗೆ ಮನಃಸ್ಥಿತಿಯ ಕೆಲವು ಅಧಿಕಾರಿಗಳು ಇದ್ದಾರೆಂಬುದು ಮತ್ತೊಮ್ಮೆ ಮಗದೊಮ್ಮೆ ಸಾಬೀತಾಗುತ್ತಲೇ ಇದೆ.

ಈ ಹಿಂದೆ ಕೂಡ ಇಂಥದ್ದೇ ಕೃತ್ಯವನ್ನು ಹೋಲುವ ಹಲವಾರು ಪ್ರಕರಣಗಳು ಪೊಲೀಸ್ ಅಧಿಕಾರಿಗಳಿಂದ ನಡೆದಿರುವುದು ಬೆಳಕಿಗೆ ಬಂದಿದ್ದವು. ವ್ಯವಸ್ಥೆಯಲ್ಲಿ ದಕ್ಷತೆ ಕುಸಿದಿರುವುದು ಮತ್ತು ಏನು ಮಾಡಿದರೂ ಹಣ, ಪ್ರಭಾವ ಬಳಸಿ ಪಾರಾಗಬಹುದು ಎಂಬ ಬಲವಾದ ನಂಬಿಕೆ ಹುಸಿಯಾಗದಿರುವುದೇ ಈ ರೀತಿಯ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗಿರಬಹುದು. ಹೆಚ್ಚಿನ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾದ ಉದಾಹರಣೆಗಳೇ ಇಲ್ಲ. ಏನಿದರ ರಹಸ್ಯ?

ರಿಪ್ಪನ್‌ಪೇಟೆ ನಟರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಒಳ ಮೀಸಲಾತಿ ಹಾಗೂ ಉಪಜಾತಿವಾರು ಸಂಪನ್ಮೂಲ ನಿಗದೀಕರಣದಂತಹ ಸಮಸ್ಯೆಗಳು ತೀವ್ರವಾಗಿ ಮುನ್ನೆಲೆಗೆ ಬರುತ್ತಿವೆ. ಇದು ಒಂದು ಬಗೆಯ ತಿಕ್ಕಾಟ, ಒಂದು ಬಗೆಯ ಕಚ್ಚಾಟ. ಬಹುಪಾಲು ಎಲ್ಲಾ ಜಾತಿ ಗುಂಪುಗಳೊಳಗೂ ಇದು ಒಳಗುದಿಯನ್ನು ನಿರ್ಮಿಸಿದೆ

ಬೆಕ್ಕುಗಳಿಗೆ ಕಾಣುತ್ತಿರುವ ಬೆಣ್ಣೆ ಕಾಣದಿರುವ ದೊಣ್ಣೆ

• ಬಂಜಗೆರೆ ಜಯಪ್ರಕಾಶ



ಕರ್ನಾಟಕ ಪ್ರದೇಶ ಕುರುಬರ ಸಂಘದ ಸದಸ್ಯರು ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ಮೀಸಲಾತಿಗೆ ಸೇರ್ಪಡೆ ಮಾಡಲು ಒತ್ತಾಯಿಸಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆಸಿದ ಪ್ರತಿಭಟನೆಯ ದೃಶ್ಯ – ಪ್ರಜಾವಾಣಿ ಚಿತ್ರ

ಭಾರತೀಯ ಸಾಮಾಜಿಕ ಮನಸ್ಥಿತಿ ಕೆಲವು ಸನ್ನಿವೇಶಗಳಲ್ಲಿ ಜಾತಿಯಾಧಾರಿತವಾಗಿಯೂ ಮತ್ತೆ ಕೆಲವು ಸನ್ನಿವೇಶಗಳಲ್ಲಿ ಉಪಜಾತಿ ಆಧಾರಿತವಾಗಿಯೂ ಆಲೋಚಿಸುತ್ತದೆ. ಮೀಸಲಾತಿ ಹಂಚಿಕೆ ಎನ್ನುವುದು ಹಲವು ಜಾತಿಗಳನ್ನು ಒಂದು ಗುಂಪೆಂದು ವಿಭಾಗಿಸಿ ಒದಗಿಸಿಕೊಟ್ಟಿರುವ ಅವಕಾಶಗಳ ಹಂಚಿಕೆಯಾಗಿದೆ. ಆರಂಭದಲ್ಲಿ ಇದು ಪ್ರಾತಿನಿಧ್ಯ ಪಡೆದಿಲ್ಲದ ಜಾತಿ ಸಮುದಾಯಗಳಿಗೆ ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗ ಕ್ಷೇತ್ರದಲ್ಲಿ ಪ್ರಾತಿನಿಧ್ಯ ಕಲ್ಪಿಸುವ ಒಂದು ಆಶಯದಿಂದ ರೂಪುಗೊಂಡಿತ್ತು. ಬರುಬರುತ್ತಾ ಅದು ಬೇರೆ ಬೇರೆ ಜಾತಿಗುಂಪುಗಳ ನಡುವೆ ಅವಕಾಶಗಳ ಹಂಚಿಕೆ ಎನ್ನುವ ನೆಲೆಗೆ ಬಂದು ಮುಟ್ಟಿದೆ. ಈ ಅವಕಾಶಗಳ ಹಂಚಿಕೆ ಎನ್ನುವುದು ತನ್ನಷ್ಟಕ್ಕೆ ದೋಷಯುಕ್ತ ಪರಿಕಲ್ಪನೆ ಅಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಪ್ರಾತಿನಿಧ್ಯ ಒದಗಿಸುವ ಅಗತ್ಯವಿದ್ದೇ ಇರುತ್ತದೆ. ಈ ಹಾದಿಯಲ್ಲಿ ಸರ್ಕಾರಗಳು ಬಹಳ ಮುಂದೆ ಹೋಗಿಯಾಗಿದೆ. ಮೀಸಲು ಪಟ್ಟಿಯಲ್ಲಿ ಸೇರಿಲ್ಲದ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವವರಿಗೆ ಶೇ 10ರಷ್ಟು ಮೀಸಲಾತಿಯನ್ನು ಪ್ರಕಟಿಸಲಾಗಿದೆ. ಬ್ರಾಹ್ಮಣ, ಮರಾಠ, ಲಿಂಗಾಯತವೂ ಸೇರಿದಂತೆ ಹಲವು ಜಾತಿ ಅಭಿವೃದ್ಧಿ ನಿಗಮಗಳನ್ನು ರಚಿಸಿ ಅವುಗಳಿಗೆ ಅನುದಾನ ಘೋಷಿಸಲಾಗಿದೆ. ಪ್ರತಿಯೊಂದು ಜಾತಿಯೂ ತನ್ನ ಅಭಿವೃದ್ಧಿಗಾಗಿ ನಿಗಮ ರಚನೆ ಮಾಡುವಂತೆ ಬೇಡಿಕೆ ಇಡುತ್ತಿದೆ. ಹೀಗೆ ಜಾತಿವಾರು ನಿಗಮಗಳಿಗೆ ರಾಜ್ಯದ ಆಯವ್ಯಯದಲ್ಲಿ ಹಣಕಾಸು ಮೀಸಲಿಡುವುದು ಮುಂದುವರಿದಂತೆ ಆಯಾ ಜಾತಿ ಗುಂಪಿನಲ್ಲಿರುವ ಉಪಜಾತಿಗಳು ತಮ್ಮ ಪಾಲು ಹಾಗೂ ಪ್ರಾತಿನಿಧ್ಯದ ಪ್ರಶ್ನೆಯನ್ನು ಎತ್ತಿಕೊಂಡು ಹೋರಾಡಲು ಮುಂದಾಗುತ್ತಿವೆ. ಗೋಜಲು ನಿರ್ಮಾಣವಾಗುತ್ತಿರುವುದೇ ಇಲ್ಲಿ.



ಬಂಜಗೆರೆ ಜಯಪ್ರಕಾಶ್

ನಮ್ಮ ಸಮಾಜದಲ್ಲಿರುವ ಜಾತಿಗಳು ಒಂದೇ ರೀತಿಯ ಪರಿಸ್ಥಿತಿಗಳನ್ನು ಹೊಂದಿಲ್ಲ. ಅದೇ ರೀತಿ ಒಂದು ಜಾತಿ ಎಂದು ಕರೆಸಿಕೊಳ್ಳುವ ಜಾತಿ ಗುಂಪುಗಳಲ್ಲಿರುವ ವಿವಿಧ ಉಪಜಾತಿಗಳ ನಡುವೆಯೂ ಸಮಾನ ಪರಿಸ್ಥಿತಿಗಳಿಲ್ಲ. ಹೀಗಾಗಿ ಜಾತಿ ಗುಂಪುಗಳೊಳಗೇ ಹೆಚ್ಚು ಅವಕಾಶ ಪಡೆದ, ಅಷ್ಟು ಅವಕಾಶ ಪಡೆಯಲು ಸಾಧ್ಯವಾಗದ ಘಟಕಗಳು ಇವೆ. ಇದರಿಂದಾಗಿ ಒಳ ಮೀಸಲಾತಿ ಹಾಗೂ ಉಪಜಾತಿವಾರು ಸಂಪನ್ಮೂಲ ನಿಗದೀಕರಣದಂತಹ ಸಮಸ್ಯೆಗಳು ತೀವ್ರವಾಗಿ ಮುನ್ನೆಲೆಗೆ ಬರುತ್ತಿವೆ. ಇದು ಒಂದು ಬಗೆಯ ತಿಕ್ಕಾಟ, ಒಂದು ಬಗೆಯ ಕಚ್ಚಾಟ. ಬಹುಪಾಲು ಎಲ್ಲಾ ಜಾತಿ ಗುಂಪುಗಳೊಳಗೂ ಇದು ಒಳಗುದಿಯನ್ನು ನಿರ್ಮಿಸಿದೆ. ಪ್ರಭುತ್ವ ಈ ಒಳಗುದಿಯನ್ನು ಸಮಂಜಸವಾಗಿ ಬಗೆಹರಿಸಲು ಪ್ರಯತ್ನಿಸುತ್ತಿಲ್ಲ.

ಈ ಒಳಗುದಿಯಿಂದ ತನಗೆ ಬೇಕಾದಂತೆ ಲಾಭ ಮಾಡಿಕೊಳ್ಳಲು ಬಿಜೆಪಿ ಮತ್ತು ಸಂಘ ಪರಿವಾರ ಸನ್ನದ್ಧವಾಗಿದೆ. ಹಲವು ಜಾತಿ ಗುಂಪುಗಳ ನಡುವೆ ಉಪಜಾತಿ ವಿಂಗಡೀಕರಣ ತೀವ್ರಗೊಂಡಂತೆ ಹಿಂದುತ್ವದ ರಾಜಕಾರಣಕ್ಕೆ ಕೆಲವು ತಾಂತ್ರಿಕ ಪ್ರಯೋಜನಗಳಿವೆ. ಈ ಪ್ರಯೋಜನಗಳಲ್ಲಿ ಮೊದಲನೆಯದು, ಯಾವುದೇ ಜಾತಿ ಗುಂಪು ವಿಸ್ತಾರ ನೆಲೆಯಲ್ಲಿ ಸಂಘಟಿತವಾಗಿ ತನಗೊಬ್ಬ ಪ್ರಬಲ ನಾಯಕನನ್ನು ರೂಪಿಸಿಕೊಳ್ಳಲು ಸಾಧ್ಯವಾಗದಂತೆ ನೋಡಿಕೊಳ್ಳುವುದು. ಪ್ರತಿ ರಾಜ್ಯದಲ್ಲಿಯೂ ಕೆಲವು ಜಾತಿಗಳಿಗೆ ಹೆಚ್ಚಿನ ಸಂಖ್ಯಾಬಲವಿದೆ. ಅಂತಹ ಜಾತಿಗಳಿಂದ ಪ್ರಬಲ ನಾಯಕರು ಮೂಡಿಬಂದರೆ ಹಿಂದುತ್ವ ಪ್ರತಿಪಾದನೆ ಮಾಡುವ ಸಂಘಪರಿವಾರದ ಗರ್ಭಗುಡಿ ಸೂತ್ರಧಾರಿತ್ವಕ್ಕೆ ತೊಡಕುಗಳೇರ್ಪಡುತ್ತವೆ. ಆ ಬಗೆಯ ತೊಡಕನ್ನು ಬಿ.ಎಸ್, ಯಡಿಯೂರಪ್ಪ ಸಂಘಪರಿವಾರಕ್ಕೆ ಉಂಟು ಮಾಡಿದ್ದಾರೆನ್ನುವುದು ಈಗ ಒಳಮಾತಾಗಿ ಉಳಿದಿಲ್ಲ. ಯಡಿಯೂರಪ್ಪನವರಿಗೆ ಲಿಂಗಾಯತ ಸಮುದಾಯ ಒಗ್ಗಟ್ಟಿನ ನೆಲೆಯಲ್ಲಿ ಬೆಂಬಲ ನೀಡುವ ಪರಿಸ್ಥಿತಿ ಇರುವವರೆಗೂ ಬಿಜೆಪಿ ಒಂದು ತೂಕವಾದರೆ, ಯಡಿಯೂರಪ್ಪನವರು ಇನ್ನೊಂದು ತೂಕ ಎಂಬ ಪರಿಸ್ಥಿತಿ ತಪ್ಪುವುದಿಲ್ಲ. ಸಂಘಪರಿವಾರದ ಇಷ್ಟಾನಿಷ್ಟಗಳನ್ನು ಪರಿಗಣಿಸದೆಯೇ ಯಡಿಯೂರಪ್ಪ ಕಾರ್ಯಕ್ರಮ ಹಾಕಿಕೊಳ್ಳಬಹುದು. ಇದು ಸಂಘಪರಿವಾರಕ್ಕೆ ತಾತ್ವಿಕ ತೊಡಕು. ಬೇಕೆನಿಸಿದಾಗ ಬದಲಿಸಿ ಬೇಕಾದವರನ್ನು ಅಧಿಕಾರ ಕೇಂದ್ರಕ್ಕೆ ತಂದು ಕೂರಿಸಲಾಗದ ಅನನುಕೂಲ. ಇದು ಸಂಘ ಪರಿವಾರದ ಸೂತ್ರಧಾರಿ ಪಾತ್ರಕ್ಕೆ ರಾಜಕೀಯ ತೊಡಕು. ಇದಕ್ಕೆ ಅವರಿಗೆ ಪರಿಹಾರವಾಗಿ ಕಂಡಿರುವುದೇ ಪಂಚಮಸಾಲಿ ಪಂಗಡ ಶುರು ಮಾಡಿರುವ ಹೋರಾಟ. ಬಸನಗೌಡ ಪಾಟೀಲ ಯತ್ನಾಳರ ಅಸೀಮ ಧೈರ್ಯವಂತಿಕೆಯ ಹಿಂದೆ ತನಗೆ ಸಿಗಬೇಕಾದ ಸ್ಥಾನಮಾನ ಸಿಕ್ಕಿಲ್ಲ ಎಂಬ ಆಕ್ರೋಶ ಎಷ್ಟಿದೆಯೋ ಅದರಷ್ಟೇ ಸಂಘಪರಿವಾರದ ಕುಮ್ಮಕ್ಕಿನ ಪ್ರೋತ್ಸಾಹವೂ ಇದೆ ಎಂದು ಭಾಸವಾಗುತ್ತದೆ.

ಪಕ್ಷದೊಳಗೆ ಯಡಿಯೂರಪ್ಪನವರಿಗೆ ಮೂಗುದಾರ ಹಾಕಲು ಪಂಚಮಸಾಲಿ 2ಎ ಮೀಸಲಾತಿ ಬೇಡಿಕೆಯನ್ನು ಹಿಂಬಾಗಿಲಿನಿಂದ ಪೋಷಿಸುತ್ತಿರುವ ಸಂಘಪರಿವಾರ, ಪಕ್ಷದ ಹೊರಗೆ ಅಹಿಂದ ಸಮುದಾಯಗಳ ಪ್ರಭಾವಶಾಲಿ ನಾಯಕರಾಗಿರುವ, ಸೈದ್ಧಾಂತಿಕವಾಗಿ- ರಾಜಕೀಯವಾಗಿ ಸಂಘಪರಿವಾರದ ಜೊತೆ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧರಿಲ್ಲದ ಸಿದ್ದರಾಮಯ್ಯನವರನ್ನು ನಿರ್ಬಲಗೊಳಿಸಲು ಕುರುಬರ ಹೋರಾಟವನ್ನು ಬೆಂಬಲಿಸಿದಂತೆ ಕಾಣಿಸುತ್ತಿದೆ. ಪಂಚಮಸಾಲಿಗಳಿಗೆ 2ಎ ಸೇರಬೇಕೆಂಬ ಆಸೆ, ಕುರುಬರಿಗೆ ಎಸ್.ಟಿ.ಗೆ ಸೇರಬೇಕೆಂಬ ಆಸೆ ಇದೆಯೆಂಬುದೂ ವಾಸ್ತವವೇ. ಆಲೋಚನೆ ಮಾತ್ರವಾಗಿದ್ದ ಒಂದು ಅಂಶವನ್ನು ಆಚರಣೆಗಿಳಿಸಲು ಬಂದಿರುವ ಪ್ರೇರಣೆಗಳು ಮಾತ್ರ ರಾಜಕೀಯ ತಂತ್ರಗಾರಿಕೆಯ ಭಾಗವೇ ಆಗಿವೆ.

ತಮ್ಮನ್ನು 2ಎಗೆ ಸೇರಿಸಲು ಯಡಿಯೂರಪ್ಪ ಸಿದ್ಧನಾಗಲಿಲ್ಲ ಎಂದು ಪಂಚಮಸಾಲಿಗಳು ಅವರ ನಾಯಕತ್ವವನ್ನು ತಿರಸ್ಕರಿಸಬೇಕು; ಹಾಗೆಯೇ ತಮ್ಮನ್ನು ಎಸ್.ಟಿ. ಮಾಡಿಸಲು ಸಿದ್ಧರಾಮಯ್ಯ ಬರಲಿಲ್ಲ ಎಂದು ಅವರ ಬೆಂಬಲದ ಭದ್ರ ಕೋಟೆ ಒಡೆಯಬೇಕು. ಹೀಗಾಗುವುದು ಸಂಘಪರಿವಾರಕ್ಕೆ ಅತ್ಯಂತ ಪ್ರಿಯವಾದ ಸಂಗತಿಯೆನ್ನುವುದನ್ನು ಊಹಿಸಲು ಹೆಚ್ಚಿನ ಜಾಣ್ಮೆಯೇನೂ ಬೇಕಾಗುವುದಿಲ್ಲ.

ಇಂತಹ ಗೊಂದಲದಿಂದ ಮತ್ತೊಂದು ದೂರೋದ್ದೇಶವೂ ಈಡೇರಲು ಸಾಧ್ಯವಿದೆ. ನಿರ್ಣಾಯಕ ಬಲವಾಗಿ ರೂಪುಗೊಳ್ಳದ ವಿಘಟಿತ ಜಾತಿಗುಂಪುಗಳ ನಡುವೆ ಕಾಲಾನುಕಾಲಕ್ಕೆ ತಮ್ಮ ರಾಜಕೀಯ ಅನುಕೂಲಕ್ಕೆ ತಕ್ಕಂತೆ ಸಮೀಕರಣ ಏರ್ಪಡಿಸುತ್ತಾ, ಈ ಚೌಕಾಸಿ ನಡೆಸುವುದಕ್ಕೆ ಶಕ್ತಿ ಇರುವ ಏಕೈಕ ಶಕ್ತಿಕೇಂದ್ರವಾಗಿ ತನ್ನ ಸೂತ್ರಧಾರಿ ರಾಜಕೀಯ ನಡೆಸಲು ಸಂಘಪರಿವಾರಕ್ಕೆ ಸಾಧ್ಯವಾಗುತ್ತದೆ. ಭಾರತೀಯ ಸಮಾಜ ಹಿಂದುಳಿದ, ದಲಿತ, ರೈತ, ಮಹಿಳೆ ಹೀಗೆ ಸಮುದಾಯಾಧಾರಿತವಾಗಿ ಸಂಘಟಿತವಾಗುವ ಬದಲು ಛೀದ್ರೀಕರಣಗೊಂಡಿದ್ದರೆ ಅದನ್ನು ಏಕಸೂತ್ರಕ್ಕೆ ಒಳಪಡಿಸುವ ಮಂತ್ರದಂಡವಾಗಿ `ಹಿಂದುತ್ವ' ಬಳಕೆಯಾಗುತ್ತದೆ. ಈ ಕಾರಣಕ್ಕಾಗಿಯೇ ವಿಂಗಡಣೆಯ ತಿದಿಯನ್ನು ಒತ್ತಿ ಅಸಮಾಧಾನದ ಬೆಂಕಿಯನ್ನು ಬೆಳೆಸಲಾಗುತ್ತಿದೆ. ಪಂಚಮಸಾಲಿ ಬೇಡಿಕೆಯಿಂದ ಒಂದು ಕಡೆ ಇತರೆ ಲಿಂಗಾಯತರೂ, ಮತ್ತೊಂದು ಕಡೆ ಕುರುಬರೂ, ಕುರುಬರ ಬೇಡಿಕೆಯಿಂದ ಬೇಡರೂ ಆತಂಕಿತರಾಗುವುದು ಸಹಜವಾಗಿದೆ. ತಮ್ಮ ಆಸೆ ಈಡೇರಿಕೆಗಾಗಿ ಅಥವಾ ಆತಂಕ ಪರಿಹಾರಕ್ಕಾಗಿ 'ಅನ್ಯಥಾ ಶರಣಂ ನಾಸ್ತಿ. ತ್ವಮೇವ ಶರಣಂ ಮಮ' ಎಂದು ತಮ್ಮ ಬಳಿಗೇ ಬರುವಂತಾಗಬೇಕು, ಆ ಸಮುದಾಯಗಳು ತಮ್ಮ ಬೆಂಬಲಿಗರಾಗಿಯೇ ಉಳಿಯುವಂತಾಗಬೇಕು ಎಂಬುದು ಸಂಘಪರಿವಾರದವರ ಸೂತ್ರವಿದ್ದಂತಿದೆ.

ಇದು ಹೀಗೆಯೇ ಬೆಳೆದು `ಮೀಸಲಾತಿ' ಎಂಬುದೇ ಬಗೆಹರಿಯದ ಗೋಜಲಾಗಿ, ಅದರ ಹಿನ್ನೆಲೆಯಲ್ಲಿ ಸಮಾಜದೊಳಗೆ ತಿಕ್ಕಾಟಗಳು ಆರಂಭವಾದರೆ ಮೀಸಲಾತಿ ನೀತಿಗೊಂದು ಗತಿ ಕಾಣಿಸಲು ಸನ್ನಿವೇಶ ಪಕ್ವವಾಗುತ್ತದೆ ಎಂಬುದು ಅತ್ಯಂತ ಪ್ರಿಯವಾದ, ದೀರ್ಘಕಾಲೀನವಾದ ಹರಕೆ ಸಂಘಪರಿವಾರದವರದ್ದು. ಅದು ಇನ್ನೂ ಮುಂದಿನ ಕತೆ. ಈಗಲ್ಲ.

(ಲೇಖಕ: ಸಾಮಾಜಿಕ ಚಿಂತಕ)

ಮೀಸಲಾತಿ ವಿರುದ್ಧ ಪ್ರಬಲರ ಪ್ರತಿಕ್ರಾಂತಿ



• ವಿಕಾಸ್ ಆರ್. ಮೌರ್ಯ

ಭಾರತದ ಸಂಘಟಿತ ಕೈಗಾರಿಕಾ ಮತ್ತು ಸೇವಾವಲಯದಲ್ಲಿನ ಉದ್ಯೋಗಗಳ ಸಂಖ್ಯೆಯು 8.56 ಕೋಟಿ ಎಂದು 'ನ್ಯಾಷನಲ್ ಸ್ಯಾಂಪಲ್ ಸರ್ವೆ-2012'ರ ವರದಿಯಲ್ಲಿ ಇದೆ. ಅದರಲ್ಲಿ ಶೇ 70ರಷ್ಟು (6 ಕೋಟಿ) ಉದ್ಯೋಗಗಳು ಖಾಸಗಿ ಕ್ಷೇತ್ರದಲ್ಲಿದ್ದವು. ಕೇವಲ ಶೇ 30ರಷ್ಟು ಉದ್ಯೋಗಗಳು (2.56 ಕೋಟಿ) ಸಾರ್ವಜನಿಕ ಕ್ಷೇತ್ರದಲ್ಲಿದ್ದವು. ಇದರಲ್ಲಿ ಶೇ 40ರಷ್ಟು ತಾತ್ಕಾಲಿಕ ಉದ್ಯೋಗ. ಆದ್ದರಿಂದ ಮೀಸಲಾತಿ ವ್ಯಾಪ್ತಿಗೆ ಒಳಪಡುವ ಉದ್ಯೋಗಗಳ ಸಂಖ್ಯೆ 1.54 ಕೋಟಿ ಮಾತ್ರ. ಅಂದರೆ ಒಟ್ಟು 100 ಉದ್ಯೋಗಗಳಲ್ಲಿ ಮೀಸಲಾತಿ ನೀತಿಗೆ ಒಳಪಡುವುದು 18 ಉದ್ಯೋಗಗಳು ಮಾತ್ರ. ಈ 18ರಲ್ಲಿ ಶೇ 50ರಷ್ಟು (ಮೇಲ್ಜಾತಿ ಬಡವರ ಮೀಸಲಾತಿ ಶೇ 10ರಷ್ಟು ಸೇರಿಸಿಲ್ಲ) ಎಸ್ಸಿ/ಎಸ್ಟಿ/ಒಬಿಸಿಗಳಿಗೆ ಮೀಸಲಾತಿ ನೀಡಲಾಗಿದೆ. ಹಾಗಾಗಿ ಭಾರತದಲ್ಲಿ ಸೃಷ್ಟಿಯಾಗುವ 100 ಉದ್ಯೋಗಗಳಲ್ಲಿ 9ಕ್ಕೆ ಮಾತ್ರ ಮೀಸಲಾತಿ ನಿಯಮ ಅನ್ವಯವಾಗುತ್ತದೆ. ಈಗ, ನೋಟು ರದ್ದತಿ, ಕೋವಿಡ್ ಲಾಕ್‌ಡೌನ್‌ನಿಂದಾಗಿ ಎಷ್ಟು ಉದ್ಯೋಗಗಳು ನಷ್ಟವಾಗಿವೆ ಎಂಬುದನ್ನು ಊಹಿಸುವುದೂ ಕಷ್ಟ.

ಮೀಸಲಾತಿಗಾಗಿ ಬೀದಿಗಿಳಿದಿರುವ ಜಾತಿಗಳು ಈ ಮೇಲಿನ ಸಂಘಟಿತ ಕೈಗಾರಿಕಾ ಮತ್ತು ಸೇವಾವಲಯದಲ್ಲಿನ ಮೀಸಲಾತಿಯ ಹಣೆಬರಹವನ್ನು ಅರ್ಥ ಮಾಡಿಕೊಂಡೇ ಮುಂದುವರಿಯಬೇಕಿದೆ. 1990ರ ದಶಕದ ನಂತರ ಭಾರತವು ಅಪ್ಪಿಕೊಂಡ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳು ಮೀಸಲಾತಿಯ ವ್ಯಾಪ್ತಿಯನ್ನೇ ನುಂಗಿ ನೀರು ಕುಡಿದಿವೆ. ಆದಾಗ್ಯೂ ಕೃಷಿ, ಕಿರು ಮತ್ತು ಮಧ್ಯಮ ಕೈಗಾರಿಕೆ, ನರೇಗಾ ಉದ್ಯೋಗಗಳಲ್ಲಿ ಸಾರ್ವಜನಿಕ ಕ್ಷೇತ್ರದ ಪಾಲು ಹೆಚ್ಚಿದೆ. ಇದನ್ನು ಉಳಿಸಿಕೊಳ್ಳಬೇಕೆಂದರೆ ಖಾಸಗೀಕರಣವನ್ನು ತಡೆಯಬೇಕಿದೆ.

ಈ ದೇಶದ ತಳಜಾತಿಯ ಶೋಷಿತರು ಒಳಮೀಸಲು ಮತ್ತು ಖಾಸಗಿ ಕ್ಷೇತ್ರದಲ್ಲಿ ಮೀಸಲು ಬೇಕು ಎಂದು ಕಳೆದ ಮೂರು ದಶಕಗಳಿಂದ ಸತತವಾಗಿ ಹೋರಾಡುತ್ತಲೇ ಬಂದಿದ್ದಾರೆ. ಅದಕ್ಕಾಗಿ ಹಲವು ಸರ್ಕಾರಗಳು ಆಯೋಗಗಳನ್ನು ನೇಮಿಸಿ ವರದಿಯನ್ನು ಪಡೆದಿವೆ; ಅಂಕಿಅಂಶಗಳನ್ನು ಸಂಗ್ರಹಿಸಿವೆ; ಮೀಸಲಾತಿ ವರ್ಗೀಕರಣಕ್ಕಾಗಿ - ಹೆಚ್ಚಳಕ್ಕಾಗಿ ಶಿಫಾರಸು ಮಾಡಿವೆ. ಹಾಗಿದ್ದಾಗಲೂ ಶೋಷಿತರಿಗೆ ಮೀಸಲಾತಿಯನ್ನು ಖಾತ್ರಿಗೊಳಿಸಲು ಆಳುವ ಸರ್ಕಾರಗಳು ಮನಸ್ಸು ಮಾಡಿಯೇ ಇಲ್ಲ. ಆದರೆ, ಕೇಂದ್ರ ಸರ್ಕಾರವು ಬ್ರಾಹ್ಮಣರು, ಆರ್ಯವೈಶ್ಯರಂತಹ ಮೇಲ್ಜಾತಿಯಲ್ಲಿರುವ ಬಡವರಿಗೆ ಏಕಾಏಕಿ ಶೇ 10ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿಬಿಟ್ಟಿದೆ. ಆಶ್ಚರ್ಯವೆಂದರೆ ಈ ಮೇಲ್ಜಾತಿ ಬಡವರ ಜನಸಂಖ್ಯೆ ಎಷ್ಟಿದೆ, ಅವರ ಶೈಕ್ಷಣಿಕ ಮತ್ತು ಔದ್ಯೋಗಿಕ ಪ್ರಾತಿನಿಧ್ಯ ಎಷ್ಟಿದೆ, ಅವರ ಸಾಮಾಜಿಕ ಸ್ಥಾನಮಾನವೇನು ಎಂಬುದರ ಬಗ್ಗೆ ಯಾವುದೇ ಆಯೋಗವನ್ನು ರಚಿಸಲಿಲ್ಲ. ಯಾವುದೇ ಜನಗಣತಿ ಆಗಲಿಲ್ಲ. ಯಾವುದೇ ಬ್ರಾಹ್ಮಣ-ವೈಶ್ಯ ಸಂಘಟನೆಯು ಮೀಸಲಾತಿಗಾಗಿ ಬೀದಿಗಿಳಿದು ಗಮನಾರ್ಹವಾದ ಹೋರಾಟ ಮಾಡಿರಲಿಲ್ಲ. ಆದರೂ ಅವರಿಗೆ ಆರ್ಥಿಕ ಮಟ್ಟದ ಆಧಾರದಲ್ಲಿ ಮೀಸಲಾತಿ ದಕ್ಕಿಬಿಟ್ಟಿತು. ಸಾರ್ವಜನಿಕ ಕ್ಷೇತ್ರದ ನ್ಯಾಯಾಂಗ, ಉನ್ನತ ಶಿಕ್ಷಣ, ಸೆಕ್ರೆಟೇರಿಯಟ್ ಉದ್ಯೋಗಗಳಲ್ಲಿ, ಶಾಸಕಾಂಗ-ಮಂತ್ರಿಮಂಡಲಗಳಲ್ಲಿ ತಮ್ಮ ಜನಸಂಖ್ಯೆಗಿಂತಲೂ ಹೆಚ್ಚು ಪ್ರಾತಿನಿಧ್ಯ ಹೊಂದಿರುವ ಈ ಮೇಲ್ಜಾತಿಗಳ ಜನರು ₹8 ಲಕ್ಷ ವಾರ್ಷಿಕ ಆದಾಯವಿದ್ದರೂ ಬಡವರು ಎಂದು ಪರಿಗಣಿತರಾಗಿ ಮೀಸಲಾತಿಗೆ ಅರ್ಹರಾಗಿಬಿಟ್ಟರು. ಅಂದರೆ ತಿಂಗಳಿಗೆ ₹66 ಸಾವಿರ ಸಂಪಾದಿಸುವ ಕುಟುಂಬ ಬಡ ಕುಟುಂಬ! ಈ ಹಿಂದೆ ಕೇವಲ ಆರ್ಥಿಕ ಮಾನದಂಡವೊಂದೇ ಮೀಸಲಾತಿಗೆ ಪ್ರಮಾಣವಾಗಲಾರದು ಎಂದು ತೀರ್ಪಿತ್ತಿದ್ದ ಸುಪ್ರೀಂ ಕೋರ್ಟ್, ಮೇಲ್ಜಾತಿ ಬಡವರಿಗೆ ನೀಡಿರುವ ಮೀಸಲಾತಿ ಸಂವಿಧಾನಬದ್ಧವೋ ಅಲ್ಲವೋ ಎಂಬುದನ್ನು ತೀರ್ಮಾನಿಸಲು ವರ್ಷವಾದರೂ ಮನಸ್ಸು ಮಾಡಿಲ್ಲ.

ಮೀಸಲಾತಿಗಾಗಿ ಹೋರಾಟ ಮಾಡುತ್ತಿರುವ ಜಾತಿಗಳು ಈ ಕೆಳಗಿನ ಅಡೆತಡೆಗಳನ್ನು ಬಗೆಹರಿಸಿಕೊಂಡೇ ಮುಂದುವರಿಯಬೇಕಿದೆ:

1. ಶೋಷಿತರ ಮೀಸಲಾತಿ ಪ್ರಮಾಣವನ್ನು ಸುಪ್ರೀಂ ಕೋರ್ಟ್ ಶೇ 50ಕ್ಕೆ ಸೀಮಿತಗೊಳಿಸಿದೆ. ಆದರೆ, ಮೇಲ್ಜಾತಿ ಬಡವರ ಶೇ 10ರಷ್ಟು ಮೀಸಲಾತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯನ್ನು ಬೇಗ ವಿಚಾರಣೆಗೆ ತೆಗೆದುಕೊಳ್ಳದೆ ಮೌನವಾಗಿದೆ.
2. ಖಾಸಗೀಕರಣವು ಸಾರ್ವಜನಿಕ ಉದ್ಯೋಗಗಳನ್ನು ನಾಶ ಮಾಡುತ್ತಿದೆ. ಹಾಗಾಗಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಬೇಕಾಗಿದೆ. ಜೊತೆಗೆ ಖಾಸಗೀಕರಣವನ್ನು ತಡೆಯಬೇಕಿದೆ.
3. ಶಾಸಕಾಂಗದಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಜಾರಿಯಾಗಬೇಕಿದೆ. ಜೊತೆಗೆ ಅದನ್ನು ಶೇ 50ಕ್ಕೆ ಏರಿಸಬೇಕಿದೆ.
4. ಒಳಮೀಸಲಾತಿ ಜಾರಿಯಾಗಬೇಕಿದೆ. ಇದಕ್ಕಾಗಿ ಉಷಾ ಮೆಹ್ರಾ ಸಮಿತಿ ಶಿಫಾರಸಿನಂತೆ ಸಂವಿಧಾನ ತಿದ್ದುಪಡಿಯಾಗಬೇಕಿದೆ.

ಹೀಗೆ ಮನುಸ್ಮೃತಿ ಪ್ರೇರಿತ ಮೀಸಲಾತಿಯು ಭಾರತದ ಸಂವಿಧಾನ ಪ್ರೇರಿತ ಮೀಸಲಾತಿಗೆ ಪ್ರತಿಕ್ರಾಂತಿ ಒಡ್ಡುತ್ತಿರುವಾಗ ಶೋಷಿತ ಹಾಗೂ ಮೇಲ್ಮಧ್ಯಮ ಜಾತಿಗಳು ತಮ್ಮ ತಮ್ಮೊಳಗಿನ ಭಿನ್ನತೆಗಳನ್ನು ಬದಿಗಿಡಬೇಕಾದದ್ದು ಅನಿವಾರ್ಯವಾಗಿದೆ.

ಇನ್ನು ಜನಸಂಖ್ಯಾವಾರು ಮೀಸಲಾತಿಯ ಬಗ್ಗೆಯೂ ಮಾತು ಕೇಳಿಬರುತ್ತಿದೆ. ಆದರೆ, ಕಳೆದ ಸರ್ಕಾರ ಸುಮಾರು ₹162 ಕೋಟಿ ಖರ್ಚಿನಲ್ಲಿ ಸಿದ್ಧಪಡಿಸಿದ್ದ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯು 'ಜಾತಿಗಣತಿ' ಎಂದು ಪಟ್ಟಭದ್ರ ಹಿತಾಸಕ್ತಿಗಳು ಅಪಪ್ರಚಾರ ಮಾಡಿದವು. ಈಗ ವರದಿ ಸರ್ಕಾರದ ಕೈಲಿದೆ. ಅದನ್ನು ಬಹಿರಂಗಗೊಳಿಸುವ ಬಗ್ಗೆಯೂ ಹೋರಾಟಗಾರರು ಮಾತನಾಡಬೇಕಿದೆ.

ನ್ಯಾಯಯುತ ಮೀಸಲಾತಿ ದಕ್ಕಿದ ನಂತರ ಶೋಷಿತ ಜನರ ಬದುಕುವ ಮಟ್ಟ ಉತ್ತಮವಾಗಿದೆಯೇ ಎಂಬ ಇನ್ನೊಂದು ಗಂಭೀರ ಪ್ರಶ್ನೆಯೂ ಇದೆ. ಇದಕ್ಕೆ ಉತ್ತರ ಇಲ್ಲ ಎಂಬುದಾಗಿದೆ. ಏಕೆಂದರೆ ಮೀಸಲಾತಿ ಬಡತನ ನಿರ್ಮೂಲನೆ ಕಾರ್ಯಕ್ರಮವಲ್ಲ. ಅದು ದೇಶದ ಆಡಳಿತದಲ್ಲಿ ದುರ್ಬಲ ವರ್ಗಗಳಿಗೆ ಪ್ರಾತಿನಿಧ್ಯ ನೀಡುವ ಸಾಮಾಜಿಕ ನ್ಯಾಯವೇ ವಿನಹ ಸಾಮಾಜಿಕ-ಆರ್ಥಿಕ ಸಮಾನತೆ ಅಲ್ಲ. ಹಾಗಾಗಿ ಶೋಷಿತರ ಬದುಕು ಉತ್ತಮವಾಗಬೇಕೆಂದರೆ ದೇಶದ ಸಂಪತ್ತಿನಲ್ಲಿ ಜನಸಂಖ್ಯಾವಾರು ಪಾಲು ಬೇಕಾಗುತ್ತದೆ. ದೇಶದ ಜಿಡಿಪಿ ಮಾತ್ರವಲ್ಲ ದೇಶವಾಸಿಗಳ 'ತಲಾದಾಯ' ಹೆಚ್ಚಾಗಬೇಕಿದೆ. ಆದರೆ ಭಾರತವನ್ನು ಆಳುವ ಸರ್ಕಾರವೇ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ತುದಿಗಾಲಲ್ಲಿ ನಿಂತಿದೆ. ಜನರ ತೆರಿಗೆಯ ಹಣವನ್ನೂ ಕೋಟ್ಯಧಿಪತಿಗಳ ಜೇಬಿಗೆ ತುಂಬುತ್ತಿದೆ. ಆದ್ದರಿಂದಲೇ ಕೋವಿಡ್ ನಂತರದಲ್ಲಿ ಭಾರತದ ಆರ್ಥಿಕತೆಯು ಪಾತಾಳಕ್ಕೆ ಇಳಿದಿದ್ದರೂ ದೇಶದ 7 ಶತ ಕೋಟಿಪತಿಗಳು ಕೋವಿಡ್ ಸಂದರ್ಭದಲ್ಲಿ ತಮ್ಮ ಸಂಪತ್ತಿಗೆ ಹೆಚ್ಚುವರಿಯಾಗಿ ₹4.6 ಲಕ್ಷ ಕೋಟಿಯನ್ನು ಸೇರಿಸಿಕೊಂಡಿದ್ದಾರೆ. ಇದು ಹೇಗೆ ಸಾಧ್ಯ? ಇಡೀ ದೇಶವಾಸಿಗಳು ಕೋವಿಡ್ ಮತ್ತು ಲಾಕ್‌ಡೌನ್‌ಗೆ ತತ್ತರಿಸಿ ದೇಶದ ಜಿಡಿಪಿಯೊಂದಿಗೇ ಪಾತಾಳಕ್ಕಿಳಿದಿರುವಾಗ ಕೆಲವು ಉದ್ಯಮಿಗಳ ಸಂಪತ್ತು ಆಕಾಶಕ್ಕೇರುವುದರ ಅರ್ಥವೇನು? ಇದಕ್ಕೆ ಅಂಬೇಡ್ಕರರ ಮಾತಿನಲ್ಲಿಯೇ ಉತ್ತರ ಕೊಡುವುದಾದರೆ 'ಸಿರಿವಂತರ ಸಿರಿತನ ಬಡವರ ಬಡತನದಲ್ಲಿದೆ'.

ಬಡವರೊಂದಿಗೆ ದೇಶವೂ ಬಡವಾಗಿರುವಾಗ, ಸರ್ವಜನ ಸುಖಾಯ ಎಂಬುದು ಸುಳ್ಳಾಗಿರುವಾಗ, 'ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ಮಂತ್ರ ಶೋಷಿತರದ್ದಾಗಬೇಕಿದೆ. ಭಾರತದ ಸಂಪತ್ತು ಇಡೀ 137 ಕೋಟಿ ಭಾರತೀಯರದ್ದಾಗಿದೆ. ಇದನ್ನು ಕೆಲವರು ಮಾತ್ರ ಲೂಟಿ ಮಾಡಿ ಮೆರೆಯುತ್ತಿದ್ದಾರೆ. ಹಾಗಾಗಿ ಭಾರತದ ಸಂಪತ್ತಿನಲ್ಲಿಯೂ ಶೋಷಿತರಿಗೆ ಸಮಪಾಲು ಬೇಕಾಗಿದೆ. ಆದ್ದರಿಂದ ಅಂಬೇಡ್ಕರ್ ಪ್ರತಿಪಾದಿಸಿದ 'ಪ್ರಭುತ್ವ ಸಮಾಜವಾದ' ನಮ್ಮ ಗುರಿಯಾಗಬೇಕಿದೆ. ಈ ಗುರಿ ಮುಟ್ಟಲು ಯಾವುದೇ ಒಂದು ಶೋಷಿತ ಜಾತಿಯಿಂದ ಅಸಾಧ್ಯ. ಇದಕ್ಕೆ ಶೋಷಿತ ಜಾತಿಗಳ ಒಗ್ಗಟ್ಟಿನ ಹೋರಾಟ ಬೇಕು.


ಕೊನೆಯದಾಗಿ ಹೇಳಲೇಬೇಕಾದ ಮಾತೊಂದಿದೆ. ಮೀಸಲಾತಿಯು ಶೋಷಿತರಿಗೆ ಸಂವಿಧಾನ ಬದ್ಧವಾಗಿ ಸಿಗಲೇಬೇಕಾದ ಸೌಲಭ್ಯ. ಆದರೆ ಮೀಸಲಾತಿ ಒಂದೇ ಶೋಷಿತರ ಬದುಕನ್ನು ಹಸನಾಗಿಸಲಾರದು ಎಂಬ ಎಚ್ಚರ ನಮ್ಮಲ್ಲಿರಬೇಕಿದೆ.

(ಲೇಖಕ: ದಲಿತ ಸಂಘರ್ಷ ಸಮಿತಿ ಕಾರ್ಯಕರ್ತ)

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತೈಲ ಬೆಲೆ ಏರಿಕೆ ಬಗ್ಗೆ ದೇಶದಲ್ಲಿ ಈಗ ಭಾರಿ ಚರ್ಚೆಗಳು ನಡೆಯುತ್ತಿವೆ. ಪ್ರತಿಪಕ್ಷಗಳು ಕೇಂದ್ರದ ವಿರುದ್ಧ ಮುಗಿಬಿದ್ದಿವೆ. ಆದರೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ದರ ಕಡಿಮೆಯಿದ್ದು, ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ದರ ಅಧಿಕವಾಗಿದೆ ಎಂಬುದಾಗಿ ತಮಿಳುನಾಡು ಬಿಜೆಪಿ ಘಟಕದ ವಕ್ತಾರ ಎಸ್.ಜಿ. ಸೂರ್ಯ ಅವರು ಟ್ವೀಟ್ ಮಾಡಿದ್ದಾರೆ. ಇದನ್ನು ಸಾವಿರಾರು ಜನರು ಹಂಚಿಕೊಂಡಿದ್ದಾರೆ.



ಸೂರ್ಯ ಅವರು ಮಾಡಿರುವ ಟ್ವೀಟ್‌ನಲ್ಲಿರುವ ಅಂಶಗಳನ್ನು ಆಲ್ಟ್ ನ್ಯೂಸ್ ಪರಾಮರ್ಶೆ ನಡೆಸಿದೆ. ಟ್ವೀಟ್‌ನಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ತೋರಿಸುವ ಪಟ್ಟಿಯಲ್ಲಿ ಆಯ್ದ ರಾಜ್ಯಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಅತಿಹೆಚ್ಚು ದರ ಇರುವ ಬಿಜೆಪಿ ಆಡಳಿತದ ಕರ್ನಾಟಕ ಹಾಗೂ ಮಧ್ಯಪ್ರದೇಶಗಳನ್ನು ಪಟ್ಟಿಯಲ್ಲಿ ತೋರಿಸಿಲ್ಲ. ಹಾಗೆಯೇ ಬಿಜೆಪಿಯೇತರ ಆಡಳಿತ ಇರುವ ಆಂಧ್ರ ಪ್ರದೇಶ, ಪಂಜಾಬ್‌ಗಳಲ್ಲಿ ದರ ಹೆಚ್ಚಿದ್ದರೂ ಆ ರಾಜ್ಯಗಳ ಹೆಸರು ನಮೂದಿಸಿಲ್ಲ. ಹೀಗಾಗಿ ಇದು ದಾರಿ ತಪ್ಪಿಸುವ ಟ್ವೀಟ್ ಎಂದು ಆಲ್ಟ್‌ನ್ಯೂಸ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಪುಷ್ಕರಿಣಿಯಲ್ಲಿ ಇಲ್ಲದ ಮಣಿ

ಮಹೋಷಧಕುಮಾರನ ಬುದ್ಧಿಮತ್ತೆಯಿಂದ ರಾಜ ಎಷ್ಟು ಪ್ರಭಾವಿತನಾಗಿದ್ದನೆಂದರೆ ಆತ ಶ್ರೇಷ್ಠಿಯನ್ನು ಕರೆದು, 'ಶ್ರೇಷ್ಠಿ, ಇನ್ನು ಮೇಲೆ ಮಹೋಷಧಕುಮಾರ ನಿನ್ನ ಪುತ್ರನಲ್ಲ, ನನ್ನ ಪುತ್ರ. ಅವನನ್ನು ಬಿಟ್ಟುಕೊಡು' ಎಂದು ಕೇಳಿದ. ಶ್ರೇಷ್ಠಿ, 'ಪ್ರಭೂ, ನನ್ನ ಮಗ ಇನ್ನೂ ಬಾಲಕ. ಅವನ ಬಾಯಿಯಿಂದ ಇನ್ನೂ ತಾಯಿಯ ಹಾಲಿನ ಸುಗಂಧ ಬರುತ್ತಿದೆ' ಎಂದ. ರಾಜ ಕೇಳಲಾರ, 'ಈ ದಿನದಿಂದ ಕುಮಾರ ನನ್ನ ಮಗ. ಅವನ ಮೇಲಿನ ಮಮತೆಯನ್ನು ಮರೆತುಬಿಡು. ಇನ್ನು ಮೇಲೆ ಅವನ ವಾಸ ಅರಮನೆಯಲ್ಲೇ' ಎಂದು ಹೇಳಿ ಅಲ್ಲಿಯೇ ಉಳಿಸಿಕೊಂಡ.

ನಿತ್ಯವೂ ಕುಮಾರನೊಂದಿಗೆ ಮಾತು, ಚರ್ಚೆ ರಾಜನ ಮನಸ್ಸನ್ನೂ ತುಂಬಿತು. ಅಂತೆಯೇ ಅದು ಅಮಾತ್ಯರ ಹೃದಯದಲ್ಲಿ ಕಹಿಯನ್ನು ತುಂಬಿತು. ಒಂದು ದಿನ ಅರಮನೆಯ ಸೇವಕರು ಬಂದು ರಾಜನಿಗೊಂದು ವಿಷಯವನ್ನು ತಿಳಿಸಿದರು. ನಗರದ ದಕ್ಷಿಣದ್ವಾರದ ಬಳಿಯಿದ್ದ ಪುಷ್ಕರಿಣಿಯ ತಳದಲ್ಲಿ ಒಂದು ಅಪೂರ್ವವಾದ ಮಣಿ ಹೊಳೆಯುತ್ತಿದೆ. ವಿಚಿತ್ರವೆಂದರೆ ಅದು ಕೇವಲ ಬೆಳಿಗ್ಗೆ ಸೂರ್ಯೋದಯವಾದ ಎರಡು ತಾಸು ಮಾತ್ರ ಇರುತ್ತದೆ. ನಂತರ ಮಾಯವಾಗುತ್ತದೆ. ಅದನ್ನು ತಿಳಿದವರಿಂದ ಪರೀಕ್ಷಿಸಬೇಕು. ರಾಜ ತನ್ನ ಪ್ರಧಾನ ಅಮಾತ್ಯನಾದ ಸೆನಕನಿಗೆ ಅದನ್ನು ಪರೀಕ್ಷಿಸಲು ಹೇಳಿದ. ಆತ ಬೆಳಿಗ್ಗೆ ಹೋಗಿ ನೋಡಲಾಗಿ ತಳದಲ್ಲಿ ಮಣಿ ಹೊಳೆಯುವುದು ಕಂಡಿತು. ತಕ್ಷಣವೇ ಆತ ನೂರಾರು ಜನ ಸೇವಕರನ್ನು ಕರೆದು, ಅವರನ್ನು ತಳಕ್ಕಿಳಿಸಿ ಶೋಧಿಸಲು ಹೇಳಿದ. ಅವರು ಇಡೀ ಪುಷ್ಕರಿಣಿಯ ತಳವನ್ನು ಕಿತ್ತು ಹಾಕಿದರು, ಕಸ, ಕೆಸರನ್ನು ಎತ್ತಿ ಹಾಕಿದರು. ಕಸದ ಪ್ರತಿಯೊಂದು ಕಣವನ್ನು ತೊಳೆ ತೊಳೆದು ನೋಡಿದರು. ಆದರೆ ಮಣಿ ಸಿಗಲಿಲ್ಲ. ಮರುದಿನ ಮತ್ತೆ ನೂರು ಜನ ಅದೇ ಕಾರ್ಯವನ್ನು ಪುನಃ ಮಾಡಿದರು. ಪುಷ್ಕರಿಣಿಯ ತಳ ಕನ್ನಡಿಯಂತೆ ಶುದ್ಧವಾಯಿತೇ ವಿನಃ ಮಣಿ ಸಿಗಲಿಲ್ಲ. ಸೆನಕನಿಗೆ ಆಶ್ಚರ್ಯ! ಮರುದಿನ ಬೆಳಿಗ್ಗೆ ಮತ್ತೆ ಮಣಿ ತಳದಲ್ಲಿ ಹೊಳೆಯುತ್ತಿದೆ! ಆದರೆ ಬಿಸಿಲು ಏರಿದಂತೆ ಅದು ಮಾಯವಾಗುತ್ತದೆ. ಅವನಿಗೆ ತಲೆ ಕೆಟ್ಟು ಹೋಯಿತು.

ಮರುದಿನ ಮಹೋಷಧಕುಮಾರ ರಾಜನನ್ನು ಕರೆದುಕೊಂಡು ಪುಷ್ಕರಿಣಿಗೆ ಹೋದ. ಸೆನಕ ಪಂಡಿತ ಇವನನ್ನು ಪರೀಕ್ಷೆ ಮಾಡಲು ಮಣಿಯನ್ನು ತಳದಲ್ಲಿ ತೋರಿಸಿ, ಮೇಲೆ ತರುವ ಉಪಾಯವನ್ನು ಕೇಳಿದ. ಕುಮಾರ ಪುಷ್ಕರಿಣಿಯ ತಡಿಯಲ್ಲಿ ಕುಳಿತು, ಏಕಾಗ್ರತೆಯಿಂದ ಮಣಿಯನ್ನೇ ನೋಡುತ್ತ ಕುಳಿತ. ಸ್ವಲ್ಪ ಸಮಯದ ಮೇಲೆ ಮಣಿ ಮಾಯವಾಯಿತು. ಕುಮಾರ ನಕ್ಕು, ಮೇಲೆ ಎಲ್ಲೆಡೆ ನೋಡಿ ಹೇಳಿದ, 'ಪ್ರಭೂ, ಮಣಿ ಪುಷ್ಕರಿಣಿಯಲ್ಲಿಲ್ಲ. ಈ ಬದಿಯಿರುವ ತಾಳೆಯ ಮರದ ಮೇಲೆ ಕಾಗೆಯ ಗೂಡಿನಲ್ಲಿದೆ. ಸೇವಕರನ್ನು ಮರ ಹತ್ತಲು ಹೇಳಿ, ಮಣಿಯನ್ನು ತರಿಸಿ' ಎಂದ. ಅವರು ಹಾಗೆ ಮಾಡಲಾಗಿ ಮಣಿ ದೊರೆಯಿತು. ನಿನಗೆ ಅದು ಹೇಗೆ ತಿಳಿಯಿತು ಎಂದು ಕೇಳಿದಾಗ, 'ಮಣಿ ಬೆಳಿಗ್ಗೆ ಹೊಳೆದು ನಂತರ ಮರೆಯಾದರೆ ಅದು ಪ್ರತಿಫಲನವೇ ಇರಬೇಕು. ಇಲ್ಲವಾದರೆ ತಳದಲ್ಲಿ ಹುಡುಕಿಸಿದಾಗ ಸಿಗಬೇಕಿತ್ತಲ್ಲವೇ?' ಎಂದು ನಕ್ಕ.

ಪಂಡಿತನೆಂದರೆ ಮಹೋಷಧಕುಮಾರನಂತಿರಬೇಕು ಎಂದು ಎಲ್ಲರೂ ಅವನನ್ನು ಕೊಂಡಾಡಿದರು. ಇದ್ದದ್ದನ್ನು ಕಾಣುವುದು ದೃಷ್ಟಿ, ಕಾಣದಿದ್ದನ್ನು ತಿಳುವಳಿಕೆಯಿಂದ, ಅರಿತುಕೊಳ್ಳುವುದು ಜ್ಞಾನ.

ದಿನ ಭವಿಷ್ಯ

ಬುಧವಾರ 3 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಶತಭಿಷ ಚತುರ್ಥಿ ಗಂ. 0-13 (ಬೆ. 6-46) ಉಪರಿ ಪಂಚಮೀ ಗಂ. 54-4 (ರಾ. 4-24) ಬುಧವಾರ ನಿತ್ಯ ನಕ್ಷತ್ರ ಚಿತ್ತೆ ಗಂ 1-14 (ಬೆ. 7-10) ಉಪರಿ ಸ್ವಾತಿ ಗಂ. 55-52 (ಬೆ.ಝಾ. 5-31) ವೃದ್ಧಿ ನಾಮ ಯೋಗ ಗಂ 2-20 ಉಪರಿ ಧ್ರುವ ನಾಮ ಯೋಗ ಗಂ. 52-13 ಬಾಲವ ಕರಣ ಗಂ 0-13 ಉಪರಿ ಕಲವ ಕರಣ ಗಂ. 27-2 ವಿಷ. ಗಂ. 14-16 ಅಮೃತ ಗಂ. 36-37: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-39 ಸೂರ್ಯಾಸ್ತ: 6-25

ಮೇಷ: ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಲಿದ್ದೀರಿ. ಕಾರ್ಯನಿಮಿತ್ತ ರಾಜಕಾರಣಿಗಳೊಂದಿಗೆ ಚರ್ಚಿಸಿ ಮಹತ್ತರ ನಿರ್ಣಯವೊಂದನ್ನು ಕೈಗೊಳ್ಳುವ ಸಾಧ್ಯತೆ. ಮನೆಯಲ್ಲಿ ಸಂಭ್ರಮದ ವಾತಾವರಣ.

ವೃಷಭ: ಶೃಂಗಾರ ಸಾಮಗ್ರಿಗಳು, ಸೌಂದರ್ಯವರ್ಧಕಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ. ನೌಕರಿಯಲ್ಲಿ ಬಡ್ತಿಯಿಂದಾಗಿ ಉತ್ತಮ ಸ್ಥಾನಮಾನ ಆದಾಯ ಲಭಿಸಲಿದೆ. ಉತ್ತಮ ಆರೋಗ್ಯ. ಜನಮನ್ನಣೆಗೆ ಭಾಜನರಾಗಲಿದ್ದೀರಿ.

ಮಿಥುನ: ಸಹಕಾರ ಸಂಘ ಮುಂತಾದ ಸಾರ್ವಜನಿಕ ಕ್ಷೇತ್ರಗಳಲ್ಲಿ ಉತ್ತಮ ಹುದ್ದೆಯನ್ನು ಹೊಂದುವಲ್ಲಿ ನಿಮ್ಮ ಕೆಲಸಗಳು ನೆರವಾಗಲಿವೆ. ಮನೆಯಲ್ಲಿ ಹಬ್ಬದ ವಾತಾವರಣ. ಕಾರ್ಯ ಸಾಧನೆಗಾಗಿ ದೇವೀ ಆರಾಧನೆ ಮಾಡಿ.

ಕರ್ಕಾಟಕ: ಸಂಶೋಧನಾ ಕಾರ್ಯಗಳಲ್ಲಿ ತೊಡಗಿದವರಿಗೆ ಹೊಸ ಸಂಶೋಧನೆಗೆ ಆರ್ಥಿಕ ಸಹಕಾರದ ಕೊರತೆ ಎದುರಾದೀತು. ಕೃಷಿ ಕೆಲಸಗಳು ನಿರ್ವಿಘ್ನವಾಗಿ ನಡೆಯಲಿದೆ.

ಸಿಂಹ: ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಸಾಧ್ಯತೆ. ವಿವಾಹದ ವಿಷಯದಲ್ಲಿ ನೇರ ಮಾತುಕತೆಯಿಂದಾಗಿ ಯಶಸ್ವಿಯಾಗುವಿರಿ. ವಿದ್ಯಾರ್ಥಿಗಳಿಗೆ ಶುಭ. ವೈದ್ಯರಿಗೆ ಹೆಚ್ಚಿನ ಆದಾಯ.

ಕನ್ಯಾ: ಹೊಸ ಆದಾಯ ಮೂಲವನ್ನು ಕಂಡುಕೊಳ್ಳುವಿರಿ. ಕಲಾವಿದರು, ನಟರು, ಸಂಗೀತಗಾರರಿಗೆ ಉತ್ತಮ ದಿನವಾಗಿದ್ದು ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯಾಗಲಿದೆ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ.

ತುಲಾ: ರಕ್ಷಣಾ ಕಾರ್ಯದಲ್ಲಿ ತೊಡಗಿದವರಿಗೆ ತೊಂದರೆಗಳು ಎದುರಾಗುವ ಸಾಧ್ಯತೆ. ಸತ್ಕಾರ ಸಮಾರಂಭಗಳಲ್ಲಿ ಭಾಗಿಯಾಗುವಿರಿ. ಉತ್ತಮ ಆರೋಗ್ಯ ನಿಮ್ಮದಾಗಲಿದೆ.

ವೃಶ್ಚಿಕ: ರಾಜಕಾರಣಿಗಳಿಗೆ, ಜನಪ್ರತಿನಿಧಿಗಳಿಗೆ ವಿಶೇಷ ಗೌರವ ಮನ್ನಣೆ. ಮಾತುಗಳಿಗೆ ಮನ್ನಣೆ ಹೊಂದುವಿರಿ. ಸಹೋದ್ಯೋಗಿಗಳಿಂದ ಉತ್ತಮ ಸಹಕಾರದಿಂದಾಗಿ ಕಾರ್ಯಬಾಹುಳ್ಯದ ನಡುವೆಯೂ ನೆಮ್ಮದಿ.

ಧನು: ಗುತ್ತಿಗೆ ವ್ಯವಹಾರದಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ಆದಾಯ. ರಾಜಕಾರಣಿಗಳ ಮಾತಿಗೆ ಮರುಳಾಗುವ ಸಾಧ್ಯತೆ. ಹಿತಶತ್ರುಗಳ ಭರವಸೆಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮನೆಯಲ್ಲಿ ಸಂತಸದ ವಾತಾವರಣ.

ಮಕರ: ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ಗೌರವಾದರಗಳು ಲಭಿಸಲಿದೆ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ದೊರೆಯುವುದು. ಪ್ರಶಸ್ತಿ ಫಲಕಗಳಿಗೆ ಭಾಜನರಾಗುವ ಸಾಧ್ಯತೆ.

ಕುಂಭ: ಆದಾಯ-ಖರ್ಚುಗಳ ಬಗ್ಗೆ ಗಮನ ಅಗತ್ಯ. ಮಿತವಾದ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ. ಸಂಸಾರದಲ್ಲಿ ನೆಮ್ಮದಿ. ವಿಶೇಷ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಲಿದ್ದೀರಿ.

ಮೀನ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಮಹಿಳೆಯರಿಗೆ ಧಾರ್ಮಿಕ ಕಾರ್ಯಗಳಲ್ಲಿ ಬಿಡುವಿಲ್ಲದ ಕೆಲಸ. ಸಂಪಾದನೆಯಲ್ಲಿ ಏರುಮುಖವನ್ನು ಕಾಣುವಿರಿ. ವಾದವಿವಾದಗಳು ಬಗೆಹರಿದು ನಿರಾಳತೆ.


ನಿಮ್ಮ ಜನ್ಮದಿನ 3-ಮಾರ್ಚ್ ಈ ದಿನ ಅತ್ಯಂತ ಶುಭಕರ. ಸಮಾರಂಭಗಳಲ್ಲಿ ಗಣ್ಯವ್ಯಕ್ತಿಗಳಾಗಿ ವಿಜೃಂಭಿಸುವ ಅವಕಾಶಗಳು ಒದಗಿಬರಲಿವೆ. ಮಕ್ಕಳ ಪ್ರಗತಿಯಿಂದಾಗಿ ನೆಮ್ಮದಿ. ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುವವರಿಗೆ ಅನುಕೂಲ. ಕೃಷಿಕರು ಉತ್ತಮ ಫಸಲನ್ನು ನಿರೀಕ್ಷಿಸಬಹುದಾದ ವರ್ಷವಾಗಿರುವುದು.

ಪದಬಂಧ 4525

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಈತ ಅಧಿಕ ಪ್ರಸಂಗಿ! (4)
5.ಇನ್ನೂ ಮರಿ ಈ ಹೆಣ್ಣು ದುಂಬಿ (4)
6.ಗುಗ್ಗುರಿ ತಿನ್ನುವತ್ತಲೇ ಲಕ್ಷ್ಯ! (2)
7.ಗಿರಿಯ ಹತ್ತಿರವೇ ಸೆರೆ ಹಿಡಿಯುವುದು! (4)
10.ಬಿರುಸಾದ ಮಾತಿದು (4)
12.ಪಕ್ಷದ ಆರನೆಯ ದಿನ (2)
14.ದಾಸಿ ತೋರುತ್ತಿರುವ ಅಲಕ್ಷ್ಯ (4)
15.ಸೊಂಟದಲ್ಲಿರುವ ಉಡಿದಾರ (4)

ಮೇಲಿಂದ ಕೆಳಕ್ಕೆ
1.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2.ಹೂವಿನಲ್ಲಿರುವ ಸಿಹಿ ರಸ (4)
3.ಸಹಾಯ ಮಾಡುವವನು (4)
4.ತೂರಿಕೊಂಡು ಬಂದು ನಡೆಸಿದ ಒಳಸಂಚು (3)
6.ಸಣ್ಣ ಬೆಟ್ಟ ಇಲ್ಲಿದೆ (2)
8.ಗೀಟು ಹಾಕಿದಡೆಯಲ್ಲಿನ ಹೊಳಪಿನ ಲೇಪನ (3)
9.ಉತ್ಪತ್ತಿ ಅಥವ ಹುಟ್ಟು ಎಂದರೂ ಸರಿ (2)
10.ಕೈಯಲ್ಲಿರುವ ಪ್ರಚಾರದ ಚೀಟಿ (4)
11.ನ್ಯಾಯಾಲಯದಲ್ಲಿ ತನ್ನ ಕಡೆಗೆ ತೀರ್ಪು ಪಡೆದ ವ್ಯಕ್ತಿ (4)
12.ಹೆಂಡತಿ ಸೋದರಿಯ ಗಂಡ (3)
13.ಘನವಾಗಿ ಬಂದಿರುವ ಹಿರಿಮೆ (3)



4524ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದೇಶ 3.ಶರತ್ಕಾಲ 5.ರಸನ 7.ದಶಮಾಂಶ 9.ಸದಾಚಾರ 11.ಮೂಷಿಕ 14.ಪ್ರತೀಹಾರ 15.ತಿಕ್ಕಲು

ಮೇಲಿಂದ ಕೆಳಕ್ಕೆ: 1.ವಿಧುರ 2.ಶಮನ 3.ಶಬ್ದಕೋಶ 4.ಲಡಿ 6.ಸಮಂಜಸ 7.ದಡಾರ 8.ಶತಾಯುಷಿ 10.ಚಾಡಿಕೋರ 11.ಮೂಗುತಿ 12.ಕಡಲು 13.ವಿಪ್ರ

ಸುಡೊಕು 4911

3		2	1		4		6	7
				8				
7	9		6		2	5		4
2					3			5
		6		4		2	9	
			9					1
	4	1	2				8	
9				7	8			
	6			5		4		9


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4910 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,761
ಇಂದಿನ ಅಂತ್ಯ	14,919
▲	158
ದಿನದ ಗರಿಷ್ಠ	14,959

ವಿನಿಮಯ ದರ

$ ಡಾಲರ್	73.37
£ ಪೌಂಡ್	101.75
€ ಯುರೊ	88.10
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1512 (1530)
ಸೋಯಾ (ರಿಫೈನ್ಡ್)	₹1190 (1210)
ಸೂರ್ಯಕಾಂತಿ (ರಿಫೈನ್ಡ್)	₹1600 (1580)
ಪಾಮೋಲಿನ್	₹1175 (1182)

ವಾಹನ, ಐ.ಟಿ. ಷೇರುಗಳ ಗಳಿಕೆ

ಮುಂಬೈ (ಪಿಟಿಐ): ದೇಶದ ಷೇರು-ಪೇಟೆಗಳಲ್ಲಿ ಸತತ ಎರಡನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು.

ವಾಹನ ಮತ್ತು ಐ.ಟಿ. ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾಗಿದ್ದರಿಂದ ಮುಂಬೈ ಷೇರುಪೇಟೆಯು (ಬಿಎಸ್‌ಇ) 50 ಸಾವಿರದ ಗಡಿ ದಾಟಿತು.

ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 447 ಅಂಶಗಳಷ್ಟು ಏರಿಕೆ ಕಂಡು 50,296 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 157 ಅಂಶ ಹೆಚ್ಚಾಗಿ 14,919 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಬಿಎಸ್‌ಇ ಸ್ಮಾಲ್, ಮಿಡ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಕ್ರಮವಾಗಿ ಶೇ 1.60, ಶೇ 1.55 ಮತ್ತು ಶೇ 1.11ರಷ್ಟು ಏರಿಕೆ ಕಂಡಿವೆ.

ಮೂರನೇ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಸಕಾರಾತ್ಮಕ ಹಾದಿಗೆ ಬಂದಿರುವುದು ಹೂಡಿಕೆ ಚಟುವಟಿಕೆಯ ಮೇಲೆ ಪ್ರಭಾವ ಬೀರಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ಫೆಬ್ರುವರಿಯಲ್ಲಿ ವಾಹನ ಮಾರಾಟ ಉತ್ತಮವಾಗಿರುವುದು ವಾಹನ ಕಂಪನಿಗಳ ಷೇರುಗಳಲ್ಲಿ ಖರೀದಿ ಭರಾಟೆ ಹೆಚ್ಚಿಸಿತು. ಸೂಚ್ಯಂಕದ ಏರಿಕೆಗೆ ಐ.ಟಿ. ಷೇರುಗಳ ಗಳಿಕೆಯು ಮುಖ್ಯ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ವೃದ್ಧಿ: ಡಾಲರ್ ಎದುರು ರೂಪಾಯಿ ಮೌಲ್ಯ 18 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 73.37ರಂತೆ ವಿನಿಮಯಗೊಂಡಿತು.

ಸ್ಪೆಕ್ಟ್ರಂ ಹರಾಜು: ಜಿಯೊ ಪ್ರಮುಖ ಖರೀದಿದಾರ

ಪ್ರಜಾವಾಣಿ ವಾರ್ತೆ

ನವದೆಹಲಿ : ಐದು ವರ್ಷಗಳಲ್ಲಿ ನಡೆದ ಮೊದಲ ಟೆಲಿಕಾಂ ಸ್ಪೆಕ್ಟ್ರಂ ಹರಾಜು ಮಂಗಳವಾರ ಕೊನೆಗೊಂಡಿದ್ದು,₹ 77,815 ಕೋಟಿ ಮೌಲ್ಯದ ರೇಡಿಯೊ ತರಂಗಾಂತರವನ್ನು ವಿವಿಧ ಟೆಲಿಕಾಂ ಸಂಸ್ಥೆಗಳು ಖರೀದಿಸಿವೆ. ಇದರಲ್ಲಿ ಹೆಚ್ಚಿನದ್ದನ್ನು ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಜಿಯೊ ತನ್ನದಾಗಿಸಿಕೊಂಡಿದೆ.

ದೂರಸಂಪರ್ಕ ಇಲಾಖೆಯು ₹ 4 ಲಕ್ಷ ಕೋಟಿ ಮೌಲ್ಯದ 2308.80 ಮೆಗಾಹರ್ಟ್ಸ್ ಸ್ಪೆಕ್ಟ್ರಂ ಹರಾಜಿಗೆ ಕ್ರಮ ಕೈಗೊಂಡಿತ್ತು. ಆದರೆ ದೂರಸಂಪರ್ಕ ಸೇವಾ ಕಂಪನಿಗಳು ₹ 77,814.80 ಕೋಟಿ ಮೌಲ್ಯದ 855.60 ಮೆಗಾಹರ್ಟ್ಸ್ ಸ್ಪೆಕ್ಟ್ರಂ ಅನ್ನು ಪಡೆದುಕೊಂಡಿವೆ.

₹ 57,122.65 ಕೋಟಿ ಮೌಲ್ಯದ ಒಟ್ಟು 488.35 ಮೆಗಾಹರ್ಟ್ಸ್ ಸ್ಪೆಕ್ಟ್ರಂ ಅನ್ನು ತನ್ನದಾಗಿಸಿಕೊಳ್ಳುವ ಮೂಲಕ ರಿಲಯನ್ಸ್ ಜಿಯೊ ಕಂಪನಿ ಅತಿದೊಡ್ಡ ಬಿಡ್ಡುದಾರನಾಗಿ ಹೊರಹೊಮ್ಮಿದೆ.

ನಂತರದ ಸ್ಥಾನದಲ್ಲಿ 355.45 ಮೆಗಾಹರ್ಟ್ಸ್ (₹18,698.75 ಕೋಟಿ) ತನ್ನದಾಗಿಸಿಕೊಂಡ ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ 11.80 ಮೆಗಾಹರ್ಟ್ಸ್ (₹1,993.40 ಕೋಟಿ) ಇದೆ.

ಈ ಬಾರಿ ಹರಾಜಿನಲ್ಲಿ ಏರ್‌ಟೆಲ್, ವೊಡಾಫೋನ್ ಐಡಿಯಾ ಮತ್ತು ರಿಲಯನ್ಸ್ ಜಿಯೊ ಕಂಪನಿಗಳು ಮಾತ್ರ ಪಾಲ್ಗೊಂಡಿದ್ದವು. 2016ರ ಹರಾಜಿನಲ್ಲಿ ಏಳು ಬಿಡ್ಡುದಾರರು ಭಾಗವಹಿಸಿದ್ದರು.

ರಫ್ತು ಶೇ 0.25 ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಎರಡು ತಿಂಗಳಿನಿಂದ ಸಕಾರಾತ್ಮಕ ಹಾದಿಯಲ್ಲಿದ್ದ ದೇಶದ ರಫ್ತು ವಹಿವಾಟು ಫೆಬ್ರುವರಿಯಲ್ಲಿ ಅಲ್ಪ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ ಫೆಬ್ರುವರಿಯಲ್ಲಿ ದೇಶದ ರಫ್ತು ವಹಿವಾಟು ಶೇ 0.25ರಷ್ಟು ಇಳಿಕೆ ಆಗಿದ್ದು, ಮೌಲ್ಯವು ₹ 2.01 ಲಕ್ಷ ಕೋಟಿಗಳಷ್ಟಾಗಿದೆ.

ಆಮದು ವಹಿವಾಟು ಶೇ 6.98ರಷ್ಟು ಹೆಚ್ಚಾಗಿದ್ದು ₹ 2.96 ಲಕ್ಷ ಕೋಟಿಗಳಿಗೆ ತಲುಪಿದೆ. ವ್ಯಾಪಾರ ಕೊರತೆ ಅಂತರವು ₹ 74,168 ಕೋಟಿಗಳಿಂದ ₹ 94,024 ಕೋಟಿಗಳಿಗೆ ಏರಿಕೆಯಾಗಿದೆ.

ಫೆಬ್ರುವರಿಯಲ್ಲಿ ತೈಲ ಆಮದು ಶೇ 16.63ರಷ್ಟು ಕಡಿಮೆಯಾಗಿದೆ. ಚಿನ್ನದ ಆಮದು ಮೌಲ್ಯವು ₹ 21,900 ಕೋಟಿಗಳಿಗೆ ತಲುಪಿದೆ ಎಂದು ಸರ್ಕಾರ ತಿಳಿಸಿದೆ.

ಅಂಬಾನಿ, ಅದಾನಿ ಸಂಪತ್ತು ಹೆಚ್ಚಳ

ದೇಶದ ಸಿರಿವಂತರ ಪಟ್ಟಿ: 40 ಮಂದಿ ಹೊಸಬರು

ಮುಂಬೈ (ಪಿಟಿಐ): 2020ರ ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ದೇಶದ ಸಿರಿವಂತರ ಪಟ್ಟಿಗೆ 40 ಮಂದಿ ಹೊಸಬರು ಸೇರ್ಪಡೆಯಾಗಿದ್ದಾರೆ. ಇದರಿಂದ ಒಟ್ಟಾರೆ ಸಿರಿವಂತರ ಸಂಖ್ಯೆ 177ಕ್ಕೆ ಏರಿಕೆಯಾಗಿದೆ.

ಹುರುನ್ ಗ್ಲೋಬಲ್ ಸಂಸ್ಥೆಯು ಬಿಡುಗಡೆ ಮಾಡಿರುವ 2020ರ ಸಿರಿವಂತರ ಪಟ್ಟಿಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಮೊದಲ ಸ್ಥಾನದಲ್ಲಿದ್ದಾರೆ. ಜಾಗತಿಕವಾಗಿ ಅವರು ಎಂಟನೇ ಸ್ಥಾನ ಪಡೆದಿದ್ದಾರೆ. ಅವರ ಸಂಪತ್ತು ಶೇ 24ರಷ್ಟು ಹೆಚ್ಚಾಗಿದ್ದು, ಒಟ್ಟಾರೆ ಸಂಪತ್ತು ಮೌಲ್ಯ ₹ 6.05 ಲಕ್ಷ ಕೋಟಿಗಳಷ್ಟಿದೆ.


ಅಂಬಾನಿ

ಗೌತಮ್ ಅದಾನಿ ಅವರ ಸಂಪತ್ತು ಎರಡು ಪಟ್ಟು ಹೆಚ್ಚಾಗಿದ್ದು, ₹ 2.33 ಲಕ್ಷ ಕೋಟಿಗಳಿಗೆ ತಲುಪಿದೆ. ದೇಶದ ಸಿರಿವಂತ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ಜಾಗತಿಕವಾಗಿ 48ನೇ ಸ್ಥಾನ ಪಡೆದುಕೊಂಡಿದ್ದಾರೆ. ಎಚ್‌ಸಿಎಲ್ ಕಂಪನಿಯ ಶಿವ ನಾಡಾರ್ ಅವರು ದೇಶದ 3ನೇ ಸಿರಿವಂತರಾಗಿದ್ದಾರೆ.

ಪತಂಜಲಿ ಆಯುರ್ವೇದ ಸಂಸ್ಥೆಯ ಆಚಾರ್ಯ ಬಾಲಕೃಷ್ಣ ಅವರ ಸಂಪತ್ತಿನಲ್ಲಿ ಶೇ 32ರಷ್ಟು ಇಳಿಕೆ ಆಗಿದೆ.

ಸಿರಿವಂತ ಮಹಿಳೆಯರ ಪಟ್ಟಿಯಲ್ಲಿ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಅವರು ಮೊದಲ ಸ್ಥಾನದಲ್ಲಿದ್ದಾರೆ. ಗೊದ್ರೇಜ್‌ನ ಸ್ಮಿತಾ ವಿ. ಕೃಷ್ಣ ಅವರು ಎರಡನೇ ಹಾಗೂ ಲುಪಿನ್ ಕಂಪನಿಯ ಮಂಜು ಗುಪ್ತಾ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ಜಾಗತಿಕ ಮಟ್ಟದಲ್ಲಿ ಟೆಸ್ಲಾ ಕಂಪನಿಯ ಸಿಇಒ ಎಲಾನ್ ಮಸ್ಕ್ ಅವರು ಮೊದಲ ಸ್ಥಾನದಲಿದ್ದು, ಅಮೆಜಾನ್‌ನ ಜೆಫ್ ಬೆಜಾಸ್ ಎರಡನೇ ಸ್ಥಾನದಲ್ಲಿದ್ದಾರೆ.

ನಿಧನ



ಜನನ: 5.10.1947 – ಮರಣ : 01.03.2021

ಶ್ರೀ ಎಂ.ಎಸ್ ರಾಮಣ್ಣ, ಬಿ.ಎಸ್ಸಿ.

ಅಧ್ಯಕ್ಷರು, ಬಿಬಿಎಂಪಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ನಿರ್ದೇಶಕರು, ನಾಗಿನಿ ಕೋ-ಆಪ್ ಸೊಸೈಟಿ ಲಿ.

ಅಂತಿಮ ದರ್ಶನ - ದಿನಾಂಕ : 03.03.2021, ಬೆಳಿಗ್ಗೆ 9 ರಿಂದ 11 ಗಂಟೆಗೆ
ಸ್ಥಳ : ನಂ.35, 11ನೇ ಕ್ರಾಸ್, ಪ್ರಶಾಂತ ನಗರ, ಬೆಂಗಳೂರು–79

ಅಂತಿಮ ಸಂಸ್ಕಾರ- ದಿನಾಂಕ : 03.03.2021, ಸಂಜೆ 4.00 ಗಂಟೆಗೆ
ಸ್ಥಳ : ಮಾದಿಹಳ್ಳಿ ಪಾಳ್ಯ, ಹೊಳಲಗುಂದ, ಅಮೃತೂರು, ಕುಣಿಗಲ್ ತಾಲ್ಲೂಕು

ಅ. ದೇವೇಗೌಡ, ಶಾಸಕರು.
ಕರ್ನಾಟಕ ವಿಧಾನ ಪರಿಷತ್
ಮೊ : 94480 40459 / 99451 18855

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಸಿದ್ದಾಪುರ	
ಬಿಳಿಗೋಟು	20889-29969
ಕೋಕ	18899-29305
ಚಾಲಿ	34819-38099
ಕೆಂಪುಗೋಟು	25375-29889
ರಾಶಿ	38589-41699
ತಟ್ಟಿಬೆಟ್ಟೆ	29099-39099
ಯಲ್ಲಾಪುರ	
ಬಿಳಿಗೋಟು	24299-30019
ಚಾಲಿ	30461-40211
ಕೋಕ	19601-29499
ಕೆಂಪುಗೋಟು	24899-33299
ರಾಶಿ	39910-47399
ತಟ್ಟಿಬೆಟ್ಟೆ	34899-39829
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41099-43569
ಗೊರಬಲು	16000-31619
ರಾಶಿ	37515-42599
ಸರಕು	48836-73009
ಸಾಗರ	
ಬಿಳಿಗೋಟು	22399-24429
ಚಾಲಿ	31999-33399
ಕೋಕ	29299-30499
ಕೆಂಪುಗೋಟು	30529-32500
ರಾಶಿ	40599-42599
ಸಿಪ್ಪೆಗೋಟು	16590-17199
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	287-372
ದ್ವಿತಳಿ (ಬಿ.ವಿ)	265-498

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10100	10050	10050	135.80 ಸೆಂಟ್ಸ್
ಎಸಿ	4050	3950	3875	
ಆರ್‌ಪಿ	5375	5200	5275	
ಆರ್‌ಸಿ	3000	3150	3000	1456 ಡಾಲರ್ಸ್

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಮಚಂದ್ರ ಶಾಸ್ತ್ರಿ, ಪುಣೆ

- **ಪ್ರಶ್ನೆ: ನಾನು ಕನ್ನಡಿಗ. ಬಹಳ ವರ್ಷಗಳಿಂದ ನಿಮ್ಮ ಸಲಹೆಯಂತೆ ಹೂಡಿಕೆ ಮಾಡಿ ನಿವೇಶನ ಕೊಂಡಿದ್ದೇನೆ. ನನ್ನ ತಿಂಗಳ ವರಮಾನ ₹ 1.20 ಲಕ್ಷ. ಕಡಿತದ ನಂತರ ಕೈಗೆ ₹ 98,000 ಬರುತ್ತದೆ. ನಾನು ವಿವಾಹಿತ. ಒಂದು ವರ್ಷದ ಹೆಣ್ಣು ಮಗು ಇದೆ. ಹೆಂಡತಿ ಗೃಹಿಣಿ. ಬಂಗಾರದ ಹೂಡಿಕೆ, ತೆರಿಗೆ ಉಳಿಸಲು ಹೂಡಿಕೆ ಹಾಗೂ ಪಿಂಚಣಿ ಯೋಜನೆ ವಿಚಾರವಾಗಿ ತಿಳಿಸಿ.**

ಉತ್ತರ: ನೀವು ತೆರಿಗೆ ಉಳಿಸಲು ಪಿಪಿಎಫ್ ಹಾಗೂ 5 ವರ್ಷಗಳ ಬ್ಯಾಂಕ್ ಠೇವಣಿ ಮಾಡಿ. ಇಲ್ಲಿ ಗರಿಷ್ಠ ವಾರ್ಷಿಕ ₹1.50 ಲಕ್ಷ ಹೂಡಿಕೆ ಮಾಡಿ. 80ಸಿ ಆಧಾರದ ಮೇಲೆ ತೆರಿಗೆ ವಿನಾಯಿತಿ ಪಡೆಯಿರಿ. ಹೆಚ್ಚಿನ ಸಂಬಳ ಪಡೆಯುವ ನೀವು ಸಾಮಾನ್ಯ ವಿಮೆಗಿಂತ ಅವಧಿ ವಿಮೆ (ಟರ್ಮ್ ಇನ್ಶುರೆನ್ಸ್) ಮಾಡಿ. ಇಲ್ಲಿ ದೊಡ್ಡ ಮೊತ್ತದ ವಿಮೆಗೆ ಕಡಿಮೆ ಪ್ರೀಮಿಯಂ ಇರುತ್ತದೆ. ಆದರೆ ಕಟ್ಟಿದ ಹಣ ವಾಪಾಸು ಬರುವುದಿಲ್ಲ. ಪಿಪಿಎಫ್ 15 ವರ್ಷಗಳ ಅವಧಿಗೆ ಮಾಡಿ. ಇದು ನಿಮ್ಮ ಜೀವನದ ಸಂಜೆಯಲ್ಲಿ ನೆರವಾಗುತ್ತದೆ. ಜೊತೆಗೆ ಇಲ್ಲಿ ಬರುವ ಬಡ್ಡಿ ಸೆಕ್ಷನ್ 10 (II) ಆಧಾರದ ಮೇಲೆ ಸಂಪೂರ್ಣ ವಿನಾಯಿತಿ ಹೊಂದಿದೆ. ಹೆಣ್ಣು ಮಗುವಿನ ಸಲುವಾಗಿ ವಾರ್ಷಿಕ ₹ 1.50 ಲಕ್ಷ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ತೊಡಗಿಸಿ. ಈ ಹೂಡಿಕೆ ಬ್ಯಾಂಕ್‌ನಲ್ಲಿಯೂ ಮಾಡಬಹುದು. ಪಿಂಚಣಿ ಸಲುವಾಗಿ ಎನ್‌ಪಿಎಸ್‌ನಲ್ಲಿ ಹಣ ತೊಡಗಿಸಿ. ಇಲ್ಲಿ ಗರಿಷ್ಠ ₹ 50 ಸಾವಿರ ತನಕ ಸೆಕ್ಷನ್ 80 ಸಿಸಿಡಿ (1ಬಿ) ಆಧಾರದ ಮೇಲೆ ತೆರಿಗೆ ವಿನಾಯಿತಿ ಸವಲತ್ತು ಇದೆ. ಬಂಗಾರದ ಸಲುವಾಗಿ ಬಂಗಾರದ ನಾಣ್ಯ ಅಥವಾ ಚಿನ್ನದ ಇಟಿಎಫ್ (Gold ETF) ನಲ್ಲಿ ಹಣ ಹೂಡಿರಿ.

ರಮಾದೇವಿ, ಊರುಬೇಡ

- **ಪ್ರಶ್ನೆ: ನಾನು ವೃತ್ತಿಯಲ್ಲಿ ಕಾಮರ್ಸ್ ಕಾಲೇಜು ಉಪನ್ಯಾಸಕಿ. ನನ್ನ ಒಟ್ಟು ಸಂಬಳ ₹ 70,255. ಕಡಿತದ ನಂತರ ₹ 60,200 ಬರುತ್ತದೆ. ಪಿಂಚಣಿ ಸವಲತ್ತು ಇಲ್ಲ. ಮಗಳಿಗೆ 8 ವರ್ಷ, ಮಗನಿಗೆ 6 ವರ್ಷ ವಯಸ್ಸು. ನನ್ನ ವಯಸ್ಸು 42 ವರ್ಷ. ನನ್ನ ಪತಿ ವ್ಯಾಪಾರೋದ್ಯಮದಲ್ಲಿದ್ದಾರೆ. ಮನೆ ಖರ್ಚು ಅವರೇ ನೋಡಿಕೊಳ್ಳುತ್ತಾರೆ. ನಾನು ಮಗಳು ಹುಟ್ಟಿದ ವರ್ಷದಿಂದ ಪ್ರತಿ ವರ್ಷ 15 ಗ್ರಾಂ ಚಿನ್ನದ ನಾಣ್ಯ ಕೊಳ್ಳುತ್ತಿದ್ದೇನೆ. ಬಂಗಾರದ ಒಡವೆ, ಬಂಗಾರದ ಮ್ಯೂಚುವಲ್ ಫಂಡ್ ಹೂಡಿಕೆ ವಿಚಾರದಲ್ಲಿ ತಿಳಿಸಿ. ನನ್ನ ಎರಡೂ ಮಕ್ಕಳ ಸಲುವಾಗಿ ದೀರ್ಘಾವಧಿ ಕಂಟಕ ರಹಿತ ಹೂಡಿಕೆ ತಿಳಿಸಿ.**

ಉತ್ತರ: ನೀವು ಖಾಸಗಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಂತೆ ಕಾಣುತ್ತದೆ. ನಿಮ್ಮ ಅಥವಾ ನಿಮ್ಮ ಪತಿಯವರ ಈವರೆಗಿನ ಉಳಿತಾಯದ ವಿಚಾರ ತಿಳಿಸಿಲ್ಲ. ನೀವು ತೆರಿಗೆಗೆ ಒಳಗಾಗುವುದರಿಂದ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಎಸ್‌ಬಿಐನಲ್ಲಿ ಕನಿಷ್ಠ ₹ 50 ಸಾವಿರ ವಾರ್ಷಿಕವಾಗಿ ಹೂಡಿಕೆ ಮಾಡಿ. ಒಟ್ಟು ಆದಾಯದಿಂದ ಕಳೆದು ತೆರಿಗೆ ಸಲ್ಲಿಸಿ. ಇದೇ ವೇಳೆ 80ಸಿಸಿಡಿ (1ಬಿ) ಹೊರತಾಗಿ ಜೀವ ವಿಮೆ ಅಥವಾ ಪಿಪಿಎಫ್ ಮುಖಾಂತರ ಸೆಕ್ಷನ್ 80ಸಿ ಆಧಾರದ ಮೇಲೆ ಕನಿಷ್ಠ ₹ 1.50 ಲಕ್ಷ ಹಣ ಇರಿಸಿ. ಈ ಎರಡೂ ಸೆಕ್ಷನ್‌ಗಳಿಂದ ₹ 2 ಲಕ್ಷ ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ನಿಮ್ಮ ಪತಿ ಕೂಡಾ ಆದಾಯ ತೆರಿಗೆಗೆ ಒಳಗಾದಲ್ಲಿ ಅವರು ಮಗಳ ಹೆಸರಿನಲ್ಲಿ ವಾರ್ಷಿಕ ಗರಿಷ್ಠ ₹ 1.50 ಲಕ್ಷ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ತೊಡಗಿಸಿ ತೆರಿಗೆ ವಿನಾಯಿತಿ ಪಡೆಯಲಿ. ನಿಮ್ಮ ಮಗನ ಸಲುವಾಗಿ ಎಲ್‌ಐಸಿಯವರ ‘ಚಿಲ್ಡ್ರನ್ ಮನಿಬ್ಯಾಕ್ ಪಾಲಿಸಿ’ ಮಾಡಿಸಿ ವಾರ್ಷಿಕವಾಗಿ ₹ 25 ಸಾವಿರ ತುಂಬಿ. ನೀವಿಬ್ಬರೂ ಪಿಪಿಎಫ್ ಪ್ರಾರಂಭಿಸಿ. ಈ ಹೂಡಿಕೆ ಅಂಚೆ ಕಚೇರಿ ಹಾಗೂ ಬ್ಯಾಂಕ್‌ಗಳಲ್ಲಿಯೂ ಮಾಡಬಹುದು. ವಾರ್ಷಿಕ ಗರಿಷ್ಠ ಮಿತಿ ₹ 1.50 ಲಕ್ಷ. ನೀವಿಬ್ಬರೂ ಸೇರಿ ಎರಡು ಖಾತೆಗಳಿಂದ ಗರಿಷ್ಠ ₹ 3 ಲಕ್ಷ ಉಳಿಸಿರಿ. ಈ ಯೋಜನೆಯಲ್ಲಿ ಬರುವ ಬಡ್ಡಿಗೆ ಆದಾಯ ತೆರಿಗೆ ಸೆಕ್ಷನ್ 10 (II) ಆಧಾರದ ಮೇಲೆ ಸಂಪೂರ್ಣ ವಿನಾಯಿತಿ ಇದೆ. ಮಗಳ ಮದುವೆಗೆ ಇನ್ನೂ ಕೆಲವು ವರ್ಷಗಳು ಇರುವುದರಿಂದ ಒಡವೆ ಮಾಡಿಸಿ ಇಡುವುದು ಸೂಕ್ತವಲ್ಲ. ಮುಂದೆ ಫ್ಯಾಷನ್ ಬದಲಾದಲ್ಲಿ ಒಡವೆ ಮುರಿಸುವಾಗ ಸವಕಳಿಯಿಂದ ನಷ್ಟವಾಗುತ್ತದೆ. ಬಂಗಾರದ ಮ್ಯೂಚುವಲ್ ಫಂಡ್ ಹೂಡಿಕೆ ಕೂಡಾ ಉತ್ತಮ ಹೂಡಿಕೆಯೇ ಆಗಿದೆ. ಇಲ್ಲಿ ಒಂದು ಗ್ರಾಂ ಒಂದು ಯುನಿಟ್ ಎಂದು ಪರಿಗಣಿಸಲಾಗುತ್ತದೆ. ಮಾರುಕಟ್ಟೆ ಬೆಲೆಯಂತೆ ಯಾವಾಗ ಬೇಕಾದರೂ ಮಾರಾಟ ಮಾಡಬಹುದು. ನೀವು ಇದುವರೆಗೆ ಬಂಗಾರದ ನಾಣ್ಯ ಕೊಳ್ಳುತ್ತಿರುವ ಪ್ರಕ್ರಿಯೆಯನ್ನು ಎಂದಿಗೂ ನಿಲ್ಲಿಸಬೇಡಿ.

ಚಿನ್ನ ₹ 679, ಬೆಳ್ಳಿ ₹ 1,847 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ 10ಗ್ರಾಂ ಚಿನ್ನದ ದರ ₹ 679ರಷ್ಟು ಇಳಿಕೆಯಾಗಿ ₹ 44,760ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 1,847ರಷ್ಟು ಕಡಿಮೆಯಾಗಿ ₹ 67,073ರಂತೆ ಮಾರಾಟವಾಗಿದೆ.



ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದೆ. ಇದರಿಂದಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

2030ರಿಂದ ಕೇವಲ ಎಲೆಕ್ಟ್ರಿಕ್ ಕಾರ್ ತಯಾರಿಕೆ: ವೋಲ್ವೊ



ಸ್ಟಾಕ್‌ಹೋಮ್ (ಪಿಟಿಐ): 2030ರಿಂದ ವಿದ್ಯುತ್ ಚಾಲಿತ ವಾಹನಗಳನ್ನು ಮಾತ್ರವೇ ತಯಾರಿಸುವುದಾಗಿ ವೋಲ್ವೊ ಕಂಪನಿ ಹೇಳಿದೆ.

ಹೈಬ್ರಿಡ್ ಅನ್ನೂ ಒಳಗೊಂಡು ಆಂತರಿಕ ದಹನಕಾರಿ (ಇಂಟರ್ನಲ್ ಕಂಬಸ್ಚನ್) ಎಂಜಿನ್‌ಗಳನ್ನು ಹೊಂದಿರುವ ಎಲ್ಲಾ ಕಾರುಗಳ ತಯಾರಿಕೆಯನ್ನು ಹಂತಹಂತವಾಗಿ ನಿಲ್ಲಿಸುವುದಾಗಿ ತಿಳಿಸಿದೆ.

‘ಆಂತರಿಕ ದಹನಕಾರಿ ಎಂಜಿನ್ ಹೊಂದಿರುವ ಕಾರುಗಳಿಗೆ ದೀರ್ಘಾವಧಿಯ ಭವಿಷ್ಯವಿಲ್ಲ’ ಎಂದು ವೋಲ್ವೊ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಹೆನ್ರಿಕ್ ಗ್ರೀನ್ ತಿಳಿಸಿದ್ದಾರೆ.

‘ಕೇವಲ ಎಲೆಕ್ಟ್ರಿಕ್ ಕಾರ್ ತಯಾರಿಕಾ ಕಂಪನಿಯಾಗಲು ನಾವು ಬದ್ಧರಾಗಿದ್ದೇವೆ. ನಮ್ಮ ಗ್ರಾಹಕರ ನಿರೀಕ್ಷೆಗಳನ್ನು ತಲುಪಲು ಮತ್ತು ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಲ್ಲಿ ಪರಿಹಾರ ಕಂಡುಕೊಳ್ಳಲು ಇದು ಅವಕಾಶ ಕಲ್ಪಿಸಲಿದೆ’ ಎಂದೂ ಹೇಳಿದ್ದಾರೆ.

ಎಲ್ಲಾ ಎಲೆಕ್ಟ್ರಿಕ್ ವಾಹನಗಳನ್ನು ಆನ್‌ಲೈನ್‌ನಲ್ಲಿ ಮಾತ್ರವೇ ಮಾರಾಟ ಮಾಡಲಾಗುವುದು ಎಂದು ಹೇಳಿದೆ. ಕಳೆದ ವರ್ಷ ಕಾಂಪ್ಯಾಕ್ಟ್ ಎಸ್‌ಯುವಿ ಎಕ್ಸ್‌ಸಿ 40 ರಿಚಾರ್ಜ್ ಬಿಡುಗಡೆ ಮಾಡಿದ್ದ ಕಂಪನಿಯು ಈ ವರ್ಷ ಸಂಪೂರ್ಣ ವಿದ್ಯುತ್ ಚಾಲಿತ ಎರಡನೇ ಕಾರನ್ನು ಅನಾವರಣ ಮಾಡಲಿದೆ.

ಮುಂಬೈ ಧಾರಣೆ

ಶೇಂಗಾ

2-3-2020

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9700-9800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1522 (1540)
ಒಂದು ವಾರದ ಡೆಲಿವರಿ	1517 (1535)
ಸೋಯಾ ಕಚ್ಚಾ	1155 (1180)
ಪಾಮ್ ವಾರದ ಡೆಲಿವರಿ	1173 (1180)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1550)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
45,325 (45,450)
ಬೆಳ್ಳಿ ಕೆ.ಜಿ 67,400 (68,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮೋದಿಯನ್ನು ಹೊಗಳುವುದನ್ನು ನಿಲ್ಲಿಸಿ • ಪಕ್ಷದ ಆಯ್ದ ನಾಯಕರಿಗೆ ಅಧೀರ್ ರಂಜನ್ ಚೌಧರಿ ತಾಕೀತು

ಕಾಂಗ್ರೆಸ್‌ನಲ್ಲಿ ಮತ್ತೆ ಒಡಕು ದನಿ

ಪ್ರಜಾ ಮತ
ಜನತಂತ್ರದ ಹಬ್ಬ

ನವದೆಹಲಿ/ಕೋಲ್ಕತ್ತ (ಪಿಟಿಐ/ ರಾಯಿಟರ್ಸ್): ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ್ದ ಕಾಂಗ್ರೆಸ್‌ನ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರಿಗೆ ಪಕ್ಷವು ತಿರುಗೇಟು ನೀಡಿದೆ. ಮೋದಿಯನ್ನು ಹೊಗಳುತ್ತಾ ಸಮಯ ವ್ಯರ್ಥಮಾಡುವುದನ್ನು ನಿಲ್ಲಿಸಿ ಎಂದು ಪಕ್ಷವು ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ತಾವು ಚಹಾ ಮಾರುತ್ತಿದ್ದ ವಿಷಯವನ್ನು ಜಗತ್ತಿನ ಎದುರು ಬಹಿರಂಗಪಡಿಸಿದರು. ಅದನ್ನು ಮುಚ್ಚಿಡುವ ಪ್ರಯತ್ನ ಮಾಡಲಿಲ್ಲ ಎಂದು ಗುಲಾಂ ನಬಿ ಆಜಾದ್ ಅವರು ಈಚೆಗೆ ಹೇಳಿದ್ದರು. ಕಾಂಗ್ರೆಸ್ ನಾಯಕತ್ವದ ವಿರುದ್ಧ ಪತ್ರ ಬರೆದಿದ್ದ ಪಕ್ಷದ 23 ನಾಯಕರಲ್ಲಿ ನಬಿ ಸಹ ಒಬ್ಬರು. ಈಚೆಗೆ ಈ ನಾಯಕರಲ್ಲಿ ಕೆಲವರು ಸಭೆ ನಡೆಸಿದ್ದರು. ಸಭೆ ಮುಗಿದ ಕೆಲವೇ ಗಂಟೆಗಳಲ್ಲಿ ಗುಲಾಂ ನಬಿ ಅವರು ಮೋದಿಯನ್ನು ಹೊಗಳಿ ಹೇಳಿಕೆ ನೀಡಿದ್ದರು. ಇದಕ್ಕೆ ಕಾಂಗ್ರೆಸ್‌ನಿಂದಲೇ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

‘ಕಾಂಗ್ರೆಸ್‌ನ ಕೆಲವು ನಾಯಕರು ಸದಾ ತಮ್ಮ ವೈಯಕ್ತಿಕ ಕ್ಷೇಮದ ಬಗ್ಗೆ ಯೋಚಿಸುವುದರಿಂದ ಹೊರಗೆ ಬರಬೇಕು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಡಿಹೊಗಳುತ್ತಾ ಸಮಯ ವ್ಯರ್ಥಮಾಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸುತ್ತೇನೆ. ಈ ನಾಯಕರು ಪಕ್ಷದ ಋಣದಲ್ಲಿದ್ದಾರೆ. ಪಕ್ಷವನ್ನು ಬಲಪಡಿಸುವ ಹೊಣೆ ಅವರ ಮೇಲೂ ಇದೆ. ತಮ್ಮನ್ನು ಸಲಹಿದ ಮರದ ಬುಡವನ್ನು ಸಡಿಲಗೊಳಿಸುವ ಯತ್ನವನ್ನು ಈ ನಾಯಕರು ಕೈಬಿಡಬೇಕು’ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಆಗ್ರಹಿಸಿದ್ದಾರೆ.

ನಬಿ ಅವರನ್ನು ಉಚ್ಚಾಟಿಸಿ: ಪಕ್ಷದ ಬಲವನ್ನು ಕುಗ್ಗಿಸುತ್ತಿರುವ ಗುಲಾಂ ನಬಿ ಆಜಾದ್ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಎಂದು ಜಮ್ಮು-ಕಾಶ್ಮೀರ ಕಾಂಗ್ರೆಸ್ ಘಟಕವು ಆಗ್ರಹಿಸಿದೆ. ಆಜಾದ್ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಇಲ್ಲಿನ ಕಾಂಗ್ರೆಸ್‌ನ ಮತ್ತೊಂದು ಗುಂಪು ಆಜಾದ್ ಪರವಾಗಿ ಪ್ರದರ್ಶನ ನಡೆಸಿದೆ.

‘ಆಜಾದ್ ಅವರನ್ನು ಕಾಂಗ್ರೆಸ್ ಸದಾ ಉನ್ನತ ಸ್ಥಾನದಲ್ಲಿ ಇರಿಸಿದೆ. ದಶಕಗಳ ಕಾಲ ಅವರನ್ನು ರಾಜ್ಯಸಭೆಗೆ ಆಯ್ಕೆ ಮಾಡಿದೆ. ಜಮ್ಮು-ಕಾಶ್ಮೀರದ ಮುಖ್ಯಮಂತ್ರಿಯನ್ನಾಗಿಯೂ ಮಾಡಿದೆ. ಈಗ ಪಕ್ಷ ಸಂಕಷ್ಟದಲ್ಲಿರುವಾಗ, ಆಜಾದ್ ಅವರ ಅನುಭವದ ನೆರವು ಅಗತ್ಯವಿದೆ. ಆದರೆ ಜಮ್ಮು-ಕಾಶ್ಮೀರದ ರಾಜ್ಯದ ಸ್ಥಾನಮಾನವನ್ನು ಕಸಿದುಕೊಂಡ ಪ್ರಧಾನಿ ನರೇಂದ್ರ ಮೋದಿಯನ್ನು, ಕಾಶ್ಮೀರಕ್ಕೇ ಬಂದು ಹೊಗಳುವ ಕೆಲಸವನ್ನು ಆಜಾದ್ ಮಾಡಿದ್ದಾರೆ’ ಎಂದು ಜಮ್ಮು--ಕಾಶ್ಮೀರ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಶಾನವಾಜ್ ಚೌಧರಿ ಟೀಕಿಸಿದ್ದಾರೆ.

‘ಆಜಾದ್ ಅವರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಬಿಜೆಪಿಯ ಕಾರ್ಯಸೂಚಿಯಂತೆ ಕೆಲಸ ಮಾಡುತ್ತಿದ್ದಾರೆ. ಈ ಮೂಲಕ ಪಕ್ಷದ ಬಲವನ್ನು ಕುಗ್ಗಿಸುತ್ತಿದ್ದಾರೆ. ಅವರನ್ನು ತಕ್ಷಣವೇ ಪಕ್ಷದಿಂದ ಉಚ್ಚಾಟಿಸಬೇಕು’ ಎಂದು ಶಾನವಾಜ್ ಆಗ್ರಹಿಸಿದ್ದಾರೆ.


ಬಿಜೆಪಿ ಟೀಕೆ: ಪ್ರಧಾನಿ ಮೋದಿ ಅವರನ್ನು ದ್ವೇಷಿಸುವುದು ಮಾತ್ರ ಕಾಂಗ್ರೆಸ್‌ನ ಕಾರ್ಯಸೂಚಿಯಾಗಿದೆ. ಮೋದಿಯನ್ನು ಹೊಗಳುವವರನ್ನು ಶಿಕ್ಷಿಸುವುದು ಕಾಂಗ್ರೆಸ್‌ನ ರಕ್ತದಲ್ಲಿಯೇ ಇದೆ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಟೀಕಿಸಿದ್ದಾರೆ.

‘ನನ್ನ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ’ ಎಂದು ಗುಲಾಂ ನಬಿ ಆಜಾದ್ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.



ಜಮ್ಮುವಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಗುಲಾಂ ನಬಿ ಆಜಾದ್ ಅವರ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಿದರು– ಪಿಟಿಐ ಚಿತ್ರ

ದಿನದ ಬೆಳವಣಿಗೆ


ಚಹಾ ತೋಟದ ಕೂಲಿಯಾಳುಗಳ ಜತೆ ಪ್ರಿಯಾಂಕಾ ಗಾಂಧಿ

- ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ಪರಿವರ್ತನಾ ಯಾತ್ರೆ ಆರಂಭಿಸಿದ ಬಿಜೆಪಿ. ಯಾತ್ರೆಗೆ ಟಿಎಂಸಿ ಕಾರ್ಯಕರ್ತರಿಂದ ತಡೆ. ಮಾತಿನ ಚಕಮಕಿ
- ಅಸ್ಸಾಂನಲ್ಲಿ ತಮ್ಮ ಎರಡನೇ ದಿನದ ಪ್ರಚಾರ ಕಾರ್ಯ ಮುಂದುವರಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ. ಬುಧವಾರವೂ ಅಸ್ಸಾಮಿ ಜನರ ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದ ಪ್ರಿಯಾಂಕಾ. ಮಹಿಳೆಯರು, ಚಹಾ ತೋಟದ ಕೂಲಿಯಾಳುಗಳ ಜತೆ ಸಂವಾದ. ಕೂಲಿಯಾಳುಗಳ ಜತೆ ಸೇರಿ ಚಹಾ ಎಲೆ ಬಿಡಿಸಿದ ನಾಯಕಿ
- ಪಶ್ಚಿಮ ಬಂಗಾಳ ಚುನಾವಣೆಗೆ ವೀಕ್ಷಕರನ್ನು ನೇಮಕ ಮಾಡಿದ ಕಾಂಗ್ರೆಸ್
- ಡಿಎಂಕೆಯನ್ನು ಅಧಿಕಾರದಿಂದ ದೂರ ಇಡುವುದೇ ಅಮ್ಮ ಮಕ್ಕಳ ಮುನ್ನೇತ್ರ ಕಳಗಂನ ಪ್ರಧಾನ ಉದ್ದೇಶ. ಈ ಉದ್ದೇಶ ಈಡೇರಿಕೆಗಾಗಿ ಯಾವ ಪಕ್ಷದ ಜತೆಗೂ ಮೈತ್ರಿಮಾಡಿಕೊಳ್ಳಲು ಸಿದ್ಧರಿದ್ದೇವೆ: ಟಿ.ಟಿ.ವಿ.ದಿನಕರನ್
- ಪಶ್ಚಿಮ ಬಂಗಾಳ ಚುನಾವಣೆಯ ಮೊದಲ ಹಂತದ ಮತದಾನದ ಅವಧಿಗೆ ಹೆಚ್ಚುವರಿ 30 ನಿಮಿಷಗಳನ್ನು ಸೇರಿಸಿ ಅಧಿಸೂಚನೆ ಹೊರಡಿಸಿದ ಚುನಾವಣಾ ಆಯೋಗ
- ತಮಿಳುನಾಡಿನಲ್ಲಿ ಪಕ್ಷದ ಟಿಕೆಟ್ ಬಯಸುವವರನ್ನು ಸಂದರ್ಶನಕ್ಕೆ ಒಳಪಡಿಸಲಾಗುತ್ತದೆ: ಎಐಎಡಿಎಂಕೆ
- ಟಿಎಂಸಿ ಶಾಸಕ ಜಿತೇಂದ್ರ ತಿವಾರಿ ಅವರು ಬುಧವಾರ ಬಿಜೆಪಿ ಸೇರಿದರು

ನುಡಿ–ಕಿಡಿ

ಪ್ರಶಾಂತ್ ಕಿಶೋರ್ ಅವರು ಮಮತಾ ದೀದಿಯನ್ನು ತ್ಯಜಿಸಿದ್ದಾರೆ. ಚುನಾವಣೆಯ ಫಲಿತಾಂಶ ಬರುವ ಮುನ್ನವೇ ಮಮತಾ ಅವರ ಬಹುದೊಡ್ಡ ಸಲಹೆಗಾರ, ಈಗ ಬೇರೊಬ್ಬರ ಜತೆ ಕೈಜೋಡಿಸಿದ್ದಾರೆ

ಸಂಬಿತ್ ಪಾತ್ರಾ, ಬಿಜೆಪಿ ವಕ್ತಾರ

ಉತ್ತರ ಪ್ರದೇಶದಲ್ಲಿ ಹಿಂದೆ ಒಂದು ಸರ್ಕಾರವಿತ್ತು. ರಾಮಭಕ್ತರ ಮೇಲೆ ಆ ಸರ್ಕಾರ ಗುಂಡು ಹಾರಿಸುತ್ತಿತ್ತು. ಆ ಸರ್ಕಾರ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಪಶ್ಚಿಮ ಬಂಗಾಳದಲ್ಲಿ ಜೈ ಶ್ರೀರಾಂ ಎನ್ನಲು ಬಿಡದ ಟಿಎಂಸಿ ಸರ್ಕಾರಕ್ಕೂ ಇದೇ ಗತಿ ಆಗಲಿದೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಉತ್ತರ ಪ್ರದೇಶದ ಮುಖ್ಯಮಂತ್ರಿಗೆ ಅವರ ರಾಜ್ಯದ ಯುವತಿಯ ಘನತೆ ಮತ್ತು ಆಕೆಯ ಕುಟುಂಬದ ರಕ್ಷಣೆ ಆದ್ಯತೆಯಾಗದೆ, ಪಶ್ಚಿಮ ಬಂಗಾಳದ ಚುನಾವಣೆ ಹೇಗೆ ಆದ್ಯತೆಯಾಯಿತು ಎಂಬುದು ಅರ್ಥವಾಗುತ್ತಿಲ್ಲ. ಉತ್ತರ ಪ್ರದೇಶದಲ್ಲಿ ಮಹಿಳೆಯರಿಗೆ ಭದ್ರತೆ ನೀಡಲಾಗದ ಯೋಗಿ ಆದಿತ್ಯನಾಥ ಅವರು, ಬಂಗಾಳದ ಮಹಿಳೆಯರ ರಕ್ಷಕರಾಗಬಲ್ಲರು ಎಂದು ಇಲ್ಲಿನ ಬಿಜೆಪಿ ನಾಯಕರು ಅಂದುಕೊಂಡಿದ್ದಾರೆಯೇ?

ಟಿಎಂಸಿ

ಕಾಂಗ್ರೆಸ್ ವರ್ಸಸ್ ಕಾಂಗ್ರೆಸ್

ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಮತ್ತು ಮೌಲ್ವಿ ಅಬ್ಬಾಸ್ ಸಿದ್ಧಿಕಿ ಅವರ ಐಎಸ್‌ಎಫ್ ಜತೆ ಕಾಂಗ್ರೆಸ್ ಪಕ್ಷವು ಮೈತ್ರಿ ಮಾಡಿಕೊಂಡಿರುವುದಕ್ಕೆ, ಪಕ್ಷದ ಕೆಲವು ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಆಕ್ಷೇಪಕ್ಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ತಿರುಗೇಟು ನೀಡಿದ್ದಾರೆ. ಕಾಂಗ್ರೆಸ್‌ನೊಳಗಿನ ಈ ಭಿನ್ನಮತವನ್ನು ಕಾಂಗ್ರೆಸ್ ವರ್ಸಸ್ ಕಾಂಗ್ರೆಸ್ ಎಂದು ಬಿಜೆಪಿ ನಾಯಕರು ಲೇವಡಿ ಮಾಡಿದ್ದಾರೆ

ಆನಂದ್ ಶರ್ಮಾ ಹೇಳಿದ್ದೇನು?

‘ಕಾಂಗ್ರೆಸ್ ಪಕ್ಷವು ಒಂದೊಂದು ರಾಜ್ಯದಲ್ಲಿ ಒಂದೊಂದು ನೀತಿ ಅನುಸರಿಸಬಾರದು. ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಕೋಮುವಾದಿ ಪಕ್ಷಗಳ ಜತೆಗೆ ಕಾಂಗ್ರೆಸ್ ಕೈಜೋಡಿಸಿದೆ. ಇದು ಪಕ್ಷದ ಮೂಲಸಿದ್ಧಾಂತ, ಗಾಂಧಿವಾದ ಮತ್ತು ನೆಹರೂ ಧ್ಯೇಯಗಳಿಗೆ ವಿರುದ್ಧವಾದುದು. ಈ ಮೈತ್ರಿಗೆ ಪಕ್ಷದ ಕಾರ್ಯಕಾರಿಣಿಯ ಒಪ್ಪಿಗೆ ಪಡೆಯಬೇಕು’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಆನಂದ್ ಶರ್ಮಾ ಹೇಳಿದ್ದರು.

‘ಬಿಜೆಪಿಯ ಉದ್ದೇಶ ಈಡೇರುತ್ತಿದೆ’

‘ಆನಂದ್ ಶರ್ಮಾ ಅವರೇ, ಪಶ್ಚಿಮ ಬಂಗಾಳದಲ್ಲಿ ಸಿಪಿಎಂ ನೇತೃತ್ವದ ಎಡರಂಗವು ಜಾತ್ಯತೀತ ಮೈತ್ರಿಕೂಟವನ್ನು ಮುನ್ನಡೆಸುತ್ತಿದೆ. ಕಾಂಗ್ರೆಸ್ ಈ ಮೈತ್ರಿಯ ಭಾಗವಾಗಿದೆ. ನಾವು ಬಿಜೆಪಿಯ ಕೋಮುವಾದ ಮತ್ತು ವಿಭಜನಾ ರಾಜಕಾರಣವನ್ನು ಮಣಿಸಲು ಬದ್ಧರಾಗಿದ್ದೇವೆ. ಕಾಂಗ್ರೆಸ್‌ಗೆ ಅದರ ಪಾಲಿನ ಎಲ್ಲಾ ಸೀಟುಗಳೂ ದೊರೆತಿವೆ. ಎಡಪಕ್ಷಗಳು ತಮ್ಮ ಪಾಲಿನ ಸೀಟುಗಳನ್ನು ಇಂಡಿಯನ್ ಸೆಕ್ಯುಲರ್ ಫ್ರಂಟ್‌ಗೆ ಹಂಚಿಕೆ ಮಾಡಿವೆ. ಎಡಪಕ್ಷಗಳ ಈ ನಡೆಯನ್ನು ನೀವು ಕೋಮುವಾದ ಎನ್ನುವುದಾದರೆ, ಬಿಜೆಪಿಯ ಧ್ರುವೀಕರಣ ತಂತ್ರ ಈಡೇರುತ್ತಿದೆ ಎಂದೇ ಅರ್ಥ’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ತಿರುಗೇಟು ನೀಡಿದ್ದಾರೆ.

ಪ್ರಿಯಾಂಕಾ ಸಮರ್ಥನೆ

‘ಈ ಬಗ್ಗೆ ನಮ್ಮ ಪಕ್ಷದ ನಾಯಕರು ಈಗಾಗಲೇ ವಿವರಣೆ ನೀಡಿದ್ದಾರೆ. ಅಸ್ಸಾಂನಲ್ಲಿನ ಹೋರಾಟವು ಅಸ್ಸಾಂಗೆ ಮಾತ್ರ ಸೀಮಿತವಾದುದು. ಅಲ್ಲಿನ ಮಿತ್ರಪಕ್ಷಗಳ ಪ್ರತಿಪಾದನೆಯನ್ನು ಕಾಂಗ್ರೆಸ್ ಶೇ 100ರಷ್ಟು ಒಪ್ಪುವುದಿಲ್ಲ. ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ಸಿದ್ಧಾಂತಗಳಲ್ಲಿ ವ್ಯತ್ಯಾಸವಿದೆ. ಇದು ಕಾಂಗ್ರೆಸ್ ಮತ್ತು ಬಿಜೆಪಿ ನಡುವಣ ಹೋರಾಟವಲ್ಲ. ಬದಲಿಗೆ ಅಸ್ಸಾಂ ಅಸ್ಮಿತೆ ಮತ್ತು ಬಿಜೆಪಿ-ಆರ್‌ಎಸ್‌ಎಸ್ ಸಿದ್ಧಾಂತಗಳ ನಡುವಣ ಹೋರಾಟ. ಈ ಹೋರಾಟದಲ್ಲಿ ಅಸ್ಸಾಂನ ಪಕ್ಷಗಳ ಜತೆ ಕಾಂಗ್ರೆಸ್ ಕೈಜೋಡಿಸಿದೆ ಅಷ್ಟೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಡೇಲ್ ಸ್ಟೇನ್ ಅಭಿಪ್ರಾಯ

ಐಪಿಎಲ್‌ನಲ್ಲಿ ಕ್ರಿಕೆಟ್‌ಗಿಂತ ಹಣಕ್ಕೆ ಪ್ರಾಮುಖ್ಯತೆ

ಕರಾಚಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕ್ರಿಕೆಟ್‌ಗಿಂತ ಹಣಕ್ಕೇ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ ಎಂದು ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಡೇಲ್ ಸ್ಟೇನ್ ಹೇಳಿದ್ದಾರೆ.

‘ಐಪಿಎಲ್‌ನಲ್ಲಿ ದೊಡ್ಡ ತಂಡಗಳಿವೆ. ಅದರಲ್ಲಿ ಖ್ಯಾತನಾಮ ಆಟಗಾರರು ಇರುತ್ತಾರೆ. ಗಳಿಸಿದ ಹಣದ ಸುತ್ತವೇ ಎಲ್ಲರ ಚಿತ್ತ ನೆಟ್ಟಿರುತ್ತದೆ. ಇದೆಲ್ಲದರ ನಡುವೆ ಎಲ್ಲೋ ಒಂದು ಕಡೆ ಕ್ರಿಕೆಟ್ ಮರೆತೇ ಹೋಗುತ್ತದೆ’ ಎಂದು ಸ್ಟೇನ್ ಹೇಳಿದರು.

ಹೋದ ವರ್ಷ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದರು. ಈ ವರ್ಷ ಅವರು ಐಪಿಎಲ್ ಟೂರ್ನಿಯಲ್ಲಿ ಆಡುವುದಿಲ್ಲವೆಂದು ತಿಳಿಸಿದ್ದರು. ಆದ್ದರಿಂದ ಆರ್‌ಸಿಬಿ ಅವರನ್ನು ಬಿಡುಗಡೆ ಮಾಡಿತ್ತು.

ಸದ್ಯ ಪಾಕಿಸ್ತಾನ ಸೂಪರ್ ಲೀಗ್ (ಪಿಎಸ್‌ಎಲ್) ನಲ್ಲಿ ಕ್ವೆಟ್ಟಾ ಗ್ಲೇಡಿಯೇಟರ್ಸ್ ತಂಡವನ್ನು ಅವರು ಪ್ರತಿನಿಧಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.


ಡೇಲ್ ಸ್ಟೇನ್

’ಪಿಎಸ್‌ಎಲ್ ಅಥವಾ ಶ್ರೀಲಂಕಾ ಪ್ರೀಮಿಯರ್ ಲೀಗ್ ಟೂರ್ನಿಗಳಲ್ಲಿ ಆಡುವಾಗ ಕ್ರಿಕೆಟ್‌ಗೆ ಮಹತ್ವ ಇರುತ್ತದೆ. ಕೆಲವು ದಿನಗಳ ಕಾಲ ನಾನು ಇಲ್ಲಿ ಇದ್ದೆ. ಬಹಳಷ್ಟು ಜನರು ನನ್ನ ಕೋಣೆಯ ಬಳಿ ಬರುತ್ತಿದ್ದರು. ನಾನು ಎಲ್ಲೆಲ್ಲಿ ಆಡಿದ್ದೇನೆ. ಸಾಧನೆ ಎಂಬುದನ್ನು ಕುತೂಹಲದಿಂದ ತಿಳಿದುಕೊಳ್ಳುತ್ತಿದ್ದರು’ ಎಂದು ಹೇಳಿದರು.

‘ಆದರೆ ಐಪಿಎಲ್‌ನಲ್ಲಿ ಈ ರೀತಿ ಇರುವುದಿಲ್ಲ. ಅಲ್ಲಿ ಏನಿದ್ದರೂ ಯಾರು ಎಷ್ಟು ಮೌಲ್ಯಕ್ಕೆ ಬಿಡ್ ಆಗುವರು ಎಂಬ ಮಾತುಗಳೇ ಹೆಚ್ಚಾಗಿರುತ್ತಿದ್ದವು. ಅಂತಹ ವಾತಾವರಣದಿಂದ ದೂರವಿರಲು ಬಯಸುತ್ತೇನೆ. ಒಳ್ಳೆಯ ವಿಚಾರಗಳು ಮತ್ತು ಸಕಾರಾತ್ಮಕ ನಡವಳಿಕೆಗಳು ಇರುವುದು ಮುಖ್ಯ. ಉತ್ತಮ ಕ್ರಿಕೆಟ್ ತಂಡಗಳು ಮತ್ತು ಟೂರ್ನಿಗಳಲ್ಲಿ ಆಡುವುದು ನನಗೆ ಇಷ್ಟ’ ಎಂದು ಸ್ಟೇನ್ ಹೇಳಿದರು.

ಅವರು ಒಟ್ಟು ಆರು ಐಪಿಎಲ್ ಆವೃತ್ತಿಗಳಲ್ಲಿ ಆಡಿದ್ದಾರೆ. ಅದರಲ್ಲಿ ಕಳೆದ ಮೂರು ಟೂರ್ನಿಗಳಲ್ಲಿ ಕೇವಲ ಆರು ಪಂದ್ಯಗಳಲ್ಲಿ ಆಡಿದ್ದಾರೆ. ಗಾಯದ ಸಮಸ್ಯೆಯಿಂದ ಅವರು ಆಡಿರಲಿಲ್ಲ.

ಟ್ವಿಟರ್‌ನಲ್ಲಿ ವ್ಯಂಗ್ಯ, ಟೀಕೆ

ಬೆಂಗಳೂರು: ಐಪಿಎಲ್ ಟಿ20 ಟೂರ್ನಿಯಲ್ಲಿ ಹಣಕ್ಕೇ ಹೆಚ್ಚು ಮಹತ್ವ ನೀಡಲಾಗುತ್ತಿದೆ ಎಂದು ಟೀಕಿಸಿರುವ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ವೇಗದ ಬೌಲರ್ ಡೇಲ್ ಸ್ಟೇನ್ ಅವರನ್ನು ಟ್ವಿಟರ್‌ನಲ್ಲಿ ಅನೇಕರು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಈ ಹಿಂದಿನ ಋತುಗಳಲ್ಲಿ ಐಪಿಎಲ್ ಪಂದ್ಯಗಳಲ್ಲಿ ಆಡಿ ದುಡ್ಡು ತೆಗೆದುಕೊಂಡಾಗ ಅವರಿಗೆ ಇದು ನೆನಪಿರಲಿಲ್ಲವೇ? ಕಳಪೆ ಆಟವಾಡಿದ್ದು ಮರೆತು ಹೋಯಿತೇ?’ ಎಂದೆಲ್ಲಾ ಟ್ವಿಟರ್‌ನಲ್ಲಿ ಸ್ಟೇನ್ ಕುರಿತು ವ್ಯಂಗ್ಯದ ಸಂದೇಶಗಳು ಹರಿದಾಡುತ್ತಿವೆ.

‘ಅಚ್ಚರಿಯ ಹೇಳಿಕೆ! ಆದರೆ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳೋಣ. ಐಪಿಎಲ್‌ನಲ್ಲಿ ಇರುವಂತೆ ಉತ್ತಮ ಗುಣಮಟ್ಟದ ಆಟಗಾರರು ಅಲ್ಲಿ (ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ) ಇಲ್ಲದ ಕಾರಣ ಅವರು ಅಲ್ಲಿ ಉತ್ತಮವಾಗಿ ಆಡಬಹುದು’ ಎಂದು ರಿಷು ರಾಜ್ ಎಂಬುವವರು ಟ್ವೀಟ್ ಮಾಡಿದ್ದಾರೆ.

ಐಪಿಎಲ್‌ನಲ್ಲಿ ಮಾರಾಟವಾಗದ ಈ ಆಟಗಾರ ಐಪಿಎಲ್‌ಗಿಂತಲೂ ಪಿಎಸ್‌ಎಲ್‌ನಲ್ಲಿ ಹೆಚ್ಚು ವಿಕೆಟ್ ಗಳಿಸಬಹುದು ಎಂದು ಆಶಿಶ್ ಶ್ರೀವಾಸ್ತವ ಎಂಬುವವರು ವ್ಯಂಗ್ಯವಾಡಿದ್ದಾರೆ. ಸ್ಟೇನ್ ಐಪಿಎಲ್‌ನಿಂದ ಒಟ್ಟು ₹47 ಕೋಟಿ ಹಾಗೂ ಪಿಎಸ್‌ಎಲ್‌ನಿಂದ ₹36 ಲಕ್ಷ ಗಳಿಸಿದ್ದಾರೆ. ಬಹುಶಃ ಆ ಸಮಯದಲ್ಲಿ ಅವರು ಎಂದಿಗೂ ಹಣದ ಬಗ್ಗೆ ಯೋಚಿಸಲಿಲ್ಲವೇ?’ ಎಂದು ಆಶ್ ಮೆಹ್ತಾ ಎಂಬುವವರು ಪ್ರಶ್ನಿಸಿದ್ದಾರೆ.

‘ಸ್ಪಿನ್ ಪಿಚ್: ಟೀಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ’

ಅಹಮದಾಬಾದ್ (ಪಿಟಿಐ): ಭಾರತದ ಸ್ಪಿನ್ ಸ್ನೇಹಿ ಪಿಚ್‌ಗಳ ಕುರಿತ ಟೀಕೆಗಳನ್ನು ಗಂಭೀರವಾಗಿ ಪರಿಗಣಿಸುವ ಅವಶ್ಯಕತೆ ಇಲ್ಲ ಎಂದು ಭಾರತ ಕ್ರಿಕೆಟ್ ತಂಡದ ಉಪನಾಯಕ ಅಜಿಂಕ್ಯ ರಹಾನೆ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ’ಹೋದ ಎರಡೂ ಟೆಸ್ಟ್‌ಗಳಲ್ಲಿ ಒದಗಿಸಲಾಗಿದ್ದ ಪಿಚ್‌ಗಳು ಒಂದೇ ತೆರನಾಗಿದ್ದವು. ಆದರೆ ಹಗಲು ರಾತ್ರಿ ಪಂದ್ಯದಲ್ಲಿ ಬಳಸಲಾದ ಪಿಂಕ್ ಬಾಲ್ ಕೆಂಪು ಚೆಂಡಿಗಿಂತಲ ಹೆಚ್ಚು ವೇಗ ಮತ್ತು ಚುರುಕಾದ ಚಲನೆ ಹೊಂದಿತ್ತು. ಎರಡೂ ಚೆಂಡುಗಳಲ್ಲಿ ಆಡುವ ಶೈಲಿಯು ತುಸು ಭಿನ್ನವಾಗುತ್ತದೆ. ಅದಕ್ಕೆ ನಾವು ಒಗ್ಗಿಕೊಳ್ಳಬೇಕು‘ ಎಂದರು.

ಅಹಮದಾಬಾದಿನ ಮೊಟೇರಾದ ಪಿಚ್‌ನಲ್ಲಿ ನಡೆದಿದ್ದ ಪಂದ್ಯವು ಎರಡೇ ದಿನಗಳಲ್ಲಿ ಮುಕ್ತಾಯವಾಗಿತ್ತು. ಭಾರತವು ಗೆದ್ದಿತ್ತು. ಸ್ಪಿನ್ ಬೌಲರ್‌ಗಳು ಮೆರೆದಿದ್ದರು. ಅದರಿಂದಾಗಿ ಟೆಸ್ಟ್ ಕ್ರಿಕೆಟ್ ಆಡಲು ಪಿಚ್ ಯೋಗ್ಯವಲ್ಲ ಎಂದು ಹಲವು ಮಾಜಿ ಕ್ರಿಕೆಟಿಗರು ಟೀಕಿಸಿದ್ದರು.


ಅಜಿಂಕ್ಯ ರಹಾನೆ

’ವಿದೇಶಗಳಲ್ಲಿರುವ ’ಒದ್ದೆ’ ಪಿಚ್‌ಗಳ ಬಗ್ಗೆ ಯಾರೂ ಮಾತನಾಡುವುದಿಲ್ಲ. ಅಲ್ಲಿಯ ಪಿಚ್‌ಗಳಲ್ಲಿ ಚೆಂಡು ಪುಟಿಯುವ ಪ್ರಮಾಣ, ಚಲಿಸುವ ವೇಗದ ಬಗ್ಗೆ ಚರ್ಚೆಗಳು ನಡೆಯುವುದಿಲ್ಲ. ಆದರೆ ಅವುಗಳನ್ನು ಆಡುವ ಕೌಶಲದ ಕುರಿತು ಮಾತುಗಳು ಕೇಳಿಬರುತ್ತವೆ. ಆದ್ದರಿಂದ ಮಾತನಾಡುವವರನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಬೇರೆ ದೇಶಗಳಲ್ಲಿ ಪಂದ್ಯದ ಮೊದಲ ದಿನ ಪಿಚ್‌ನಲ್ಲಿ ತೇವಾಂಶ ಹೆಚ್ಚಿರುತ್ತದೆ. ಹುಲ್ಲಿನ ಪ್ರಮಾಣವೂ ಹೆಚ್ಚಿರುತ್ತದೆ. ಅದರಿಂದಾಗಿ ಚೆಂಡಿನ ವೇಗ ಹೆಚ್ಚಾಗಿರುತ್ತದೆ. ಆದರೆ ಪಿಚ್ ತುಸು ಒಣಗಲು ಆರಂಭಿಸಿದಾಗ ಚೆಂಡು ಅನಿರೀಕ್ಷಿತವಾಗಿ ಪುಟಿಯುತ್ತದೆ. ಅಪಾಯಕಾರಿಯಾಗಿರುತ್ತದೆ. ಆಗ ನಾವೆಂದೂ ದೂರು ನೀಡಿಲ್ಲ ಮತ್ತು ಆ ಕುರಿತು ಮಾತನಾಡಿಲ್ಲ‘ ಎಂದು ರಹಾನೆ ವಿವರಿಸಿದರು.

‘ಸೈನಾ ಚಿತ್ರದ ಪೋಸ್ಟರ್ ಟೆನಿಸ್–ಬ್ಯಾಡ್ಮಿಂಟನ್ ಮಿಶ್ರಣ’

ಬೆಂಗಳೂರು: ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಜೀವನಕಥೆಯನ್ನು ಆಧರಿಸಿದ ಚಿತ್ರ ‘ಸೈನಾ’ ಬಿಡುಗಡೆಗೂ ಮೊದಲೇ ‘ಪ್ರಮಾದ’ದ ಕಾರಣದಿಂದ ಸುದ್ದಿಯಲ್ಲಿದೆ.

ಅಮೋಲ್ ಗುಪ್ತೆ ನಿರ್ದೇಶನದ ಈ ಚಿತ್ರದಲ್ಲಿ ಪರಿಣಿತಿ ಚೋಪ್ರಾ ಮುಖ್ಯ ಪಾತ್ರದಲ್ಲಿ ನಟಿಸಿದ್ದು, ಮಾರ್ಚ್ 26ರಂದು ಬಿಡುಗಡೆಯಾಗಬೇಕಿದೆ. ಸಿನಿಮಾದ ಪೋಸ್ಟರ್‌ನಲ್ಲಿರುವ ಷಟಲ್ ಚಿತ್ರವು, ಸೈನಾ ಅವರ ಬ್ಯಾಡ್ಮಿಂಟನ್ ಹಾಗೂ ಸಾನಿಯಾ ಮಿರ್ಜಾ ಅವರ ಟೆನಿಸ್ ಕ್ರೀಡೆಯ ಮಿಶ್ರಣದಂತಿದೆ ಎಂದು ಟ್ವಿಟರ್‌ನಲ್ಲಿ ಟೀಕಿಸಲಾಗಿದೆ.

ಈ ಚಿತ್ರವು ಬ್ಯಾಡ್ಮಿಂಟನ್‌ಗಿಂತ ಟೆನಿಸ್‌ಅನ್ನೇ ಹೆಚ್ಚು ಹೋಲುತ್ತಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ವ್ಯಂಗ ಮಾಡಲಾಗಿದೆ. ‘ಚಿತ್ರದ ಕಥೆಯೂ ಸೈನಾ ಹಾಗೂ ಸಾನಿಯಾ ಅವರ ಜೀವನ ಕಥೆಗಳ ಮಿಶ್ರಣವಾಗದಿರುವ ವಿಶ್ವಾಸವಿದೆ‘ ಎಂದು ಟ್ವಿಟರ್‌ನಲ್ಲಿ ಒಬ್ಬರು ಬರೆದುಕೊಂಡಿದ್ದಾರೆ.

ಐಸಿಸಿ ತಿಂಗಳ ಆಟಗಾರ: ಅಶ್ವಿನ್, ರೂಟ್‌ಗೆ ಕೈಲ್ ಪೈಪೋಟಿ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ಯ ತಿಂಗಳ ಆಟಗಾರ ಗೌರವ ಗಳಿಸಲು ಮೂವರು ಪ್ರಮುಖ ಆಟಗಾರರು ಸ್ಪರ್ಧೆಯಲ್ಲಿದ್ದಾರೆ.

ಪ್ರತಿ ತಿಂಗಳೂ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದವರನ್ನು ಗೌರವಿಸುವ ಕಾರ್ಯಕ್ರಮವನ್ನು ಹೋದ ತಿಂಗಳಷ್ಟೇ ಐಸಿಸಿ ಆರಂಭಿಸಿದೆ. ಇದೀಗ ಫೆಬ್ರುವರಿ ತಿಂಗಳ ಆಟಗಾರರನ್ನು ನಾಮನಿರ್ದೇಶನ ಮಾಡಿದೆ. ಅದರಲ್ಲಿ ಭಾರತದ ಆಫ್‌ಸ್ಪಿನ್ನರ್ ಆರ್. ಅಶ್ವಿನ್, ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಮತ್ತು ವೆಸ್ಟ್ ಇಂಡೀಸ್‌ನ ಯುವ ಆಟಗಾರ ಕೈಲ್ ಮೇಯರ್ಸ್ ಸ್ಪರ್ಧೆಯಲ್ಲಿದ್ದಾರೆ.

ಅಶ್ವಿನ್ ಹೋದ ತಿಂಗಳು ಚೆನ್ನೈನಲ್ಲಿ ನಡೆದ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್‌ನಲ್ಲಿ ಶತಕ ಬಾರಿಸಿದ್ದರು ಮತ್ತು ಐದು ವಿಕೆಟ್ ಗೊಂಚಲೂ ಗಳಿಸಿದ್ದರು. ಅಹಮದಾಬಾದ್ ಟೆಸ್ಟ್‌ನಲ್ಲಿಯೂ ಉತ್ತಮ ಬೌಲಿಂಗ್ ಮಾಡಿದ್ದರು. ವೃತ್ತಿಜೀವನದ 400ನೇ ವಿಕೆಟ್ ಅನ್ನೂ ಇಲ್ಲಿ ಗಳಿಸಿದ್ದರು. ಎರಡೂ ಪಂದ್ಯಗಳಲ್ಲಿ ಭಾರತ ಜಯಿಸಿತ್ತು.


ಅಶ್ವಿನ್

‘ಈ ಅವಧಿಯಲ್ಲಿ 176 ರನ್ ಮತ್ತು 24 ವಿಕೆಟ್‌ಗಳನ್ನು ಗಳಿಸಿರುವ ಅಶ್ವಿನ್ ಪುರುಷರ ವಿಭಾಗದಲ್ಲಿ ನಾಮನಿರ್ದೇಶನಗೊಂಡಿದ್ದಾರೆ’ ಎಂದು ಐಸಿಸಿ ಮಾಹಿತಿ ನೀಡಿದೆ.

ರಾಷ್ಟ್ರೀಯ ರೋಡ್ ಸೈಕ್ಲಿಂಗ್: ಕರ್ನಾಟಕ ತಂಡ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈನಲ್ಲಿ ಇದೇ ಐದರಿಂದ ಎಂಟರವರೆಗೆ ನಡೆಯಲಿರುವ ರಾಷ್ಟ್ರೀಯ ಸೀನಿಯರ್, ಜೂನಿಯರ್ ಮತ್ತು ಸಬ್ ಜೂನಿಯರ್ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡಗಳನ್ನು ಮಂಗಳವಾರ ಪ್ರಕಟಿಸಲಾಗಿದೆ.

22 ಬಾಲಕರು ಹಾಗೂ 15 ಬಾಲಕಿಯರನ್ನು ಒಳಗೊಂಡ ತಂಡ ಬುಧವಾರ ಪ್ರಯಾಣ ಬೆಳೆಸಲಿದೆ ಎಂದು ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಶೈಲ ಎಂ ಕುರಣಿ ತಿಳಿಸಿದ್ದಾರೆ.

ತಂಡಗಳು: ಪುರುಷ ಹಾಗೂ ಬಾಲಕರ ವಿಭಾಗ: ಸುಜಲ್ ಜಾಧವ್, ರಾಹುಲ್ ರಾಠೋಡ್, ಪ್ರತಾಪ ಪಡಚಿ, ಉದಯ ಗುಳೇದ, ಅನಿಲ ಕಾಳಪ್ಪಗೋಳ, ಮನೋಜ್ ಭಾಟಿ ಮತ್ತು ಶ್ರೀಶೈಲ ವೀರಾಪುರ (ಎಲ್ಲರೂ ವಿಜಯಪುರ ಕ್ರೀಡಾನಿಲಯ), ಸಂಪತ್ ಪಾಸಮೇಲ, ಮಲ್ಲಿಕಾರ್ಜುನ ಯಾದವಾಡ, (ಬಾಗಲಕೋಟೆ ಜಿಲ್ಲೆ), ನಿತೀಶ್ ಪೂಜಾರ, ವಿಶ್ವನಾಥ ಗಡಾದ, ಅಭಿಷೇಕ್ ಮರನೂರ, ಸಂತೋಷ ವಿಜಾಪುರ, ಗಣೇಶ ಕುಡಿಗಾನೂರ ಮತ್ತು ಯಲಗೂರಪ್ಪ ಗಡ್ಡಿ (ವಿಜಯಪುರ ಜಿಲ್ಲೆ), ನವೀನ್ ಜಾನ್, ನವೀನ್ ರಾಜ್, ಕಿರಣ್ ಕುಮಾರ್ ರಾಜು, ಗಗನ್ ರೆಡ್ಡಿ (ಬೆಂಗಳೂರು ಜಿಲ್ಲೆ), ವೈಶಾಖ ಕೆ.ವಿ (ಮೈಸೂರು ಜಿಲ್ಲೆ), ವಿನೋದ ಪಂಡ್ರಿ (ಗದಗ ಜಿಲ್ಲೆ) ಶೆಟ್ಟೆಪ್ಪ ಗಸ್ತಿ (ಬೆಳಗಾವಿ ಜಿಲ್ಲೆ); ಮ್ಯಾನೇಜರ್: ಬಸವರಾಜ ಗುಳೇದ, ಕೋಚ್: ಮುತ್ತಪ್ಪ ಮರನೂರ ಮತ್ತು ವಿಠ್ಠಲ ಬೋರ್ಜಿ.

ಮಹಿಳೆಯರು ಮತ್ತು ಬಾಲಕಿಯರ ವಿಭಾಗ: ಅಕ್ಷತಾ ಭೂತನಾಳ, (ವಿಜಯಪುರ ಜಿಲ್ಲೆ) ಪಾಯಲ್ ಚವ್ಹಾಣ, ಸೌಮ್ಯಾ ಅಂತಾಪುರ, ಕಾವೇರಿ ಮುರನಾಳ (ಎಲ್ಲರೂ ವಿಜಯಪುರ ಕ್ರೀಡಾನಿಲಯ), ಸವಿತಾ ಆಡಗಲ್, ನಂದಾ ಚಿಚಖಂಡಿ (ಬಾಗಲಕೋಟೆ ಕ್ರೀಡಾ ನಿಲಯ), ಕೀರ್ತಿ ರಂಗಸ್ವಾಮಿ (ಬೆಂಗಳೂರು ಜಿಲ್ಲೆ) ಅನುಪಮಾ ಗುಳೇದ, ವಿದ್ಯಾ ಯಾದವಾಡ, ಚೈತ್ರಾ ಬೋರ್ಜಿ, ನಿವೇದಿತಾ ಕೊಕ್ಕನವರ, ಭಾಗ್ಯಶ್ರೀ ಮಠಪತಿ, ಭಾವನಾ ಪಾಟೀಲ, ದಾನಮ್ಮ ಚಿಚಖಂಡಿ, ಸಾವಿತ್ರಿ ಹೆಬ್ಬಾಳಟ್ಟಿ (ಎಲ್ಲರೂ ಬಾಗಲಕೋಟೆ ಜಿಲ್ಲೆ) ಮ್ಯಾನೇಜರ್: ಮೌನಪ್ಪ ಬಡಿಗೇರ, ಕೋಚ್: ಅಲ್ಕಾ ಫಡತಾರೆ.

ಬಾಕ್ಸಿಂಗ್: ಎಂಟರಘಟ್ಟಕ್ಕೆ ಮೇರಿ ಕೋಮ್, ಅಮಿತ್

ನವದೆಹಲಿ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್, ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಅಮಿತ್ ಪಂಗಲ್ ಸೇರಿದಂತೆ ಭಾರತದ 13 ಮಂದಿ ಬಾಕ್ಸರ್‌ಗಳು ಸ್ಪೇನ್‌ನ ಬಾಕ್ಸಮ್ ಬಾಕ್ಸಿಂಗ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಹಂತದಲ್ಲಿದ್ದಾರೆ. ಮಂಗಳವಾರ ಟೂರ್ನಿಯ ಡ್ರಾ ಪ್ರಕಟವಾಗಿದ್ದು, ಸ್ಪರ್ಧಿಗಳ ಸಂಖ್ಯೆ ಕಡಿಮೆ ಇರುವುದರಿಂದ ಇವರೆಲ್ಲರಿಗೂ ನೇರವಾಗಿ ಎಂಟರ ಘಟ್ಟದಲ್ಲಿ ಸ್ಥಾನ ಸಿಕ್ಕಿದೆ.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿರುವ ಒಂಬತ್ತು ಹಾಗೂ ಇತರ ಐದು ಮಂದಿ ಸೇರಿದಂತೆ ಭಾರತದ 14 ಬಾಕ್ಸರ್‌ಗಳು ಟೂರ್ನಿಯಲ್ಲಿ ಅದೃಷ್ಟ ಪರೀಕ್ಷಿಸಲಿದ್ದಾರೆ.

ಮಹಿಳೆಯರ 51 ಕೆಜಿ ವಿಭಾಗದಲ್ಲಿ ಮೇರಿ ಕೋಮ್ ಅವರು ಬುಧವಾರ ಮೊದಲ ಬೌಟ್‌ನಲ್ಲಿ ಇಟಲಿಯ ಜಿಯೊರ್ಡಾನ ಸೊರೆಂಟಿನೊ ಅವರ ಎದುರು ಸೆಣಸಲಿದ್ದಾರೆ. ಹೋದ ವರ್ಷ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ಬಳಿಕ, ಇದೇ ಮೊದಲ ಬಾರಿ ಅವರು ಕಣಕ್ಕಿಳಿಯುತ್ತಿದ್ದಾರೆ.



ಮೇರಿ ಕೋಮ್

ಪುರುಷರ 52 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಪಂಗಲ್, ಸ್ಥಳೀಯ ಬಾಕ್ಸರ್ ಗೇಬ್ರಿಯಲ್ ಎಸ್ಕೋಬಾರ್ ಎದುರು ಪೈಪೋಟಿ ನಡೆಸಲಿದ್ದಾರೆ. ಮೊದಲ ಸುತ್ತಿನಲ್ಲಿ ಅವರಿಗೆ ಬೈ ಸಿಕ್ಕಿದೆ. ವಿಕಾಸ್ ಕೃಷ್ಣ (69 ಕೆಜಿ) ಅವರಿಗೂ ಮೊದಲ ಸುತ್ತಿನಲ್ಲಿ ಬೈ ಲಭಿಸಿದ್ದು, ಎಂಟರ ಘಟ್ಟದ ಹಣಾಹಣಿಯಲ್ಲಿ ಇಟಲಿಯ ವಿನ್ಸೆಂಜೊ ಮ್ಯಾಂಗಿಯಾಕಾಪರ್ ಅವರನ್ನು ಎದುರಿಸಲಿದ್ದಾರೆ.

ಆಶಿಶ್ ಕುಮಾರ್ (75 ಕೆಜಿ), ಸುಮಿತ್ ಸಂಗ್ವಾನ್ (81 ಕೆಜಿ), ಸತೀಶ್ ಕುಮಾರ್ (+91 ಕೆಜಿ), ಸಂಜೀತ್ (91 ಕೆಜಿ) ಮತ್ತು ಮಹಿಳೆಯರ ಪೈಕಿ ಜಾಸ್ಮಿನ್, ಮನೀಷಾ (ಇಬ್ಬರೂ 57 ಕೆಜಿ), ಸಿಮ್ರನ್ ಜೀತ್ ಕೌರ್ (60 ಕೆಜಿ), ಲವ್ಲಿನಾ ಬೊರ್ಗೊಹೈನ್ (69 ಕೆಜಿ), ಪೂಜಾ ರಾಣಿ (75 ಕೆಜಿ) ಅವರು ಎಂಟರ ಘಟ್ಟ ತಲುಪಿದ ಭಾರತದ ಬಾಕ್ಸರ್‌ಗಳು.

ಟೆನಿಸ್: ಮತ್ತೆ ಜೊತೆಗೂಡಿದ 'ಇಂಡೊ–ಪಾಕ್ ಎಕ್ಸ್‌ಪ್ರೆಸ್'

ನವದೆಹಲಿ (ಪಿಟಿಐ): ಆರು ವರ್ಷಗಳ ನಂತರ ಭಾರತದ ಟೆನಿಸ್ ಪಟು ರೋಹನ್ ಬೋಪಣ್ಣ ಮತ್ತು ಪಾಕಿಸ್ತಾನದ ಐಸಾಮ್ ಉಲ್ ಹಕ್ ಖುರೇಷಿ ಜೊತೆಗೂಡಿ ಆಡಲಿದ್ದಾರೆ.

ಟೆನಿಸ್‌ನಲ್ಲಿ ಇಂಡೋ–ಪಾಕ್ ಎಕ್ಸ್‌ಪ್ರೆಸ್ ಎಂದೇ ಈ ಜೋಡಿ ಖ್ಯಾತವಾಗಿದೆ. ಇದೇ 15ರಿಂದ ಮೆಕ್ಸಿಕೊದಲ್ಲಿ ನಡೆಯಲಿರುವ ಅಕಾಪುಲ್ಕೊ ಎಟಿಪಿ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

2014ರಲ್ಲಿ ಈ ಜೋಡಿಯು ಶೇನಜಾನ್‌ನಲ್ಲಿ ನಡೆದಿದ್ದ ಎಟಿಪಿ 250 ಟೂರ್ನಿಯಲ್ಲಿ ಆಡಿತ್ತು. 2010ರಲ್ಲಿ ಬೋಪಣ್ಣ ಮತ್ತು ಹಕ್ ಅವರು ಅಮೆರಿಕ ಓಪನ್ ಡಬಲ್ಸ್ ಫೈನಲ್ ಪ್ರವೇಶಿಸಿದ್ದರು. ಬ್ರಯನ್ ಸಹೋದರರ ಮುಂದೆ ಸೋತಿದ್ದರು. ಆ ಸಂದರ್ಭದಲ್ಲಿ ಬೋಪಣ್ಣ–ಹಕ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನಕ್ಕೇರಿದ್ದರು.

2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಆಡುವ ಸಿದ್ಧತೆಗಾಗಿ ಬೋಪಣ್ಣ ಅವರು ಭಾರತದವರೇ ಆದ ಮಹೇಶ್ ಭೂಪತಿಯವರೊಂದಿಗೆ ಜೊತೆಯಾದರು. ಈ ಹಂತದಲ್ಲಿ ಹಕ್ ಅವರೊಂದಿಗೆ ಪಾಲುದಾರಿಕೆ ಮುರಿಯಿತು. ಅದಾಗಿ ಎರಡು ವರ್ಷಗಳ ನಂತರ ಮತ್ತೆ ಜೊತೆಗೂಡಿದರು. ಈಗ ಇಬ್ಬರಿಗೂ 40 ವರ್ಷ ವಯಸ್ಸು.

ಹೈದರಾಬಾದ್ ರೇಸ್

'ಡೌನ್‌ಟೌನ್ ಗಾಲ್' ಗೆಲ್ಲುವ ನಿರೀಕ್ಷೆ

ಒಣ್ಣು ಒಣ್ಣು ಒಣ್ಣು ಪ್ಲೇಟ್ ಬುಧವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, 'ಡೌನ್‌ಟೌನ್ ಗಾಲ್' ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.20ರಿಂದ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಪ್ರೌಡ್ 3, ಆಂಭೀಷಿಯಸ್ ಸ್ಟಾರ್ 1, ಹಾರ್ಡ್ ಟು ಟಾಸ್ 9
2ನೇ ರೇಸ್: ಸ್ವಾಮ್‌ಜೆಟ್ 10, ಪೋರ್ಟ್‌ಸ್ಟೀವರ್ಟ್ 4, ಲೈನ್‌ವೈಲರ್ 2
3ನೇ ರೇಸ್: ಸ್ಟನ್ನಿಂಗ್ ಫೋರ್ಸ್ 6, ಸಿಟಿ ಆಫ್ ಬ್ಲಿಸ್ 7, ಜಾಯ್ ಓ ಜಾಯ್ 9
4ನೇ ರೇಸ್: ಸದರ್ನ್ ಪ್ರಿನ್ಸೆಸ್ 1, ಅಡ್ವಾನ್ಸ್ಡ್ ಗಾರ್ಡ್ 3, ಟ್ರಂಪ್ ಸ್ಟಾರ್ 2
5ನೇ ರೇಸ್: ಮಿರಾನ 1, ಹೋರಸ್ 4, ಸ್ಪೈಸಿ ಸ್ಟಾರ್ 2
6ನೇ ರೇಸ್: ಡೌನ್‌ಟೌನ್‌ಗಾಲ್ 2, ಆಯುರ್ ಶಕ್ತಿ 8, ಕ್ರೇಜಿ ಹಾರ್ಸ್ 5
7ನೇ ರೇಸ್: ಟಪಾಟಿಯೋ 4, ಆರ್ಕೆಡಿಯನ್ ಏಂಜೆಲ್ 10, ರೈನ್ 3
8ನೇ ರೇಸ್: ಸಬ್‌ಲೈಮ್ 3, ಇಂಡಿಯಾಗೇಟ್ 1, ನ್ಯೂರೋಲ್ 2

ಉತ್ತಮ ಬೆಟ್: ಮಿರಾನ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಸೆಮಿಫೈನಲ್‌ಗೆ ನಿಕ್ಷೇಪ್

ಬೆಂಗಳೂರು: ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರು ಹೈದರಾಬಾದ್‌ನಲ್ಲಿ ನಡೆಯುತ್ತಿರುವ ಎಐಟಿಎ ರಾಷ್ಟ್ರೀಯ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು.

ಮಂಗಳವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಬೆಂಗಳೂರಿನ ಸುರಾನ ಕಾಲೇಜು ವಿದ್ಯಾರ್ಥಿ ನಿಕ್ಷೇಪ್, ಅಸ್ಸಾಂನ ಶೇಖ್ ಇಫ್ತಿಕಾರ್ ಜೊತೆಗೂಡಿ 6-2,6-0ರಿಂದ ಕರ್ನಾಟಕದ ಸಿದ್ಧಾರ್ಥ್



ಬಿ.ಆರ್.ನಿಕ್ಷೇಪ್

ಗಂಗಾತ್ಕರ್ ಹಾಗೂ ತಮಿಳುನಾಡಿನ ಪ್ರಾಣೇಶ್ ಬಾಬು ಅವರನ್ನು ಮಣಿಸಿದರು.

ನಾಲ್ಕರ ಘಟ್ಟದಲ್ಲಿ ನಿಕ್ಷೇಪ್ ಜೋಡಿಗೆ ತೆಲಂಗಾಣದ ಶಿವದೀಪ್ ಕೋಸರಾಜು–ಎ.ಕೆ.ರೋಹಿತ್ ಸವಾಲು ಎದುರಾಗಿದೆ.







